ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜೂನ್ 2025
ಬೆಲೆ ರೂ.1

## ಜಗಜ್ಯೋತಿ ಬಸವಣ್ಣ ಮತ್ತು ಜಗನ್ಮಾತೆ ಅಕ್ಕಮಹಾದೇವಿ ಜಯಂತಿ ಆಚರಣೆ






ಕ್ರಿಕೆಟ್ ಪಂದ್ಯಾವಳಿ 2025ರ ಚಾಂಪಿಯನ್ಸ್–'ಕನ್ನಡ ಗೆಳೆಯರು' ವಿನ್ನರ್ಸ್ ಟ್ರೋಫಿ ಸ್ವೀಕರಿಸಿದ ಕ್ಷಣ

## ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿ ಆಚರಣೆ ಕಾರ್ಯಕ್ರಮದ ದೃಶ್ಯಗಳು













# ಅಭಿಮತ

ದೆಹಲಿ ಕರ್ನಾಟಕ ಸಂಘದ

ಸಂಪುಟ 35 । ಸಂಚಿಕೆ 9

ಜೂನ್ 2025



**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ
ಕೆ.ಎಸ್. ಮೂರ್ತಿ

ಸದಸ್ಯರು
ಸರವು ಕೃಷ್ಣ ಭಟ್
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಜಿ.ಆರ್.
ಎಸ್. ರಮೇಶ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ–2024–26**

ಅಧ್ಯಕ್ಷರು
ಸಿ.ಎಂ. ನಾಗರಾಜ
9811325440

ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಪೂಜಾ ಪಿ. ರಾವ್
9810882498

ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183

ಖಜಾಂಚಿ
ಆಶಾಲತಾ ಎಂ.
9891249149

ಜಂಟಿ ಕಾರ್ಯದರ್ಶಿಗಳು
ನಾರಾಯಣ ಬಿ.
9868393978
ಅಶ್ವಿನಿ ಬಿ.ಎಸ್.
9036235665

ಸಮಿತಿ ಸದಸ್ಯರು
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಕೆ.ಎಸ್. ಮೂರ್ತಿ
9871140222
ಪ್ರಭಾಕರ ಮಡ್ಡಿತೋಟ್
9910091978
ನವೀನ್ ಕುಮಾರ್ ವಿ.
9871945819
ಅರುಣ್ ಸಿ.ಎಸ್.
9741282211
ಜಯಶ್ರೀ ಬಸವರಾಜು ಬಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಮಾಲಿನಿ ಪ್ರಹ್ಲಾದ
9910269085
ಎನ್.ಆರ್. ಶ್ರೀನಾಥ
7836954402
ಶಶಿಕಾಂತ ಪಿ. ಪಾಟೀಲ್
9650182413


# ಸಂಪಾದಕರ ಮನದಾಳದಿಂದ...

## ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಮಾಡೋಣ ದಿನನಿತ್ಯ ಯೋಗ, ಅದರ ನಿರಂತರ ಅಭ್ಯಾಸದಿಂದ ಪಡೆಯೋಣ ಆರೋಗ್ಯ ಭಾಗ್ಯ

ಆತ್ಮೀಯ ಕನ್ನಡ ಪ್ರೇಮಿ ಓದುಗರೇ, ನಿಮಗೆಲ್ಲರಿಗೂ **ವಿಶ್ವ ಪರಿಸರ ದಿನಾಚರಣೆ** ಮತ್ತು **ಅಂತರರಾಷ್ಟ್ರೀಯ ಯೋಗ ದಿನಾಚರಣೆ**ಯ ಹಾರ್ದಿಕ ಶುಭಾಶಯಗಳು ಮತ್ತು ಅಭಿನಂದನೆಗಳು.

ಹಸಿರೇ ನಮ್ಮ ಉಸಿರು, ಕಾಡಿದ್ದರೆ ನಾಡು, ನಮಗೆ ಜನ್ಮ ಕೊಟ್ಟ ತಾಯಿ ಮತ್ತು ಜನ್ಮಭೂಮಿ ಸ್ವರ್ಗಕ್ಕೂ ಮಿಗಿಲು, ಪ್ರಕೃತಿಯ ನಾಶ ಮನುಕುಲದ ವಿನಾಶ–ಹೀಗೆ ಈ ಪ್ರಪಂಚದಲ್ಲಿ ವಾಯು, ನೆಲ, ಜಲ, ಗಿಡಮರಗಳು, ಪ್ರಾಣಿ ಪಕ್ಷಿ ಸಂಕುಲನ ಮತ್ತು ಮಾನವರಿರುವ ಪ್ರಕೃತಿಯ ರಕ್ಷಣೆ ನಮ್ಮೆಲ್ಲರ ಗುರುತರ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಜೂನ್ 5 ರಂದು ಆಚರಿಸುವ ವಿಶ್ವ ಪರಿಸರ (WED) ದಿನವು ಪರಿಸರ ಸಂರಕ್ಷಣೆಗಾಗಿ ಜಾಗೃತಿ ಮತ್ತು ಕ್ರಮವನ್ನು ಪ್ರೋತ್ಸಾಹಿಸುತ್ತದೆ. 53 ವರ್ಷಗಳ ಹಿಂದೆ ಜೂನ್ 5, 1972ರಲ್ಲಿ ಸ್ಟಾಕ್ಹೋಲ್ಮ್‌ನ ಅಧಿವೇಶನದಲ್ಲಿ ವಿಶ್ವಸಂಸ್ಥೆಯು ವಿಶ್ವ ಪರಿಸರ ದಿನಾಚರಣೆ ಮಾಡುವುದನ್ನು ಘೋಷಿಸಿತ್ತು. ಪ್ರತಿ ವರ್ಷ ಒಂದು ಧ್ಯೇಯ ವಾಕ್ಯದೊಂದಿಗೆ ಆಯ್ಕೆಯಾದ ಅತಿಥೇಯ ರಾಷ್ಟ್ರ–ನಗರದ ಮುಂದಾಳತ್ವದಲ್ಲಿ ಪ್ರಪಂಚದಲ್ಲೆಡೆ ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ. ಅದರಂತೆ ಈ ವರ್ಷವೂ ನಮ್ಮ ದೇಶವು ಸೇರಿದಂತೆ 143 ಸದಸ್ಯ ರಾಷ್ಟ್ರಗಳು **'ಪ್ಲಾಸ್ಟಿಕ್ ಮಾಲಿನ್ಯವನ್ನು ಸೋಲಿಸಿ'** ಎಂಬ ಥೀಮ್‌ನೊಂದಿಗೆ ವಿಶ್ವ ಪರಿಸರ ದಿನವನ್ನು ಆಚರಿಸಿವೆ. ಪ್ಲಾಸ್ಟಿಕ್ ಮಣ್ಣನ್ನು ಕಲುಷಿತಗೊಳಿಸುತ್ತದೆ, ನೀರಿನ ಮೂಲಗಳನ್ನು ನಿರ್ಬಂಧಿಸುತ್ತದೆ, ಹವಾಮಾನ ಬಿಕ್ಕಟ್ಟು ಉಂಟು ಮಾಡುತ್ತದೆ ಮತ್ತು ಪರಿಸರ ವ್ಯವಸ್ಥೆಗಳಿಗೆ ಹಾನಿ ಮಾಡುತ್ತದೆ. ಅನೇಕ ರಾಜ್ಯಗಳಲ್ಲಿ 'ಪ್ಲಾಸ್ಟಿಕ್ ಸೆ ದೂರಿ ಪರ್ಯಾವರಣ್ ಕೆ ಸಂರಕ್ಷಣ್ ಜರೂರಿ' ಮತ್ತು 'ಏಕ್ ಪೇಡ್ ಮಾ ಕೆ ನಾಮ್' ಎಂಬ ಘೋಷಣೆಗಳೊಂದಿಗೆ ಪ್ಲಾಸ್ಟಿಕ್ ತ್ಯಜಿಸುವ ಅಭಿಯಾನ ಮತ್ತು ತಾಯಿಗಾಗಿ ಒಂದು ಗಿಡವನ್ನು ನೆಡುವ ವನಮಹೋತ್ಸವ ಕಾರ್ಯಕ್ರಮಗಳೂ ನಡೆದಿವೆ. ಆದ್ದರಿಂದ ನಾವುಗಳು ಹಿಂದೆ ಇದ್ದ 3R (Reduce, Reuse & Recycle)ಗಳ ಜೊತೆ ಇನ್ನು 2R (Refuse and Rethink) ಜೋಡಿಸಿ ಜಾಗತಿಕವಾಗಿ ಪ್ಲಾಸ್ಟಿಕ್ ಮಾಲಿನ್ಯದಿಂದ ಮುಕ್ತವಾಗುವ ದಿಸೆಯಲ್ಲಿ ಪ್ರಯತ್ನಿಸಬೇಕಿದೆ.



ಬಂಧುಗಳೇ, ಈ ವರ್ಷ 11ನೇ ಅಂತರರಾಷ್ಟ್ರೀಯ ಯೋಗ ದಿನ(IDY)ವನ್ನು **"ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ"** ಎಂಬ ಥೀಮ್‌ನೊಂದಿಗೆ ಆಚರಿಸಲಾಗಿದೆ. 2014 ರಲ್ಲಿ ವಿಶ್ವ ಸಂಸ್ಥೆಯಲ್ಲಿ ನೀಡಿದ ಭಾಷಣದಲ್ಲಿ ನಮ್ಮ ಪ್ರಧಾನಿ ಯೋಗದ ಮಹತ್ವದ ಬಗ್ಗೆ ಪ್ರಸ್ತಾಪಿಸಿ 177 ರಾಷ್ಟ್ರಗಳ ಒಮ್ಮತದಿಂದ ಉತ್ತರ ಗೋಳಾರ್ಧದಲ್ಲಿ ವರ್ಷದ ಅತಿ ದೊಡ್ಡ ದಿನವಾದ **"ಜೂನ್ 21ನ್ನು ಅಂತರರಾಷ್ಟ್ರೀಯ ಯೋಗ ದಿನವೆಂದು ವಿಶ್ವಸಂಸ್ಥೆ"** ಘೋಷಿಸಿತ್ತು. ಯೋಗವು ಪ್ರಪಂಚಕ್ಕೆ ಭಾರತವು ನೀಡಿದ ಅತ್ಯಂತ ಪ್ರಾಚೀನವಾದ ಮತ್ತು ಅಮೂಲ್ಯವಾದ ಕೊಡುಗೆ. ಪ್ರಾಣಾಯಾಮ, ಯೋಗಾಸನ ಮತ್ತು ಯೋಗಧ್ಯಾನ ದೇಹವನ್ನು ಬಲಪಡಿಸುತ್ತದೆ, ಮನಸ್ಸನ್ನು ಶಾಂತಗೊಳಿಸುತ್ತದೆ, ಆತ್ಮವನ್ನು ನಿರ್ಮಲಗೊಳಿಸುತ್ತದೆ ಮತ್ತು ದೈನಂದಿನ ಜೀವನದಲ್ಲಿ ಅರಿವು ಮತ್ತು ಜವಾಬ್ದಾರಿಯ ಉನ್ನತ ಪ್ರಜ್ಞೆಯನ್ನು ಬೆಳೆಸುತ್ತದೆ. Yoga teaches you to fight without fighting and the art of balancing mind and body, ಜೊತೆಗೆ, ನಮ್ಮ ಭೂಮಿಯ ಬಗ್ಗೆ ಕಾಳಜಿ ವಹಿಸಲು, ತನ್ಮೂಲಕ ವಸುಧೈವ ಕುಟುಂಬಕಂ–ಜಗತ್ತು ಒಂದು ಫ್ಯಾಮಿಲಿ ಎಂಬ ಶಾಶ್ವತ ಭಾರತೀಯ ನೀತಿಯನ್ನು ಪ್ರತಿಬಿಂಬಿಸಲು ನಮ್ಮನ್ನು ಪ್ರೇರೇಪಿಸುತ್ತದೆ. 11ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ರಾಜಧಾನಿ ದೆಹಲಿ, ಕರ್ನಾಟಕವೂ ಸೇರಿದಂತೆ ದೇಶದ ಎಲ್ಲ ರಾಜ್ಯಗಳಲ್ಲಿ, ಹೊರದೇಶಗಳಲ್ಲಿ ಬಹಳ ಹರ್ಷೋಲ್ಲಾಸದಿಂದ ಆಚರಿಸಲಾಗಿದೆ. ನಮ್ಮ ಪ್ರಧಾನಿಯವರು ವಿಶಾಖಪಟ್ಟಣದಲ್ಲಿರುವ ರಾಮಕೃಷ್ಣ ಬೀಚ್‌ನ ಬಳಿ 3 ಲಕ್ಷಕ್ಕೂ ಹೆಚ್ಚು ಜನರ ಜೊತೆ ಯೋಗದಿನವನ್ನು ಆಚರಿಸಿದ್ದಾರೆ. ದೆಹಲಿಯ ಮುಖ್ಯಮಂತ್ರಿಗಳು ನಗರದ ವಿವಿಧ 11 ಐಕಾನಿಕ್ ಜಾಗಗಳಲ್ಲಿ ಪ್ರತಿಯೊಂದು ಕಡೆ 1000ಕ್ಕೂ ಹೆಚ್ಚು ಜನರನ್ನು ಸೇರಿಸಿ ಸಂಭ್ರಮಿಸಿದ್ದಾರೆ. ಈ ದಿನದಂದು ನಮ್ಮ ದೆಹಲಿ ಕರ್ನಾಟಕ ಸಂಘದಲ್ಲಿಯೂ ಸಹಾ ನವದೆಹಲಿಯ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆಯ ಸಹಭಾಗಿತ್ವದಲ್ಲಿ ಕೇಂದ್ರ ಆಯುಷ್ ಮಂತ್ರಾಲಯದ ಸಂಯುಕ್ತಾಶ್ರಯದಲ್ಲಿ "ಹರಿತ್ ಯೋಗ" ಎಂಬ ಪರಿಕಲ್ಪನೆಯೊಂದಿಗೆ ಇಲ್ಲಿನ ನೂರಕ್ಕೂ ಹೆಚ್ಚು ಕನ್ನಡಿಗರೊಂದಿಗೆ ಪ್ರಪ್ರಥಮ ಬಾರಿ ಆಚರಿಸಿದ್ದು ಯೋಗಾಯೋಗವೇ.

ಇನ್ನು, ಇತ್ತೀಚಿಗೆ ನಡೆದ 2025ರ ಐಪಿಎಲ್ ಟಿ–20 ಟೂರ್ನಮೆಂಟ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಫೈನಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು 6 ರನ್ನುಗಳಿಂದ ಮಣಿಸಿ ಪ್ರಪ್ರಥಮ ಬಾರಿ ಟ್ರೋಫಿಯನ್ನ ತನ್ನದಾಗಿಸಿಕೊಂಡಿದೆ. ಯಾವಾಗಲೂ ಕಪ್ ನಮ್ದೇ ಎನ್ನುತ್ತಿದ್ದರೂ, ಗೆಲ್ಲದಿದ್ದ ಈ ತಂಡ, ಈ ಬಾರಿ ಗೆದ್ದು ಕಪ್ ನಮ್ಮದು ಎಂದು ಹೆಮ್ಮೆಪಟ್ಟಿದೆ. ಆರ್‌ಸಿಬಿ ತಂಡಕ್ಕೆ ದೆಹಲಿ ಕರ್ನಾಟಕ ಸಂಘದಿಂದ ಶುಭಾಶಯಗಳು. ಹಾಗೇನೇ, ನಮ್ಮ ಸಂಘದ 2025ರ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕನ್ನಡ ಗೆಳೆಯರು ತಂಡವು ಕರ್ನಾಟಕ ಕಮಾಂಡೋಸ್ ತಂಡವನ್ನು ಒಂದು ರನ್ನಿನಿಂದ ಮಣಿಸಿ ಚಾಂಪಿಯನ್ಸ್ ಆಗಿದೆ. ವಿನ್ನರ್ಸ್ ಮತ್ತು ರನ್ನರ್ಸ್ ತಂಡಗಳಿಗೆ ಮತ್ತು ಭಾಗವಹಿಸಿದ ಉಳಿದ 14 ತಂಡಗಳು ಮತ್ತು ಎಲ್ಲಾ ಆಟಗಾರರಿಗೆ ಹಾರ್ದಿಕ ಅಭಿನಂದನೆಗಳು.

ಆತ್ಮೀಯರೇ, ಕಳೆದ ಮೇ ತಿಂಗಳಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಸಂಘದಿಂದ ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಕ್ರಿಕೆಟ್ ಪಂದ್ಯಾವಳಿ, ಜಗಜ್ಯೋತಿ ಬಸವಣ್ಣ ಮತ್ತು ಜಗನ್ಮಾತೆ ಅಕ್ಕಮಹಾದೇವಿ ಜಯಂತಿ, ಅಗಲಿದ ಶ್ರೀ ಎಸ್.ಎಸ್. ಜವಳಿ ಅವರಿಗೆ ನೀಡಿದ ನುಡಿ ನಮನದ ಶ್ರದ್ಧಾಂಜಲಿ, ಸಭಾಂಗಣದಲ್ಲಿ ನೂತನವಾಗಿ ಅಳವಡಿಸಿದ ಪ್ರೊಜೆಕ್ಟರ್ ಮತ್ತು ಸೌಂಡ್ ಸಿಸ್ಟಮ್‌ನಲ್ಲಿ ಎರಡು ಕನ್ನಡ ಚಲನಚಿತ್ರಗಳ ಪ್ರದರ್ಶನ ಹಾಗು ದೆಹಲಿಯಲ್ಲಿನ ತಮ್ಮ ಸೇವಾ ನಿವೃತ್ತಿಯ ನಂತರ ತಾಯ್ನಾಡಿಗೆ ತೆರಳುತ್ತಿರುವ ಸಂಘದ ಆಜೀವ ಸದಸ್ಯರಿಗೆ ನೀಡಿದ ಬೀಳ್ಕೊಡುಗೆ ಕಾರ್ಯಕ್ರಮಗಳ ವರದಿಗಳನ್ನು ಮತ್ತು ಇತರ ಸ್ಥಳೀಯ ಸಂಘ ಸಂಸ್ಥೆಗಳ ಕಾರ್ಯಚಟುವಟಿಕೆಗಳ ವಿವರವನ್ನು ಈ ಜೂನ್ 2025ರ ಅಭಿಮತದಲ್ಲಿ ನೀಡಲಾಗಿದೆ. ಜೊತೆಗೆ, ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ಆರೋಗ್ಯವೇ ಭಾಗ್ಯ ಅಂಕಣದಲ್ಲಿ ಜೈಪುರದ ಎಂ.ಜಿ.ಎಂ.ಟಿ. ವಿಶ್ವವಿದ್ಯಾಲಯದಲ್ಲಿ ನಿರ್ದೇಶಕರು ಮತ್ತು ಪ್ರಾಧ್ಯಾಪಕರಾದ, ಹಿರಿಯ ಯೋಗ ತಜ್ಞ ಡಾ. ಈಶ್ವರ ವೀ. ಬಸವರಡ್ಡಿ ಅವರು ನೀಡಿರುವ ಯೋಗ ಕುರಿತ ವಿಶೇಷ ಲೇಖನ, ಈ ತಿಂಗಳ ವ್ಯಕ್ತಿ: ಶ್ರೀ ಎಸ್.ಕೆ. ಕುಲಕರ್ಣಿ ಅವರ ಕುರಿತು ಶ್ರೀ ಸರವು ಕೃಷ್ಣಭಟ್ ಅವರಿಂದ ಬರಹ ಮತ್ತು ಇನ್ನಿತರ ಮಾಹಿತಿಗಳು ಈ ತಿಂಗಳ ಸಂಚಿಕೆಯಲ್ಲಿವೆ.

ಸನ್ಮಿತ್ರರೇ, ಇತ್ತೀಚಿಗೆ ನಾಸಾದ ಇತರ ಮೂವರು ಸಹ ಗಗನಯಾತ್ರಿಗಳೊಂದಿಗೆ ಹೆಚ್ಚಿನ ವೈಜ್ಞಾನಿಕ ಅಧ್ಯಯನಕ್ಕಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿರುವ ಪ್ರಪ್ರಥಮ ಭಾರತೀಯ ಗಗನಯಾತ್ರಿ **ಗ್ರೂಪ್ ಕ್ಯಾಪ್ಟನ್ ಶುಭಾನ್ಶು ಶುಕ್ಲ** ಅವರಿಗೆ ಸಮಸ್ತ ಭಾರತೀಯರ ಮತ್ತು ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಆಷಾಡ ಮಾಸ, ಗುರು ಪೂರ್ಣಿಮಾ ಮತ್ತು ಮುಂಬರುವ ಶ್ರಾವಣ ಮಾಸದ ಶುಭಾಶಯಗಳು, ನಮಸ್ಕಾರ.

**ಕೆ. ಶ್ರೀನಿವಾಸ ಮೂರ್ತಿ**
ಪ್ರಧಾನ ಸಂಪಾದಕ




**ಒಳಪುಟಗಳಲ್ಲಿ .....**


❑ ಅಧ್ಯಕ್ಷರ ನುಡಿ–4 ❑ ಮುನ್ನೋಟ–5 ❑ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ–2025–6 ❑ 2025ರ ಕ್ರಿಕೆಟ್ ಪಂದ್ಯಾವಳಿ–7 ❑ ಬಸವಣ್ಣ ಹಾಗು ಅಕ್ಕಮಹಾದೇವಿ ಜಯಂತಿ ಆಚರಣೆ–11 ❑ ಸಂಘದ ಸಭಾಂಗಣದಲ್ಲಿ ಆಧುನಿಕ ಧ್ವನಿ ಸಿಸ್ಟಮ್ ಅಳವಡಿಕೆ–16 ❑ ಸೇವಾ ನಿವೃತ್ತಿಯ ನಂತರ ತಾಯ್ನಾಡಿಗೆ ತೆರಳುತ್ತಿರುವ ಸಂಘದ ಆಜೀವ ಸದಸ್ಯರಿಗೆ ಆತ್ಮೀಯ ಬೀಳ್ಕೊಡುಗೆ–17 ❑ ಯೋಗ ಕುರಿತ ವಿಶೇಷ ಲೇಖನ–21 ❑ ತಿಂಗಳ ವ್ಯಕ್ತಿ–ಶ್ರೀ ಎಸ್.ಕೆ. ಕುಲಕರ್ಣಿ–22 ❑ ಶ್ರೀ ಎಸ್.ಎಸ್. ಜವಳಿ ಅವರಿಗೆ ದೆಹಲಿ ಕನ್ನಡಿಗರಿಂದ ಭಾವಪೂರ್ಣ ಶ್ರದ್ಧಾಂಜಲಿ–23 ❑ ಜನಕಪುರಿ ಕನ್ನಡ ಕೂಟದಿಂದ ಶ್ರೀ ರಾಮನವಮಿ ಆಚರಣೆ–25 ❑ ಸ್ವರಾಂಜಲಿ ತಂಡದಿಂದ ಶ್ರೀ ಎಸ್. ಶೇಖರ್‌ರವರಿಗೆ ಬೀಳ್ಕೊಡುಗೆ–26 ❑ ಸ್ನೇಹಾ ಅಸೋಸಿಯೇಷನ್ ವತಿಯಿಂದ 'ಮಾತೆಯರ ದಿನ' ಆಚರಣೆ–27



**ಕಾವಲು ಸಮಿತಿ :** ಶ್ರೀ ಎನ್.ಎ. ಮಾಧವ ಶ್ರೀ ಎಂ.ವಿ. ವೆಂಕಟೇಶ್ ಶ್ರೀಮತಿ ರಾಧಾ ಕೌಜಲಗಿ

## ಅಧ್ಯಕ್ಷರ ನುಡಿ



ಹೆಮ್ಮೆಯ ಕನ್ನಡಿಗ ಬಂಧುಗಳೇ,
ನಿಮ್ಮ ಪ್ರೀತಿಯ ಸಿ.ಎಂ. ನಾಗರಾಜ ಮಾಡುವ ನಮಸ್ಕಾರಗಳು.

ಶುಭ ಕಾರ್ಯಗಳಿಗೆ ಚಾಲನೆ ಕೊಡಲು ಆಷಾಢ ಕಳೆದು ಶ್ರಾವಣ ಬರಬೇಕು. ದೆಹಲಿ ಕರ್ನಾಟಕ ಸಂಘದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭವಾಗಲು ಜೂನ್ ಮುಗಿದು ಜುಲೈ ಬರಬೇಕು. ಅಲ್ಲವೇ.... ಹೌದು ಬಂಧುಗಳೇ, ಹೊರನಾಡಿನಲ್ಲಿ ವಾಸಿಸುವ ಕನ್ನಡಿಗರು ಮಕ್ಕಳ ಶಾಲೆಗೆ ರಜೆ ಬಂದಾಗ ಊರಿಗೆ ಹೋಗಿ ತಮ್ಮವರನ್ನೆಲ್ಲಾ ಭೇಟಿ ಮಾಡಿ ಬರುತ್ತಾರೆ. ಆ ಸಮಯದಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಿಗೂ ಬಿಡುವು ಇರುತ್ತದೆ.

ಮೇ ತಿಂಗಳು ದೆಹಲಿ ಬಿಸಿಲು ಏರುತ್ತಾ ಸಾಗುತ್ತಿದ್ದಂತೆ, ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ಯಕ್ರಮ ಸಂಖ್ಯೆ ಇಳಿಮುಖವಾಗುತ್ತ ಸಾಗುವುದು. ನಮ್ಮ ಸಂಸ್ಕೃತಿಯ ಸಂಪರ್ಕ ನಮ್ಮ ದೆಹಲಿ ಕನ್ನಡಿಗರ ಮಕ್ಕಳಲ್ಲಿರಬೇಕೆಂಬ ಉದ್ದೇಶದಿಂದ ದೆಹಲಿ ಕರ್ನಾಟಕ ಸಂಘ ಮಕ್ಕಳಿಗೆ ಕಲಿಕಾ ಕೇಂದ್ರ ಆರಂಭಿಸಿ ಕನ್ನಡ ಭಾಷೆ, ಸಂಗೀತ ಮತ್ತು ನೃತ್ಯ ತರಬೇತಿ ನೀಡುವ ತರಗತಿಗಳನ್ನು ನಡೆಸುತ್ತಿದೆ. ಆ ಮಕ್ಕಳ ಕಲಿಕೆಯ ಮೌಲ್ಯಮಾಪನ ಹಾಗೂ ಮಕ್ಕಳು ತಮ್ಮ ಪ್ರತಿಭೆಯನ್ನು ತೋರಿಸಲು ಸೂಕ್ತ ವೇದಿಕೆ ಇವೆರಡನ್ನು ಸಾಧಿಸಿದ್ದು ದೆಹಲಿ ಕರ್ನಾಟಕ ಸಂಘದಲ್ಲಿ ಮೇ ತಿಂಗಳಲ್ಲಿ ನಡೆದ ಮೊದಲ ಕಾರ್ಯಕ್ರಮ.

ಬಂಧುಗಳೇ, ಅನುಭವ ಮಂಟಪದ ಹರಿಕಾರ ಅಣ್ಣ ಬಸವಣ್ಣ ಮತ್ತು ಕನ್ನಡದ ಮೊದಲ ಕವಯತ್ರಿ ಅಕ್ಕಮಹಾದೇವಿ ಜಯಂತಿಯನ್ನು ಆಚರಿಸಲಾಯಿತು. ಶ್ರೀ ಶ್ರೀ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿಗಳು, ವಿದೇಶಾಂಗ ವ್ಯವಹಾರಗಳ ಮಂತ್ರಾಲಯದಲ್ಲಿ ಜಂಟಿ ಕಾರ್ಯದರ್ಶಿಗಳಾದ ಡಾ. ಕೆ.ಜೆ. ಶ್ರೀನಿವಾಸ್, ಐ.ಎಫ್.ಎಸ್, ಶ್ರೀ ಅಮರನಾಥ ತಲವಾಡೆ ಐ.ಎ.ಎಸ್ ಮತ್ತು ಶ್ರೀ ಅಮರೇಶ್ವರ ಪಾಟೀಲ್ ಐ.ಆರ್.ಎಸ್. ಅವರು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಕನ್ನಡ ಕಲಿಯುವ ಮಕ್ಕಳು ಬಸವಣ್ಣ ಮತ್ತು ಅಕ್ಕಮಹಾದೇವಿಯ ವಚನಗಳನ್ನು ಸ್ಪುಟವಾಗಿ ತಪ್ಪಿಲ್ಲದೇ ಪ್ರಸ್ತುತ ಪಡಿಸಿದ ವಚನ ರೂಪಕ ಮತ್ತು ನಂತರ ಸಂಗೀತ ಕಲಿಯುವ ಮಕ್ಕಳು ಹಾಡಿದ ಶೃತಿ ಬದ್ದ ಹಾಡುಗಳು ನೆರೆದಿದ್ದ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿತು. ಒಟ್ಟಾರೆಯಾಗಿ ಕಲಿಕಾ ತರಗತಿಗಳ ಯಶಸ್ಸನ್ನು ಸಾರಿದ್ದು ಅದ್ಭುತ ಕಾರ್ಯಕ್ರಮ ಅದಾಗಿತ್ತು.

ದೆಹಲಿ ಕನ್ನಡಿಗರಲ್ಲಿ ಕ್ರೀಡಾ ಮನೋಭಾವ, ಸಾಮರಸ್ಯ, ಮನರಂಜನೆ ಮತ್ತು ಸ್ವಸಾಮರ್ಥ್ಯಗಳನ್ನು ಹೊರತರಲು ದೆಹಲಿ ಕರ್ನಾಟಕ ಸಂಘ ವಾರ್ಷಿಕ ಕ್ರಿಕೆಟ್ ಪಂದ್ಯವಳಿಯನ್ನು ಮೇ ತಿಂಗಳಲ್ಲಿ ಆಯೋಜಿಸಲಾಗಿತ್ತು. ಸುಮಾರು 16 ತಂಡಗಳು ಭಾಗವಹಿಸಿದ್ದ ಈ ಯಶಸ್ವಿ ಪಂದ್ಯಾವಳಿಯಲ್ಲಿ ಶ್ರೀ ನವೀನ್ ಕುಮಾರ್ ಸಾರಥ್ಯದ ಕನ್ನಡ ಗೆಳೆಯರು ತಂಡ ಚಾಂಪಿಯನ್ ಪಟ್ಟ ಪಡೆಯಿತು. ಕರ್ನಾಟಕ ಕಮಾಂಡೋಸ್ ತಂಡ ರನ್ನರ್ ಅಪ್ ಆಯಿತು. ಕರ್ನಾಟಕ ಕಮಾಂಡೋಸ್ ತಂಡದ ನಾಯಕ ತನ್ನ ಕ್ರಿಕೆಟ್ ಕಿಟ್ ಅನ್ನು ಪಂದ್ಯ ಮುಗಿದ ಮೇಲೆ ಸರಿಯಾಗಿ ಪರಿಶೀಲಿಸದೇ ಜಿಪ್ ಎಳೆದು ಮನೆಗೆ ತಗೊಂಡು ಹೋಗಿ ಹಾಗೆ ಇಟ್ಟುಬಿಟ್ಟರು. ಕೆಲದಿನಗಳ ಕಳೆದ ನಂತರ ಕಿಟ್ ತೆಗೆದು ಪರಿಶೀಲನೆ ಮಾಡಿದಾಗ ಅವರಿಗೆ ತಮ್ಮ ಅಮೂಲ್ಯ ಬ್ಯಾಟುಗಳು ಇಲ್ಲದಿರುವುದು ಕಂಡು ಬಂದು ಅವರು ಈ ಬಗ್ಗೆ ದೆಹಲಿ ಕನ್ನಡಿಗರ ಎಲ್ಲಾ ಗುಂಪುಗಳಲ್ಲಿ ಸಂದೇಶ ಹಾಕಿದರು. ಅವರ ಸಂದೇಶ ಓದಿ ಇತರ ತಂಡಗಳ ಆಟಗಾರರು ತಮ್ಮ ತಮ್ಮ ಕಿಟ್ ನೋಡಿಕೊಂಡು ಅಲ್ಲಿ ಆಕಸ್ಮಿಕವಾಗಿ ಸೇರಿದ್ದ ಬ್ಯಾಟ್‌ಗಳನ್ನು ವಿನೋದ್ ರವರಿಗೆ ತಲುಪಿಸಿದ್ದು, ಇದನ್ನು ಮತ್ತೊಂದು ಸಂದೇಶದ ಮೂಲಕ ವಿನೋದ್ ಹಂಚಿಕೊಂಡಿದ್ದು ಸಂತಸದ ವಿಷಯವಾಗಿತ್ತು. ಪಂದ್ಯಾವಳಿಯ ಯಶಸ್ಸನ್ನು ಕೇವಲ ಕ್ರೀಡಾಂಗಣದಲ್ಲಿ ನಡೆದ ಪಂದ್ಯಗಳು ಮಾತ್ರವಲ್ಲದೇ ಹೊರಗು ಕ್ರೀಡಾ ಸ್ಪೂರ್ತಿಯನ್ನು ಅನಾವರಣ ಮಾಡಿದ್ದು ಗಮನ ಸೆಳೆಯಿತು.

ದೆಹಲಿ ಕರ್ನಾಟಕ ಸಂಘದಲ್ಲಿ ಡಿಜಿಟಲ್ ಬಿ ಸೌಂಡ್ ಮತ್ತು ಅತ್ಯುತ್ತಮ ದಿಗ್ದರ್ಶಕ ವ್ಯವಸ್ಥೆ ಆಳವಡಿಕೆ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಹೇಳಿದ್ದೆ. ಆ ಕಾರ್ಯ ಪೂರ್ಣಗೊಂಡಿದೆ. ಇದರ ಮೊದಲ ಪರೀಕ್ಷೆ ಕಿಚ್ಚ ಸುದೀಪ್ ರವರ ಆಕ್ಷನ್ ಚಿತ್ರ ಮ್ಯಾಕ್ಸ್ ಚಲನಚಿತ್ರದ ಪ್ರದರ್ಶನದೊಂದಿಗೆ ಸಫಲಗೊಂಡಿತು. ನೆರೆದಿದ್ದ ಪ್ರೇಕ್ಷಕರ ಮನರಂಜಿಸಿದ್ದು ಸೊಗಸಾಗಿತ್ತು. ಚಲನಚಿತ್ರಮಂದಿರದ ಅನುಭವ ಕೊಟ್ಟಿದ್ದು ಈ ನವೀಕರಣದ ಕಾರ್ಯವನ್ನು ಸಫಲಗೊಳಿಸಿತ್ತು, ನಂತರ ದೆವ್ವ ಪ್ರೇರಿತ ಪ್ರಕೃತಿ ಸಂರಕ್ಷಣೆಯ 'ಫಾರೆಸ್ಟ್' ಚಲನಚಿತ್ರ ಪ್ರದರ್ಶನ ಮತ್ತೊಮ್ಮೆ ಮೇಲಿನ ಮಾತುಗಳನ್ನು ಸಾಬೀತುಗೊಳಿಸಿತು. ಕಳೆದ ಮೂವತ್ತಾರು ವರ್ಷಗಳಿಂದ ದೆಹಲಿ ಕರ್ನಾಟಕ ಸಂಘದ ಸದಸ್ಯರಾಗಿ ಕಾರ್ಯಕಾರಿ ಸಮಿತಿ ಆಯ್ಕೆಯ ತಮ್ಮ ಕರ್ತವ್ಯವನ್ನು ತಪ್ಪದೇ ಸಮರ್ಥವಾಗಿ ಮಾಡುತ್ತ, ಸಂಘದ ಎಲ್ಲಾ ಕಾರ್ಯಕ್ರಮಗಳಿಗೂ ಬೆನ್ನುಲುಬಾಗಿ ನಿಂತು ಅವುಗಳಲ್ಲಿ ಸಭಿಕರಾಗಿ ಭಾಗವಹಿಸಿ ಒಟ್ಟಿಗೆ ಏಳು ಮಂದಿ ಈಗ ಸೇವಾ ನಿವೃತ್ತರಾಗಿ ತಾಯ್ನಾಡಿಗೆ ಮರಳುತ್ತಿರುವ ಅಪೂರ್ವ ದೆಹಲಿ ಕನ್ನಡಿಗರನ್ನು ಅಭಿನಂದಿಸಲಾಯಿತು. ನಿವೃತ್ತರನ್ನು ಸನ್ಮಾನಿಸುವ ವಿನೂತನ ಕಾರ್ಯಕ್ರಮ ಒಂದು ಹೊಸ ಸಂಸ್ಕೃತಿಗೆ ನಾಂದಿ ಹಾಡಿದೆ ಎಂದು ಭಾವಿಸುವೆ. ಮುಂದೆಯೂ ಈ ರೀತಿಯ ವಿನೂತನ ಕಾರ್ಯಕ್ರಮಗಳು ನಡೆಯುತ್ತಿರುತ್ತದೆ ಎಂದು ನಿಮಗೆ ಭರವಸೆ ನೀಡುವೆ. ಬಂಧುಗಳೇ, ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು ಆದರೆ ಕನಸುಗಳಿಲ್ಲದೇ ನಡೆಯಲಾಗದು. ಸಂಘ ಸಂಸ್ಥೆಗಳ ಜವಾಬ್ದಾರಿ ಇದ್ದಾಗ ಕನಸುಗಳ ಸಾಕಾರಗೊಳಿಸುವ ಸಂಕಲ್ಪ ಕೂಡ ಮುಖ್ಯವಾದದ್ದು.

ಶ್ರೀಮತಿ ಡಾ. ಸುಧಾ ಮೂರ್ತಿ ಅಮ್ಮನವರು ಬರೆದಿರುವ ಪುಸ್ತಕದ ಮಕ್ಕಳ ಬಗ್ಗೆ ಒಂದು ಅತ್ಯಂತ ಸುಂದರವಾದ ನಾಟಕ ಎಲ್‌ಟಿಜಿ ಸಭಾಂಗಣ ಮಂಡಿ ಹೌಸ್‌ನಲ್ಲಿ ಹಿಂದಿ ನಾಟಕ ಖಾ.. ಸೇ.. ಕಹಾನಿ.. ಮೊಟ್ಟ ಮೊದಲಿಗೆ ಮೂಡಿಬಂದಿದೆ. ಇದನ್ನು ಸಾಧ್ಯವಾದಷ್ಟು ಕನ್ನಡಿಗರು ವೀಕ್ಷಿಸಿ.. ಜೊತೆಗೆ ಆದಷ್ಟು ಬೇಗನೆ ಕನ್ನಡ ನಾಟಕಕ್ಕೆ ತರುವ ಎಲ್ಲಾ ಪ್ರಯತ್ನಗಳನ್ನು ನಾವೆಲ್ಲರೂ ಸೇರಿ ಮಾಡೋಣ..

ಈ ತಿಂಗಳ ಅಧ್ಯಕ್ಷರ ನುಡಿಯನ್ನು ಡಿ.ವಿ.ಜಿಯವರ ಅರ್ಥಗರ್ಭಿತ ಈ ಮುಕ್ತಕದೊಂದಿಗೆ ಮುಗಿಸುವೆ

**ಸತ್ಯವೆಂಬುದದೆಲ್ಲಿ? ನಿನ್ನಂತರಂಗದೊಳೊ ।**
**ಸುತ್ತ ನೀನನುಭವಿಪ ಬಾಹ್ಯ ಚಿತ್ರದೊಳೋ ॥**
**ಯುಕ್ತಿಯಿಂದೊಂದನೊಂದಕೆ ತೊಡಿಸಿ ಸರಿನೋಡೆ ।**
**ತತ್ವದರ್ಶನವಹುದು–ಮಂಕುತಿಮ್ಮ॥**

ಜೈ ಕರ್ನಾಟಕ ಮಾತೆ, ಜೈ ಹಿಂದ್

ಧನ್ಯವಾದಗಳು.

**ಸಿ.ಎಂ. ನಾಗರಾಜ**
ಅಧ್ಯಕ್ಷರು

## ಮುನ್ನೋಟ

ಪ್ರಿಯ ಕನ್ನಡಿಗರೇ,

ಬೇಸಿಗೆ ರಜಕ್ಕೆ ದಕ್ಷಿಣದ ನಮ್ಮ ತಾಯ್ನಾಡಿನ ಕಡೆ ಹೋದವರಿಗೆ ಮಳೆಯಾದರೆ, ದೆಹಲಿಯಲ್ಲಿರುವವರಿಗೆ ಧಗೆ ಧಗೆ ಬಿರು ಬಿಸಿಲಿನ ಹವೆ. ಆಗಾಗ ಒಂದಷ್ಟು ಮಳೆ ಬಂದು ತಾತ್ಕಾಲಿಕವಾಗಿ ತಂಪೆರೆದರೂ ನಂತರದ ಸೆಕೆಗೆ ನಾವೂ ಬೇಸತ್ತಿದ್ದೇವೆ. ಜೂನ್ ತಿಂಗಳ ಅಂತರರಾಷ್ಟ್ರೀಯ ಪರಿಸರ ದಿನ ಮತ್ತು ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ನಾವೂ ಸಹ ದೆಹಲಿ ಕರ್ನಾಟಕ ಸಂಘದಲ್ಲಿ ಆಚರಿಸಿದ್ದೇವೆ. ಆರೋಗ್ಯವೇ ಭಾಗ್ಯವೆಂಬ ಮೂಲಮಂತ್ರದಂತೆ ಉತ್ತಮ ಅರೋಗ್ಯಕ್ಕಾಗಿ ವ್ಯಾಯಾಮ ಅತ್ಯಗತ್ಯ. ಯೋಗದಿಂದ ಆರೋಗ್ಯ ಎಂಬುದು ಜಗತ್ ಜಾಹಿರವಾಗಿದೆ. ಅದಕ್ಕಾಗಿ ಯೋಗ ದಿನಾಚರಣೆ ಸಂದರ್ಭದಲ್ಲಿ ಯೋಗ ಪರಿಣಿತರನ್ನು ಕರೆಸಿ ಎಲ್ಲರೂ ಮಾಡಬಹುದಾದ ಸರಳ ಆಸನಗಳನ್ನು ಕಲಿಸುವ ಮೂಲಕ ಅದರ ಲಾಭಗಳ ಮಾಹಿತಿಯನ್ನು ನೆರೆದಿದ್ದ ನೂರಕ್ಕೂ ಹೆಚ್ಚು ಜನರಿಗೆ ಜಾಗೃತಿ ಮೂಡಿಸಿದ್ದು ಸಾರ್ಥಕ ಕಾರ್ಯವಾಗಿದೆ.

ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿಯಲ್ಲಿ ಈ ಬಾರಿ 16 ತಂಡಗಳು ಭಾಗವಹಿಸಿ ಪಂದ್ಯಾವಳಿಯನ್ನು ಯಶಸ್ವಿಗೊಳಿಸಿದ್ದು ಮತ್ತು ಸುಮಾರು 300 ಆಟಗಾರರು ಬಹಳ ಉತ್ಸಾಹದಿಂದ ಭಾಗವಹಿಸಿ ವಯೋಮಿತಿ ಮರೆತು ಸ್ಪರ್ಧಾತ್ಮಕ ಕ್ರೀಡಾಮನೋಭಾವದಿಂದ ಕ್ರೀಡೋತ್ಸಾಹ ತೋರಿದ್ದು ಸಂತಸದ ಸಂಗತಿ.

12ನೇ ಶತಮಾನದಲ್ಲಿ ಸಮಾಜ ಸುಧಾರಕ ಜಗಜ್ಯೋತಿ ಬಸವೇಶ್ವರರ ವಚನ ಯುಗದ ಮೂಲಕ ಸಮಾನತೆಯ ಚಳುವಳಿ ಸೃಷ್ಟಿಸಿದ ಭಕ್ತಿ ಭಂಡಾರಿ ಬಸವಣ್ಣ ಮತ್ತು ಜಗನ್ಮಾತೆ ಅಕ್ಕಮಹಾದೇವಿ ಜಯಂತಿ ಆಚರಣೆಯನ್ನು ಸಂಘದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗಿದೆ. ವಚನಕ್ರಾಂತಿಯೇ ಸಮಾನತೆಯ ದೊಡ್ಡ ಕ್ರಾಂತಿಯಾಗಿರುವುದು ಇಂದಿಗೂ ಪ್ರಪಂಚಕ್ಕೆ ಕನ್ನಡಿಗರ ದೊಡ್ಡ ಕೊಡುಗೆ. ನಾವೆಲ್ಲ ಕನ್ನಡಿಗರು ಶಾಂತಿ ಪ್ರಿಯರು. ನಾವು ಎಲ್ಲೇ ಇದ್ದರು, ಏನೇ ಆದರೂ ಮೊದಲು ಮಾನವನಾಗು ಎಂಬ ಸಿದ್ಧಾಂತ ಪಾಲಿಸುವ ಗುಣ ನಮ್ಮ ನಾಡಿನ ಮಣ್ಣಿಂದ ಬಂದಿದೆ.

ಸಂಘದ ಸಭಾಂಗಣ ಎಂದರೆ ಕಲಾವಿದರ ತಾಣ. ಆ ತಾಣದ ದುರಸ್ತಿ ಕಾರ್ಯ ನಡೆಯುತ್ತಿದ್ದು ಮುಂದಿನ ದಿನಗಳಲ್ಲಿ ಅದ್ದೂರಿ ಧ್ವನಿವರ್ಧಕ ಮತ್ತು ಆಸನಗಳ ವ್ಯವಸ್ಥೆಯ ಅನುಭವವನ್ನು ತಾವು ಪಡೆಯಬಹುದು.

ಈ ಸಂದರ್ಭದಲ್ಲಿ ನಾನು ವೈಯಕ್ತಿಕ ವಿಷಯ ಒಂದನ್ನು ವಿಷಾದದೊಂದಿಗೆ ಹಂಚಿಕೊಳ್ಳುವೆ. ನನ್ನನ್ನು ಸಾಕಿ, ಸಲಹಿ ಒಬ್ಬ ಮನುಷ್ಯನನ್ನಾಗಿ ಮಾಡಿದ ತೀರ್ಥರೂಪ ಸಮಾನರಾದ ನನ್ನ ಅಣ್ಣ ಕೋಡಿ ನಾಗಪ್ಪಯ್ಯ ಅವರು ಇತ್ತೀಚೆಗೆ ದೈವಾಧೀನರಾದರು. ಅದು ನನಗೆ ತುಂಬಲಾರದ ನಷ್ಟ. ಅವರ ನೆನಪು, ಮಾರ್ಗದರ್ಶನ ನನಗೆ ದಾರಿ ದೀಪವಾಗಿದೆ.

ವಂದನೆಗಳೊಂದಿಗೆ,

**ರಾಧಾಕೃಷ್ಣ**
ಪ್ರಧಾನ ಕಾರ್ಯದರ್ಶಿ



ಸಂಘದಲ್ಲಿ ನಿರಂತರವಾಗಿ ನಡೆಯುತ್ತಿರುವ ಕನ್ನಡ ಕಲಿಕಾ ಕೇಂದ್ರದ ಮಕ್ಕಳು ಹಾಗು ನೃತ್ಯ ಮತ್ತು ಸಂಗೀತ ತರಬೇತಿ ಪಡೆಯುತ್ತಿರುವ ಮಕ್ಕಳೊಂದಿಗೆ ಸಂಘದ ಅಧ್ಯಕ್ಷರು, ಸಂಗೀತ ಮತ್ತು ನೃತ್ಯ ಗುರುಗಳು, ಕನ್ನಡ ಕಲಿಸುತ್ತಿರುವ ಶಿಕ್ಷಕಿಯರು, ಪೋಷಕರು ಹಾಗೂ ಸಂಘದ ಸದಸ್ಯರುಗಳ ರಮಣೀಯ ಮತ್ತು ಅವಿಸ್ಮರಣೀಯ ದೃಶ್ಯ.

ಮಾನ್ಯರೇ,

2024–25ರ ಶೈಕ್ಷಣಿಕ ವರ್ಷದಲ್ಲಿ 10ನೇ ಮತ್ತು 12ನೇ ತರಗತಿಯಲ್ಲಿ ಶೇ. 80 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ಹಾಗೂ 2024–25ರ ಸಾಲಿನಲ್ಲಿ ವಿಜ್ಞಾನ, ಕಲೆ, ವಾಣಿಜ್ಯ, ಇಂಜಿನಿಯರಿಂಗ್, ವೈದ್ಯಕೀಯ, ಫೈನ್ ಆರ್ಟ್ಸ್, ಕಾನೂನು ಮುಂತಾದ ವಿಷಯಗಳಲ್ಲಿ ಪದವಿಗಳನ್ನು ಪಡೆದಿರುವ ಸಂಘದ ಆಜೀವ ಸದಸ್ಯರ ಮಕ್ಕಳ ವಿವರವನ್ನು ಅಭಿಮತದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ, ಈ ಶೈಕ್ಷಣಿಕ ವರ್ಷದಲ್ಲಿ ಶೇ 80ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಹಾಗೂ ಪದವೀಧರ(ರೆ)ಯಾಗಿರುವ ಸಂಘದ ಸದಸ್ಯರ ಮಕ್ಕಳ ಹೆಸರು, ಅಂಕಪಟ್ಟಿ, ಭಾವಚಿತ್ರ, ಪೋಷಕರ ಹೆಸರು ಮುಂತಾದ ವಿವರಗಳನ್ನು ದಿನಾಂಕ 31.07.2025ಕ್ಕಿಂತ ಮೊದಲು ಸಂಘದ ಕಛೇರಿಗೆ ಖುದ್ದಾಗಿ ಅಥವಾ ಸಂಘದ ಇಮೇಲ್ : dksangha@gmail.com ಗೆ ಕಳುಹಿಸಿಕೊಡಬೇಕಾಗಿ ವಿನಂತಿ.

***ಪ್ರಧಾನ ಕಾರ್ಯದರ್ಶಿ***

# ಸರ್ವ ಸದಸ್ಯರ ವಾರ್ಷಿಕ ಮಹಾಸಭೆ – 2025



ದೆಹಲಿ ಕರ್ನಾಟಕ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ 10.05.2025 ರಂದು ಸಂಘದ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು.

ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಸರ್ವ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣರವರು ವಾರ್ಷಿಕ ವರದಿಯನ್ನು ಹಾಗೂ ಖಜಾಂಚಿ ಶ್ರೀಮತಿ ಆಶಾಲತಾ ಎಂ. ಅವರು 2023–24ನೇ ಸಾಲಿನ ಪರಿಶೋಧಿತ ಲೆಕ್ಕಪತ್ರ ಮತ್ತು 2025–26 ನೇ ಸಾಲಿನ ಬಜೆಟನ್ನು ಮಂಡಿಸಿದರು. ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ಹಾಗೂ ಜಂಟಿ ಕಾರ್ಯದರ್ಶಿಗಳಾದ ಶ್ರೀ ಬಿ. ನಾರಾಯಣ ಮತ್ತು ಶ್ರೀಮತಿ ಅಶ್ವಿನಿ ಬಿ.ಎಸ್. ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರೂ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಸರ್ವ ಸದಸ್ಯರ ವಾರ್ಷಿಕ ಸಭೆಯು ಬೆಳಿಗ್ಗೆ 11.00 ಗಂಟೆಯಿಂದ ಪ್ರಾರಂಭವಾಯಿತು. ಮಹಾಸಭೆಯ ಆರಂಭದ ಮುನ್ನ ಅಗಲಿದ ಸಂಘದ ಆಜೀವ ಸದಸ್ಯರುಗಳಾದ ಶ್ರೀ ಬೈಕೆರೆ ನಾಗೇಶ್, ಶ್ರೀಮತಿ ಶ್ಯಾಮಲಾ ಮನೋಹರ್, ಶ್ರೀಮತಿ ಸುಮಿತ್ರಾ ರಾವ್, ಶ್ರೀ ಎಂ. ಉದಯ ಕುಮಾರ್, ಶ್ರೀಮತಿ ಕಲ್ಪನಾ ದೇಶಪಾಂಡೆ, ಶ್ರೀ ನರಸಿಂಹ ಎ.ವಿ.ಆರ್, ಶ್ರೀಮತಿ ಲಕ್ಷ್ಮೀಬಾಯಿ, ಶ್ರೀಮತಿ ಬಿ.ಆರ್. ಮಂಜುಳಾ, ಶ್ರೀ ಸುದರ್ಶನ್, ಶ್ರೀ ಮಾರುತಿ ಬೆಣ್ಣೆಹಳ್ಳಿ, ಶ್ರೀ ಸುಬ್ಬಣ್ಣಾಚಾರ್, ಶ್ರೀ ಕುಲಕರ್ಣಿ ಆರ್.ಪಿ, ಶ್ರೀಮತಿ ವಸುಂಧರ ಕುರಂದವಾಡ, ಶ್ರೀ ಎಸ್.ಎಸ್. ಜವಳಿ ಅವರನ್ನು ನೆನೆದು ಎರಡು ನಿಮಿಷಗಳ ಮೌನ ಪ್ರಾರ್ಥನೆ ಮಾಡಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಂಘದ ಆಜೀವ ಸದಸ್ಯರುಗಳಾದ ಶ್ರೀ ಎಸ್. ಕೃಷ್ಣ ಭಟ್, ಡಾ. ವೆಂಕಟಾಚಲ ಜಿ. ಹೆಗಡೆ, ಶ್ರೀ ಈಶ್ವರ ಮಡಿವಾಳ್, ಶ್ರೀ ಎಂ.ವಿ. ವೆಂಕಟೇಶ್, ಶ್ರೀ ಕೆ.ಆರ್. ರಾಮಮೂರ್ತಿ, ಡಾ. ವೈ. ಅವನೀಂದ್ರನಾಥ್ ರಾವ್, ಶ್ರೀ ಆರ್. ರೇಣುಕುಮಾರ್, ಡಾ. ಎಂ.ಎಸ್. ಶಶಿಕುಮಾರ್, ಶ್ರೀ ಶ್ರೀಹರಿ ಶೇಖರ್, ಶ್ರೀ ಚೆನ್ನು ಎಸ್. ಮಠದ, ಶ್ರೀ ಎನ್.ಆರ್. ಶ್ರೀನಾಥ್, ಶ್ರೀ ನರಸಿಂಹ ಮೂರ್ತಿ, ಶ್ರೀ ಶ್ರೀಹರಿ, ಶ್ರೀ ಸಂತೋಷ ಉಪಾಧ್ಯಾಯ, ಶ್ರೀ ಶಾಂತಕುಮಾರ್ ನಿಂಬಾಳ ಮೊದಲಾದವರು ಸೂಕ್ತ ಸಲಹೆ ಹಾಗೂ ಅಭಿಪ್ರಾಯಗಳನ್ನು ನೀಡಿದರು. ಕೆಲವು ಸದಸ್ಯರು ಆನ್‌ಲೈನ್ ಮೂಲಕ ಭಾಗವಹಿಸಿ ಸಭಾ ಕಲಾಪಗಳನ್ನು ವೀಕ್ಷಿಸಿದರು.

ಚರ್ಚೆಯ ಬಳಿಕ ವಾರ್ಷಿಕ ವರದಿ ಹಾಗು ಲೆಕ್ಕಪತ್ರಗಳನ್ನು ಅನುಮೋದಿಸಲಾಯಿತು. ವಾರ್ಷಿಕ ಮಹಾ ಸಭೆಯ ನಂತರ ಎಲ್ಲರಿಗೂ ಭೋಜನ ವ್ಯವಸ್ಥೆ ಮಾಡಲಾಗಿತ್ತು. ❑

***ಅಭಿಮತ ವರದಿ***















# ಅತ್ಯಂತ ಯಶಸ್ಸು ಕಂಡ ದೆಹಲಿ ಕರ್ನಾಟಕ ಸಂಘದ 2025ರ ಕ್ರಿಕೆಟ್ ಪಂದ್ಯಾವಳಿ

ದೆಹಲಿ ಕರ್ನಾಟಕ ಸಂಘದಿಂದ ದಿನಾಂಕ 04.05.2025 ಮತ್ತು 11.05.2025 ರಂದು ನವದೆಹಲಿಯ ಪ್ರೆಸಿಡೆಂಟ್ ಎಸ್ಟೇಟ್ ಬಳಿ ಇರುವ ತಾಲ್ಕಟೋರ ಕ್ರಿಕೆಟ್ ಮೈದಾನದಲ್ಲಿ ಆಯೋಜಿಸಲಾದ ಈ ವರ್ಷದ ಕ್ರಿಕೆಟ್ ಪಂದ್ಯಾವಳಿಯಲ್ಲಿ 16 ತಂಡಗಳು ಭಾಗವಹಿಸಿದ್ದವು. ಎಲ್ಲಾ ಪಂದ್ಯಗಳು ಸ್ಪರ್ಧಾತ್ಮಕವಾಗಿ, ಸಂಘರ್ಷಮಯವಾಗಿ ನಡೆದವು, ಕೊನೆಯಲ್ಲಿ ಬಹಳ ರೋಚಕವಾಗಿ ನಡೆದ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕನ್ನಡ ಗೆಳೆಯರು ತಂಡ ಕೇವಲ 77 ರನ್ನುಗಳನ್ನು ಮಾಡಿ, 78ರ ಗುರಿಯನ್ನು ಫೈನಲ್ ತಲುಪಿದ್ದ ಇನ್ನೊಂದು ಬಲಿಷ್ಠ ತಂಡವಾದ ಕರ್ನಾಟಕ ಕಮಾಂಡೋಸ್‌ಗೆ ನೀಡಿತು.



ಕನ್ನಡ ಗೆಳೆಯರು ತಂಡದ ಬೌಲರ್ಸ್ ಬಿಗಿ ಭದ್ರತೆಯ ಬೌಲಿಂಗ್ ದಾಳಿ ಪ್ರಾರಂಭಿಸಿದರಾದರೂ, ಉತ್ತಮ ಬ್ಯಾಟಿಂಗ್ ಆರಂಭಿಸಿದ ಕರ್ನಾಟಕ ಕಮಾಂಡೋಸ್ ಆಟಗಾರರು, ಉತ್ತಮ ರನ್ ಪೇರಿಸುತ್ತಾ ಮುನ್ನಡೆದರು. ಆದರೆ, ತುಂಬಾ ಮುಖ್ಯವಾದ ಸಮಯದಲ್ಲಿ ಅದರ ಕಪ್ತಾನ್ ವಿನೋದ್ ಕೈಕಾಡೆ ಮತ್ತು ಸೆಮಿಫೈನಲ್ ಪಂದ್ಯದಲ್ಲಿ ನಾಲ್ಕು ಸಿಕ್ಸರ್ ಬಾರಿಸಿದ್ದ ಆ ತಂಡದ ಮೇಘರಾಜ್ ಬಲು ಬೇಗನೇ ನಿರ್ಗಮಿಸಿದ್ದು ಅವರಿಗೆ ತುಂಬಾ ನಷ್ಟವಾಯಿತು. ಇನ್ನೋರ್ವ ಆಟಗಾರ ಕೃಷ್ಣ ತುಂಬಾ ಕೆಚ್ಚೆದೆಯ ಹೋರಾಟ ನಡೆಸಿದರಾದರೂ ಕೊನೆಯ ಓವರ್‌ನಲ್ಲಿ ನಾನ್ ಸ್ಟ್ರೈಕರ್ ಎಂಡ್‌ನಲ್ಲಿ ಇದ್ದದ್ದು ಎದುರಾಳಿ ತಂಡಕ್ಕೆ ವರದಾನವಾಯಿತು. 3 ಬಾಲಲ್ಲಿ 5ರನ್ನು ಪಡೆಯುವ ಸಮಯದಲ್ಲಿ, ಒಂದು ರನ್ ಕದಿಯಲು ಹೋಗಿ, ಓವರ್ ತ್ರೋದಿಂದ ಅನಾಯಾಸವಾಗಿ 3 ರನ್ ಸಿಕ್ಕಿತು. ಬದಲಾಗಿ, ಎರಡೇ ರನ್ ಓಡಿ ಕೃಷ್ಣ ಬ್ಯಾಟಿಂಗ್ ಮಾಡಿದ್ದರೆ, ಗೆಲುವು ಕಮಾಂಡೋಸ್‌ಗಳಿಗೆ ದೊರೆಯುತ್ತಿತ್ತೋ ಏನೋ?

ಆದರೆ ಕ್ರಿಕೆಟ್ ಆಟವೇ ಹಾಗೆ, ಕೊನೆಯ ಎರಡು



ಬಾಲುಗಳಲ್ಲಿ ಎರಡು ರನ್ ಬೇಕಿತ್ತು, ಹೊಸದಾಗಿ ಬಂದ ಬ್ಯಾಟ್ಸ್‌ಮನ್ ಗಾಳಿಯಲ್ಲಿ ಲಾಂಗಾಫ್ ಕಡೆ ಬ್ಯಾಟ್ ಬೀಸಿದನು, ಅದು ಮಿರಾಕುಲಸ್ ಆಗಿ ಕ್ಯಾಚ್ ಆಗಿ ಅವನು ಔಟ್ ಆದನು. ಮತ್ತೆ ಹೊಸಬ ದಾಂಡಿಗ ಬಂದು ಬ್ಯಾಟ್ ಬೀಸಿದನು. ಅದರೆ ಕೊನೆಯ ಎಸೆತವನ್ನು ಕರಾರುವಾಕ್ಕಾಗಿ ಬೌಲಿಂಗ್ ಮಾಡಿದ ನಾಯಕ ಇಸ್ಮಾಯಿಲ್‌ನ ಚೆಂಡಿನಿಂದ ಬ್ಯಾಟ್ಸ್‌ಮನ್ ಬೀಟಾಗಿ ಅದು ಗೂಟರಕ್ಷಕನ ಕೈ ಸೇರಿತು. ಕನ್ನಡ ಗೆಳೆಯರು ತಂಡ ಒಂದು ರನ್ನಿನಿಂದ ದೆಹಲಿ ಕರ್ನಾಟಕ ಸಂಘದ 2025ರ ಕ್ರಿಕೆಟ್ ಟೂರ್ನಮೆಂಟ್ ಗೆದ್ದು ಬೀಗಿತು. ತುಂಬಾ ಜನರಿಗೆ ಈ ಬಾರಿಯ ಫೈನಲ್ ಪಂದ್ಯದ ಫಲಿತಾಂಶ ಭ್ರಮನಿರಸನ ಆಗಿರಬೇಕು. ಆದರೆ, ಕ್ರೀಡಾ ಸ್ಫೂರ್ತಿ ಮೆರೆದ ಎಲ್ಲರೂ ಸಂಭ್ರಮದಿಂದ ಕುಣಿದು ಕುಪ್ಪಳಿಸಿದರು.

ದೆಹಲಿ ಕರ್ನಾಟಕ ಸಂಘ ತುಂಬಾ ಉತ್ತಮ ರೀತಿಯಲ್ಲಿ ಪಂದ್ಯಗಳನ್ನು ಆಯೋಜನೆ ಮಾಡಿತ್ತು. ದಿನಾಂಕ 4 ಮತ್ತು 11 ಮೇ 2025 ರಂದು ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಟ್ರೋಫಿ ಗೆಲ್ಲಲು ಸೆಣಸಾಟ ಮಾಡಿದ ಒಟ್ಟಾರೆ 16 ತಂಡಗಳು ಇಂತಿವೆ: ಕರ್ನಾಟಕ ಭವನ, ಕನ್ನಡ ಗೆಳೆಯರು, ಜನಕಪುರಿ ಕನ್ನಡ ಕೂಟ, ಜಿಎಸ್‌ಬಿ ಟೈಗರ್ಸ್, ಶಿವಸಾಯಿ–ಬಿ, ಮಯೂರ ಕೆಎಸ್‌ಟಿಡಿಸಿ, ಪೂಸಾ ವಾರಿಯರ್ಸ್, ದೆಹಲಿ ತುಳು ಸಿರಿ, ಕರ್ನಾಟಕ ಕಮಾಂಡೋಸ್, ಡೆಲ್ಲಿ ಪವರ್ ಸ್ಟಾರ್ಸ್, ಕರ್ನಾಟಕ ಏರ್ ಸ್ಟ್ರೈಕರ್ಸ್–ಎ, ಶಿವಸಾಯಿ–ಎ, ಜೆಎಸ್‌ಎಸ್ ಚಾಂಪಿಯನ್ಸ್, ಕರ್ನಾಟಕ ಏರ್ ಸ್ಟ್ರೈಕರ್ಸ್–ಬಿ, ಶಿವಸಾಯಿ–ಸಿ ಮತ್ತು ಕರ್ನಾಟಕ ಅಡ್ವೊಕೇಟ್ಸ್ ತಂಡಗಳು ಭಾಗವಹಿಸಿದ್ದವು.

ನವದೆಹಲಿಯ ತಾಲ್ಕಟೋರಾ ಮೈದಾನದಲ್ಲಿ ದಿನಾಂಕ 04.05.2025 ರಂದು ಭಾನುವಾರ ಬೆಳಿಗ್ಗೆ 9 ಗಂಟೆಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಉದ್ಘಾಟಿಸುವ ಮೂಲಕ ಕ್ರಿಕೆಟ್ ಪಂದ್ಯಾವಳಿ ಆರಂಭಗೊಂಡಿತು. ಇದೇ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಕ್ರೀಡಾ ಸಮಿತಿ ಅಧ್ಯಕ್ಷೆ ಶ್ರೀಮತಿ ಅಶ್ವಿನಿ ಬಿ.ಎಸ್, ಸಂಚಾಲಕ ಶ್ರೀ ನವೀನ್ ಕುಮಾರ್ ವಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಹಾಗೂ ಶ್ರೀ ಎನ್.ಆರ್. ಶ್ರೀನಾಥ್ ಅವರು ಉಪಸ್ಥಿತರಿದ್ದರು. ಸಂಘದ ಪದಾಧಿಕಾರಿಗಳು, ಕ್ರೀಡಾ ಸಮಿತಿ ಅಧ್ಯಕ್ಷರು ಮತ್ತು ಸಂಚಾಲಕರ ಸಮ್ಮುಖದಲ್ಲಿ ಟಾಸ್ ಮೂಲಕ ಮೊದಲ ಪಂದ್ಯವನ್ನು ಆರಂಭಿಸಲಾಯಿತು. ಆ ದಿನ ಮೊದಲ ಸುತ್ತಿನ ಒಟ್ಟು 7 ಪಂದ್ಯಗಳು ನಡೆದವು. **ಅವುಗಳ ಫಲಿತಾಂಶಗಳು ಇಂತಿವೆ:**

**ಮೊದಲ ಪಂದ್ಯ**–ಕರ್ನಾಟಕ ಭವನ ಮತ್ತು ಕನ್ನಡ ಗೆಳೆಯರು ತಂಡಗಳ ಜೊತೆ ನಡೆಯಿತು. ಇದರಲ್ಲಿ ಕನ್ನಡ ಗೆಳೆಯರು ತಂಡವು 101 ರನ್ನುಗಳಿಂದ ಜಯಗಳಿಸಿತು. ಚಂದು ಅವರು ಪಂದ್ಯ ಪುರುಷೋತ್ತಮರಾದರು.

**ಎರಡನೇ ಪಂದ್ಯ**–ಜನಕಪುರಿ ಕನ್ನಡ ಕೂಟ ಮತ್ತು ಜಿಎಸ್‌ಬಿ ಟೈಗರ್ಸ್ ತಂಡಗಳ ಜೊತೆ ನಡೆದು ಜಿಎಸ್‌ಬಿ ತಂಡವು 23 ರನ್ನುಗಳಿಂದ ಜಯ ಗಳಿಸಿತು.

**ಮೂರನೇ ಪಂದ್ಯ**–ಶಿವಸಾಯಿ–ಬಿ ಮತ್ತು ಮಯೂರ ಕೆಎಸ್‌ಟಿಡಿಸಿ ತಂಡಗಳ ಜೊತೆ ನಡೆದು ಶಿವಸಾಯಿ–ಬಿ ತಂಡವು 6 ವಿಕೆಟ್‌ಗಳಿಂದ ಜಯ ಗಳಿಸಿತು. ಪರಶುರಾಮ್ ಎಂ. ಪಂದ್ಯ ಪುರುಷೋತ್ತಮರಾದರು.

**ನಾಲ್ಕನೇ ಪಂದ್ಯ**–ಪೂಸಾ ವಾರಿಯರ್ಸ್ ಮತ್ತು ದೆಹಲಿ ತುಳು ಸಿರಿ ತಂಡಗಳ ನಡುವೆ ನಡೆದು




ಜನಕಪುರಿ ಕನ್ನಡ ಕೂಟ



ಕರ್ನಾಟಕ ಏರ್ ಸ್ಟ್ರೈಕರ್ಸ್–ಬಿ



ಜಿಎಸ್‌ಬಿ ಟೈಗರ್ಸ್




ಕರ್ನಾಟಕ ಭವನ ಮತ್ತು ಕನ್ನಡ ಗೆಳೆಯರು ತಂಡ




**ಪಂದ್ಯಾವಳಿಯಲ್ಲಿ ರನ್ನರ್ಸ್ ಅಪ್ ಆದ ಕರ್ನಾಟಕ ಕಮಾಂಡೋಸ್ ತಂಡ**

ಪೂಸಾ ವಾರಿಯರ್ಸ್ ತಂಡವು 3 ವಿಕೆಟ್‌ಗಳಿಂದ ಜಯ ಸಾಧಿಸಿತು.

**ಐದನೇ ಪಂದ್ಯ**–ಕರ್ನಾಟಕ ಕಮಾಂಡೋಸ್ ಮತ್ತು ಡೆಲ್ಲಿ ಪವರ್ ಸ್ಟಾರ್ಸ್ ತಂಡಗಳ ನಡುವೆ ತುಂಬಾ ಪೈಪೋಟಿಯಾಗಿ ನಡೆದ ಪಂದ್ಯದಲ್ಲಿ ಡೆಲ್ಲಿ ಪವರ್ ಸ್ಟಾರ್ಸ್ ತಂಡವು ಸೋಲನ್ನು ಅನುಭವಿಸಿತು. ಕರ್ನಾಟಕ ಕಮಾಂಡೋಸ್ ತಂಡದ ಆಟಗಾರ ಕೃಷ್ಣ ಅವರು ಪಂದ್ಯ ಪುರುಷೋತ್ತಮರಾದರು.

**ಆರನೇ ಪಂದ್ಯ**–ಕರ್ನಾಟಕ ಏರ್ ಸ್ಟ್ರೈಕರ್ಸ್–ಬಿ ಮತ್ತು ಶಿವಸಾಯಿ–ಎ ತಂಡಗಳ ನಡುವೆ ನಡೆದ ಹಣಾಹಣಿಯಲ್ಲಿ ಕರ್ನಾಟಕ ಏರ್ ಸ್ಟ್ರೈಕರ್ಸ್–ಬಿ ತಂಡವು ಜಯ ಸಾಧಿಸಿತು.

**ಏಳನೇ ಪಂದ್ಯ**–ಜೆಎಸ್‌ಎಸ್ ಚಾಂಪಿಯನ್ಸ್ ಮತ್ತು ಕರ್ನಾಟಕ ಏರ್ ಸ್ಟ್ರೈಕರ್ಸ್–ಎ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಜೆಎಸ್‌ಎಸ್ ಚಾಂಪಿಯನ್ಸ್ ತಂಡವು ಜಯ ಸಾಧಿಸಿತು.

ಎರಡನೇ ದಿನ 11.05.2025 ರಂದು ಭಾನುವಾರ ಉಳಿದ ನಾಕ್ ಔಟ್ ಪಂದ್ಯಗಳು ಮತ್ತು ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳು ನಡೆದವು.

**ಎಂಟನೇ ಪಂದ್ಯ**–ಶಿವಸಾಯಿ–ಸಿ ಮತ್ತು ಕರ್ನಾಟಕ ಅಡ್ವೊಕೇಟ್ಸ್ ತಂಡಗಳ ನಡುವೆ ನಡೆದು ಶಿವಸಾಯಿ–ಸಿ ತಂಡವು 10 ವಿಕೆಟ್‌ಗಳಿಂದ ಜಯ ಸಾಧಿಸಿತು.

**ಒಂಭತ್ತನೇ ಪಂದ್ಯ**–ಮೊದಲ ಕ್ವಾಟರ್ ಫೈನಲ್ ಪಂದ್ಯವು ಕನ್ನಡ ಗೆಳೆಯರು ಮತ್ತು ಜಿಎಸ್‌ಬಿ ಕ್ರಿಕೆಟರ್ಸ್ ತಂಡಗಳ ನಡುವೆ ನಡೆಯಿತು. ಪಂದ್ಯದಲ್ಲಿ ಕನ್ನಡ ಗೆಳೆಯರು ತಂಡವು ಉತ್ತಮ ಬ್ಯಾಟಿಂಗ್ ಪ್ರದರ್ಶನ ಮಾಡಿ ಸೆಮಿಫೈನಲ್ ತಲುಪಿತು. ಈ ಪಂದ್ಯಾವಳಿಯಲ್ಲಿ ಜಿಎಸ್‌ಬಿ ಟೈಗರ್ಸ್ ತಂಡದ 11 ವರ್ಷದ ಆಟಗಾರ ಕು. ಶೌರ್ಯ ಭಂಡಾರ್‌ಕರ್ ಅವರ ಆಲ್‌ರೌಂಡ್ ಆಟ ಪ್ರದರ್ಶನ ಎಲ್ಲಾ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

**ಹತ್ತನೇ ಪಂದ್ಯ**–ಶಿವಸಾಯಿ–ಬಿ ಮತ್ತು ಪೂಸಾ ವಾರಿಯರ್ಸ್ ತಂಡಗಳ ನಡೆಯಿತು. ಪೂಸಾ ವಾರಿಯರ್ಸ್ ತಂಡವು ಉತ್ತಮ ಆಲ್‌ರೌಂಡ್ ಪ್ರದರ್ಶನದಿಂದ ಸೆಮಿಫೈನಲ್ ಪ್ರವೇಶಿಸಿತು.

**ಹನ್ನೊಂದನೇ ಪಂದ್ಯ**–ಕರ್ನಾಟಕ ಕಮಾಂಡೋಸ್



**ಫೈನಲ್ ಪಂದ್ಯ ಪುರುಷೋತ್ತಮ,**
**ಶ್ರೇಷ್ಠ ಬೌಲರ್ ಮತ್ತು ಮ್ಯಾನ್ ಆಫ್ ದಿ ಸೀರಿಸ್ ಪ್ರಶಸ್ತಿ ಪಡೆದ ಕನ್ನಡ ಗೆಳೆಯರು ತಂಡದ ನಾಯಕ ಇಸ್ಮಾಯಿಲ್ ಮಕಂದರ್**

ಮತ್ತು ಕರ್ನಾಟಕ ಏರ್ ಸ್ಟ್ರೈಕರ್ಸ್–ಬಿ ತಂಡಗಳ ನಡುವೆ ನಡೆಯಬೇಕಿತ್ತು. ಅನಿವಾರ್ಯ ಕಾರಣಗಳಿಂದ ಕರ್ನಾಟಕ ಏರ್ ಸ್ಟ್ರೈಕರ್ಸ್–ಬಿ ತಂಡದ ಆಟಗಾರರು ಲಭ್ಯವಿರದಿದ್ದರಿಂದ ಕರ್ನಾಟಕ ಕಮಾಂಡೋಸ್ ತಂಡಕ್ಕೆ ವಾಕ್ ಒವರ್ ಸಿಕ್ಕಿ ಅದು ಸೆಮಿಫೈನಲ್ ತಲುಪಿತು.

**ಹನ್ನೆರಡನೇ ಪಂದ್ಯ**–ಜೆಎಸ್‌ಎಸ್ ಚಾಂಪಿಯನ್ಸ್ ಮತ್ತು ಶಿವಸಾಯಿ–ಸಿ ತಂಡಗಳ ನಡುವೆ ನಡೆದ ಕೊನೆಯ ಕ್ವಾಟರ್ ಫೈನಲ್‌ನಲ್ಲಿ ಜೆಎಸ್‌ಎಸ್ ಚಾಂಪಿಯನ್ಸ್ ತಂಡವು ಜಯ ಗಳಿಸಿ ಸೆಮಿಫೈನಲ್ ತಲುಪಿದ ನಾಲ್ಕನೇ ತಂಡವಾಯಿತು. ಹೆಚ್ಚು ಸಿಕ್ಸರ್ ಸಿಡಿಸಿದ ಜೆಎಸ್‌ಎಸ್ ತಂಡದ ಶ್ರೀ ಬಿ.ಪಿ. ಮಹದೇವಸ್ವಾಮಿ ಅವರಿಗೆ ಶ್ರೀ ಟಿ.ಎಂ. ಮೈಲಾರಪ್ಪ ನಗದು ಬಹುಮಾನ ನೀಡಿದರು.

**ಹದಿಮೂರನೇ ಪಂದ್ಯ**–ಮೊದಲ ಸೆಮಿಫೈನಲ್



**ಶ್ರೇಷ್ಠ ಆಲ್ ರೌಂಡರ್ ಪ್ರಶಸ್ತಿಗೆ ಭಾಜನರಾದ ಕರ್ನಾಟಕ ಕಮಾಂಡೋಸ್ ತಂಡದ ಆಟಗಾರ ಕೃಷ್ಣ**



**ಜಿಎಸ್‌ಬಿ ಟೈಗರ್ಸ್ ತಂಡದ 11 ವರ್ಷದ ಆಟಗಾರ ಕು. ಶೌರ್ಯ ಭಂಡಾರ್‌ಕರ್**

ಕನ್ನಡ ಗೆಳೆಯರು ಮತ್ತು ಪೂಸಾ ವಾರಿಯರ್ಸ್ ತಂಡಗಳ ನಡುವೆ ನಡೆಯಿತು. ತುಂಬಾ ರೋಚಕವಾಗಿ ನಡೆದ ಈ ಪಂದ್ಯದಲ್ಲಿ ಕನ್ನಡ ಗೆಳೆಯರು ತಂಡವು 9 ರನ್ನುಗಳಿಂದ ಗೆಲುವು ಸಾಧಿಸಿ ಫೈನಲ್ ಪ್ರವೇಶಿಸಿತು.

**ಹದಿನಾಲ್ಕನೇ ಪಂದ್ಯ**–ಎರಡನೇ ಸೆಮಿಫೈನಲ್ ಕರ್ನಾಟಕ ಕಮಾಂಡೋಸ್ ಮತ್ತು ಜೆಎಸ್‌ಎಸ್ ಚಾಂಪಿಯನ್ಸ್ ತಂಡಗಳ ನಡುವೆ ನಡೆದು ಕರ್ನಾಟಕ

ಕಮಾಂಡೋಸ್ ತಂಡವು ಜಯಗಳಿಸಿ ಫೈನಲ್ ಪ್ರವೇಶಿಸಿತು.

**ಸಂಜೆ ನಡೆದ ಫೈನಲ್ ಪಂದ್ಯದಲ್ಲಿ ಕನ್ನಡ ಗೆಳೆಯರು ತಂಡವು ಕರ್ನಾಟಕ ಕಮಾಂಡೋಸ್ ತಂಡವನ್ನು 1 ರನ್ನಿನಿಂದ ಮಣಿಸಿ ಜಯಭೇರಿ ಗಳಿಸಿತು.**

ಈ ವರ್ಷದ ಪಂದ್ಯಾವಳಿಯಲ್ಲಿ ಪ್ರತಿ ತಂಡದ ಎಲ್ಲಾ ಸದಸ್ಯರಿಗೆ ಸಂಘದ ವತಿಯಿಂದ ಕ್ಯಾಪ್‌ಗಳನ್ನು ನೀಡಲಾಗಿತ್ತು. ಪ್ರತಿ ಪಂದ್ಯದ ಉತ್ತಮ ಆಟಗಾರರಿಗೆ ಟೀ ಶರ್ಟ್ ನೀಡಿ 'ಪಂದ್ಯ ಪುರುಷೋತ್ತಮ' ಗೌರವ ಪ್ರದಾನ ಮಾಡಲಾಯಿತು. ಎರಡೂ ದಿನಗಳಲ್ಲಿ ಬೆಳಗ್ಗಿನ ತಿಂಡಿ, ಉಪಾಹಾರ, ಮಧ್ಯಾಹ್ನದ ಊಟ, ಉಪಚಾರ, ಕಾಫಿ, ಟೀ, ಪಾನಕ, ಜ್ಯೂಸ್, ಪಕೋಡಾ ಹೀಗೆ ಎಲ್ಲದರ ಆಯೋಜನೆಯನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಏರ್ಪಡಿಸಲಾಗಿತ್ತು. ಹೀಗೆ ಕ್ರಿಕೆಟ್ ಪ್ರಿಯರಿಗೆ ಕಿಂಚಿತ್ತೂ ಬೇಸರ ಬರದಂತೆ ನೋಡಿಕೊಂಡಿದ್ದರಿಂದ ಪ್ರೇಕ್ಷಕರು 42 ಡಿಗ್ರಿ ಹೀಟ್ ಅನ್ನೂ ಮರೆತು ಕ್ರಿಕೆಟ್ ಪಂದ್ಯಗಳ ರಸದೌತಣ ಸವಿದರು.

ಇತರರೊಂದಿಗೆ ವೀಕ್ಷಕ ವಿವರಣೆ ನೀಡಿದ ಶ್ರೀ ಶೇಖರಪ್ಪ ಅವರ ಮೆಚ್ಚುಗೆ ಮಾತುಗಳು: ಈ ಬಾರಿಯ ವಿಶೇಷವೆಂದರೆ, ಹಿರಿಯ ದೆಹಲಿ ಕನ್ನಡಿಗರಾದ ಶ್ರೀಯುತ ಎನ್.ಎ. ಮಾಧವ ಸರ್ ಕೂಡಾ ಕ್ರಿಕೆಟ್ ವೀಕ್ಷಣೆಗೆ ಬಂದಿದ್ದು ಮತ್ತು ನಮ್ಮೊಟ್ಟಿಗೆ ಆಟದ ಮಜಾ ಸವಿದಿದ್ದು. ನನಗೂ ಶ್ರೀ ನವೀನ್‌ರವರು ಕರೆದು ಕಾಮೆಂಟರಿ ಮಾಡಲು ಕೊಟ್ಟಿದ್ದರಿಂದ, ನಾನು ಪ್ರತಿ ಬಾಲ್ ಎಂಜಾಯ್ ಮಾಡಿದೆನು, ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು, ಕ್ರೀಡಾ ಸಮಿತಿಯ ಅಧ್ಯಕ್ಷೆ ಶ್ರೀಮತಿ ಅಶ್ವಿನಿ ಮೇಡಂ ಮತ್ತು ಸಂಚಾಲಕ ಶ್ರೀ ನವೀನ್ ಕುಮಾರ್ ವಿ., ಸದಸ್ಯ ಶ್ರೀ ಕೆ.ಎಸ್. ಮೂರ್ತಿಯವರು, ಜಂಟಿ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ಅವರು, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ಮತ್ತು ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ ಅವರು ಹಾಗು ಎಲ್ಲಾ ತಂಡಗಳ ಅಭಿಮಾನಿಗಳು ನೆರೆದಿದ್ದರು. ಎಲ್ಲರೂ ತಮ್ಮ ತಮ್ಮ ಜವಾಬ್ದಾರಿಯನ್ನು ನಿಭಾಯಿಸಿ ಪಂದ್ಯಾವಳಿಯನ್ನು ಬೇಗನೇ ಮುಗಿಸಿದರು. ಬಹಳ ಸೊಗಸಾಗಿ ಈ ಪಂದ್ಯಾವಳಿ ಮೂಡಿಬಂದಿದೆ ಎಂದು ಶೇಖರಪ್ಪ ಅನಿಸಿಕೆ ವ್ಯಕ್ತಪಡಿಸಿದರು.

ಪಂದ್ಯಾವಳಿಯ ಕೊನೆಯಲ್ಲಿ ಗೆದ್ದವರಿಗೆ ವಿನ್ನರ್ಸ್ ಟ್ರೋಫಿ ಮತ್ತು ಬಹುಮಾನಗಳನ್ನು ಹಾಗು ಎರಡನೇ ಸ್ಥಾನ ಪಡೆದ ತಂಡಕ್ಕೆ ರನ್ನರ್ಸ್ ಕಪ್ ವಿತರಣೆ ಮಾಡಲಾಯಿತು. ಫೈನಲ್ ಪಂದ್ಯದ ಪುರುಷೋತ್ತಮ: ಶ್ರೇಷ್ಠ ಬೌಲರ್ ಮತ್ತು ಮ್ಯಾನ್ ಆಫ್ ದಿ ಸೀರಿಸ್– ಇಸ್ಮಾಯಿಲ್ ಮಕಂದರ್ ಮತ್ತು ಶ್ರೇಷ್ಠ ಆಲ್ ರೌಂಡರ್–ಕೃಷ್ಣ ಆಯಾ ಪ್ರಶಸ್ತಿ ಸ್ವೀಕರಿಸಿದರು.

ಚಿರಕಾಲ ನೆನಪಿನಲ್ಲಿ ಉಳಿಯುವಂತಹ ಈ ಬಾರಿಯ ಪಂದ್ಯಾವಳಿ ಯಶಸ್ವಿಯಾಗಿ ಆಯೋಜನೆಯಾಗಿತ್ತು. ದೆಹಲಿ ಕರ್ನಾಟಕ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮತ್ತು ಕ್ರೀಡಾ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಅಶ್ವಿನಿ ಬಿ.ಎಸ್., ಸಂಚಾಲಕ ಶ್ರೀ ನವೀನ್ ಕುಮಾರ್ ವಿ., ಜಂಟಿ ಕಾರ್ಯದರ್ಶಿ ಶ್ರೀ ನಾರಾಯಣ ಬಿ. ಅವರು ಭಾಗವಹಿಸಿದ ಎಲ್ಲಾ ಆಟಗಾರರಿಗೂ, ಅಂಪೈರ್ಸ್, ಸ್ಕೋರರ್ಸ್ ಮತ್ತು ವೀಕ್ಷಕ ವಿವರಣೆ ನೀಡಿದ ಶ್ರೀ ಶ್ರೀಹರಿಶೇಖರ್, ಶ್ರೀ ಕೆ.ಎಸ್. ಮೂರ್ತಿ, ಶ್ರೀ ಶಿವಕುಮಾರ್ ಮತ್ತಿತರ ದೆಹಲಿ ಕನ್ನಡಿಗರಿಗೆ ಹಾಗೂ ಮೈದಾನಕ್ಕೆ ಬಂದು ಪ್ರೋತ್ಸಾಹ ನೀಡಿದ ದೆಹಲಿ ಎನ್.ಸಿ.ಆರ್. ಕನ್ನಡಿಗರಿಗೆ ಧನ್ಯವಾದಗಳನ್ನು ತಿಳಿಸಿದರು.



ಜೆಎಸ್‌ಎಸ್ ಚಾಂಪಿಯನ್ಸ್



ಕರ್ನಾಟಕ ಅಡ್ವೊಕೇಟ್ಸ್


ಕರ್ನಾಟಕ ಕಮಾಂಡೋಸ್



ಈ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿದ ಎಲ್ಲಾ ತಂಡದ ಆಟಗಾರರಿಗೆ ಸಂಘದ ವತಿಯಿಂದ ಕ್ಯಾಪ್‌ಗಳನ್ನು ನೀಡಲಾಗಿತ್ತು. ಎಲ್ಲಾ ಪಂದ್ಯಗಳನ್ನು ವ್ಯವಸ್ಥಿತವಾಗಿ ಆಯೋಜಿಸಲು ಸಹಕರಿಸಿದ ನಮ್ಮ ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಉಪಾಧ್ಯಕ್ಷರು, ಖಜಾಂಚಿ, ಜಂಟಿ ಕಾರ್ಯದರ್ಶಿಗಳು ಸಮಿತಿ ಸದಸ್ಯರುಗಳಿಗೆ ಕೃತಜ್ಞತೆಗಳು.❑

***ಶ್ರೀ ನವೀನ್ ಕುಮಾರ್ ವಿ.***

ಸಂಚಾಲಕರು ಮತ್ತು

***ಶ್ರೀಮತಿ ಅಶ್ವಿನಿ ಬಿ.ಎಸ್.***

ಅಧ್ಯಕ್ಷರು, ಕ್ರೀಡಾ ಸಮಿತಿ, ದೆ.ಕ.ಸಂಘ

# ಸಂಘದಲ್ಲಿ ವೈಶಿಷ್ಟಪೂರ್ಣವಾಗಿ ವಿಶ್ವಗುರು ಬಸವಣ್ಣ ಹಾಗು ವೈರಾಗ್ಯನಿಧಿ ಅಕ್ಕಮಹಾದೇವಿ ಜಯಂತಿ ಆಚರಣೆ



**ಇವನಾರವ, ಇವನಾರವ ಇವನಾರವನೆಂದೆನಿಸದಿರಯ್ಯಾ, ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದಿನಿಸಯ್ಯಾ, ಕೂಡಲ ಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ** ಎಂಬ ಎಲ್ಲರನ್ನೂ ಒಂದುಗೂಡಿಸುವ ಸಂದೇಶವನ್ನು 12ನೇ ಶತಮಾನದಲ್ಲಿಯೇ ತಮ್ಮ ವಚನಗಳ ಮೂಲಕ ಸಾರಿದವರು ಸಮಾನತೆಯ ಹರಿಕಾರ, ಅನುಭವ ಮಂಟಪದ ಸ್ಥಾಪಕ, ಭಕ್ತಿ ಭಂಡಾರಿ **ಬಸವಣ್ಣನವರು.** ಹಾಗೆಯೇ, **ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ? ಸಮುದ್ರದ ತಡಿಯಲೊಂದು ಮನೆಯ ಮಾಡಿ ನೊರೆ ತೊರೆಗಳಿಗಂಜಿದಡೆಂತಯ್ಯಾ? ಸಂತೆಯೊಳಗೊಂದು ಮನೆಯ ಮಾಡಿ, ಶಬ್ದಕ್ಕೆ ನಾಚಿದಡೆಂತಯ್ಯಾ? ಚೆನ್ನಮಲ್ಲಿಕಾರ್ಜುನ ದೇವ, ಕೇಳಯ್ಯಾ, ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದನೆಗಳು ಬಂದೆಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು** ಎಂದು ಈ ವಚನದ ಮೂಲಕ ಪ್ರಪಂಚದಲ್ಲಿ ಹೊಗಳಿಕೆ, ತೆಗಳಿಕೆ, ನಿಂದನೆ, ಅಪಮಾನಗಳನ್ನು ಶಾಂತ ಚಿತ್ತದಿಂದ ಸ್ವೀಕರಿಸುತ್ತಾ ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ಜನರು ಮಾಡುತ್ತಾ ಹೋಗಬೇಕೆಂದು ಸಾರಿದವರು ಕನ್ನಡದ ಮಹಾ ಕವಯತ್ರಿ, ವೈರಾಗ್ಯ ನಿಧಿ, ಸ್ತ್ರೀ ಶಕ್ತಿಯ ಸ್ವಾಭಿಮಾನದ ಪ್ರತೀಕ, ಸ್ತ್ರೀ ಸಮಾನತೆ ಪ್ರತಿಪಾದಕಿ **ಅಕ್ಕಮಹಾದೇವಿಯವರು.** ಬಸವಣ್ಣ ಹಾಗು ಅಕ್ಕಮಹಾದೇವಿ ಇವರಿಬ್ಬರೂ ಪ್ರಾತಃಸ್ಮರಣೀಯರು.

ದೆಹಲಿ ಕರ್ನಾಟಕ ಸಂಘವು ಕಳೆದ ಹಲವಾರು ವರ್ಷಗಳಿಂದ ನಿರಂತರವಾಗಿ ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿಯನ್ನು ಆಚರಿಸುತ್ತಾ ಬಂದಿದ್ದು, ಪ್ರತಿ ವರ್ಷ ದೆಹಲಿಯ ಎಲ್ಲಾ ಕನ್ನಡಿಗರೊಡಗೂಡಿ ವೈವಿಧ್ಯಮಯ ಕಾರ್ಯಕ್ರಮಗಳಿಂದ ಬಹಳ ಅರ್ಥಪೂರ್ಣವಾಗಿ ಸಂಭ್ರಮಿಸಲಾಗಿದೆ. ಅದೇ ನಿಟ್ಟಿನಲ್ಲಿ ಈ ವರ್ಷವೂ ಸಹ ದಿನಾಂಕ **04.05.2025** ರಂದು ಭಾನುವಾರ ಸಂಜೆ ಸಂಘದ ಸಭಾಂಗಣದಲ್ಲಿ ವೈಶಿಷ್ಟಪೂರ್ಣವಾಗಿ ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿಯನ್ನು ಹಮ್ಮಿಕೊಳ್ಳಲಾಗಿತ್ತು. ಆರಂಭದಲ್ಲಿ ಶ್ರೀ ಭೀಮಸೇನ ಭಜಂತ್ರಿ ಅವರು ಹಾರ್ಮೋನಿಯಂ ವಾದ್ಯ ನುಡಿಸುತ್ತಾ ಅಲ್ಲಮ ಪ್ರಭು ಅವರ ವಚನ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿದರು.

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಲಿಂಗಾಯತ ಪಂಚಮಸಾಲಿ ಪೀಠ ಕೂಡಲ ಸಂಗಮದ ಪರಮಪೂಜ್ಯ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿಯವರು ದಿವ್ಯ ಸಾನಿಧ್ಯ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಗಳಾದ ಡಾ. ಕೆ.ಜೆ. ಶ್ರೀನಿವಾಸ್ ಐಎಫ್‌ಎಸ್, ದೆಹಲಿ ಜಲ ಮಂಡಳಿ (ಡಿಜೆಬಿ) ಯ ಹೆಚ್ಚುವರಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ (ಸಿಇಓ) ಶ್ರೀ ಸಚಿನ್ ರಾಣಾ ಐಎಎಸ್, ಶ್ರೀ ಅಮರನಾಥ ತಲವಾಡೆ ಐಎಎಸ್ ನಿವೃತ್ತ ಕಾರ್ಯದರ್ಶಿ, ಭಾರತ ಸರ್ಕಾರ ಮತ್ತು ಪ್ರಸ್ತುತ ಅಧ್ಯಕ್ಷರು ಬಸವ ಇಂಟರ್‌ನ್ಯಾಷನಲ್ ಸೆಂಟರ್, ನವದೆಹಲಿ ಹಾಗು ಕೇಂದ್ರ ಸರ್ಕಾರದ ಭಾರಿ ಕೈಗಾರಿಕಾ ಸಚಿವರ ಹೆಚ್ಚುವರಿ ಆಪ್ತ ಕಾರ್ಯದರ್ಶಿಗಳಾದ ಶ್ರೀ ಅಮರೇಶ್ವರ ಪಾಟೀಲ್ ಐಆರ್‌ಎಸ್ ಅವರುಗಳು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅತಿಥಿ ಗಣ್ಯರ ಜೊತೆ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಪ್ರಭಾಕರ ಮಡ್ಡಿತೋಟ್ ಅವರು ನಿರ್ವಹಿಸಿದರು. ಆರಂಭದಲ್ಲಿ ಸಂಘದ ಮುಖವಾಣಿ ಅಭಿಮತ ಪತ್ರಿಕೆಯ ಪ್ರಧಾನ ಸಂಪಾದಕ ಶ್ರೀ ಕೆ.ಎಸ್. ಮೂರ್ತಿ ಅವರು ಪೂಜ್ಯ ಸ್ವಾಮೀಜಿಯವರನ್ನು, ಎಲ್ಲ ಅತಿಥಿಗಣ್ಯರನ್ನು ಹಾಗು ಸಭಾಂಗಣದಲ್ಲಿ ಉಪಸ್ಥಿತರಿದ್ದ ದೆಹಲಿ ಕನ್ನಡಿಗರನ್ನು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಕು. ಅನರ್ಘ್ಯ ಹಾಡಿದ ಪ್ರಾರ್ಥನಾ ಗೀತೆ ಹಿನ್ನೆಲೆಯಲ್ಲಿ ವೇದಿಕೆ ಮೇಲಿದ್ದವರಿಂದ ಗುರು ಬಸವಣ್ಣ ಹಾಗು ಅಕ್ಕಮಹಾದೇವಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮತ್ತು ದೀಪ ಪ್ರಜ್ವಲನೆಯೊಂದಿಗೆ ಸಭಾ ಕಾರ್ಯಕ್ರಮ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಪೂಜ್ಯ ಸ್ವಾಮೀಜಿ ಅವರು ಎಲ್ಲರಿಗೂ ಬಸವಣ್ಣನವರ ಎರಡು ವಚನಗಳ ವಾಚನ ಮಾಡಿಸಿದರು.



ಮುಖ್ಯ ಅತಿಥಿಗಳಲ್ಲಿ ಮೊದಲಿಗೆ ಮಾತನಾಡಿದ **ಡಾ. ಕೆ.ಜೆ. ಶ್ರೀನಿವಾಸ** ಅವರು ಇಂದು ನಮ್ಮ ಕರ್ನಾಟಕದ ಅತ್ಯಂತ ಪ್ರಸಿದ್ಧರಾದಂತಹ ಬಸವಣ್ಣನವರು ಹಾಗೂ ಜಗನ್ಮಾತೆ ಅಕ್ಕಮಹಾದೇವಿ ಅವರ ಜಯಂತಿ ಆಚರಣೆ ಮಾಡ್ತಾ ಇದ್ದೇವೆ, ದೆಹಲಿಯಲ್ಲಿ ಈ ರೀತಿಯಾದ ಒಂದು ಆಚರಣೆ ಕಳೆದ ತಿಂಗಳು 30 ನೇ ತಾರೀಖು ಪಾರ್ಲಿಮೆಂಟಿನ ಅಂಗಳದಲ್ಲಿ ಮೊಟ್ಟ ಮೊದಲನೇ ಬಾರಿಗೆ ದೆಹಲಿ ಕರ್ನಾಟಕ ಸಂಘದ ವತಿಯಿಂದ ಮಾಡಲಾಯಿತು. ಅದರಲ್ಲಿ ಭಾರತ ಸರ್ಕಾರದ ಮಂತ್ರಿಗಳು, ಸಂಸದರು ಹಾಗೂ ಬಹಳಷ್ಟು ಜನ ಸೇರಿದ್ದರೆಂದು ಕೇಳಿದ್ದೇನೆ ಮತ್ತು ಓದಿದ್ದೇನೆ,. ನಾವೆಲ್ಲರೂ ಪ್ರಯತ್ನಪಟ್ಟು ಮುಂದಿನ ವರ್ಷ ಈ ಒಂದು ಸಮಾರಂಭಕ್ಕೆ ಮಾನ್ಯ ಪ್ರಧಾನಮಂತ್ರಿಗಳನ್ನು ಕರೆಸಿ ಬಸವಣ್ಣ ಜಯಂತಿ ಕಾರ್ಯಕ್ರಮವನ್ನು ಮಾಡಬೇಕು ಎಂದು ಸಂಘದ ಅಧ್ಯಕ್ಷರು ಹೇಳಿದ್ದಾರೆ ಎಂದರು.

ಬಸವಣ್ಣನವರು ಸಮಾಜದಲ್ಲಿ ತಂದ ಕ್ರಾಂತಿ 'ಬೆಳೆಯುವ ಸಿರಿ ಮೊಳಕೆಯಲ್ಲಿ' ಗೊತ್ತಾಗುತ್ತೆ ಎನ್ನುವ ಹಾಗೆ ಎಂಟನೇ ವಯಸ್ಸಿನಲ್ಲಿ ಅವರಿಗೆ ಜನಿವಾರ ಕಟ್ಟಲಿಕ್ಕೆ ಹೋದಾಗ ನನಗೆ ಬೇಡ ನನಗಿಂತ ದೊಡ್ಡವಳಾದ ನನ್ನ




**ಕಾರ್ಯಕ್ರಮದಲ್ಲಿ ಸ್ಥಳೀಯ ಮಕ್ಕಳಿಂದ ವಚನ ವಾಚನ, ಗಾಯನ, ವಚನ ರೂಪಕ ಮತ್ತು ನೃತ್ಯಗಳ ಪ್ರಸ್ತುತಿ**














ಸಹೋದರಿಗೆ ಕಟ್ಟರಿ ಎಂದು ಹೇಳುತ್ತಾರೆ. ಆ ಸಣ್ಣ ವಯಸ್ಸಿನಲ್ಲಿಯೇ ಪುರುಷರು ಮತ್ತು ಮಹಿಳೆಯರಿಗೆ ಸಮಾನತೆ ಇರಬೇಕು, ಬೇಧ ಭಾವ ಇರಬಾರದೆಂದು 12ನೇ ಶತಮಾನದಲ್ಲಿಯೇ ಯೋಚನೆ ಮಾಡಿದ ಧೀಮಂತ ಮಹಾ ನಾಯಕ ಅವರು ಎಂದರು. ನಿಮಗೆಲ್ಲ ಗೊತ್ತಿರುವ ಹಾಗೆ ದೇವರು ಬೇರೆ ಎಲ್ಲೂ ಇಲ್ಲ, ನಮ್ಮೊಳಗೇ ಇದ್ದಾನೆಯಂತ ಬಹಳಷ್ಟು ಭಾರತದ ದಾರ್ಶನಿಕರು ಹೇಳ್ತಾ ಇದ್ದರು, ನಮ್ಮ ಸನಾತನ ಧರ್ಮದಲ್ಲಿಯೂ ಅದು ನಡೆದುಕೊಂಡು ಬಂದಿದೆ. ಅದನ್ನು ಬಸವಣ್ಣನವರು ಕಾರ್ಯರೂಪಕ್ಕೆ ತಂದು ಸಮಾಜದಲ್ಲಿ ನಮ್ಮೆಲ್ಲರಿಗೆ ಸಮಾನತೆ ತಂದು ಕೊಟ್ಟರು. ಬಸವಣ್ಣನವರ ವಚನಗಳಲ್ಲಿ ಕಾಮನ್ ಸೆನ್ಸ್ ತುಂಬಿದೆ, ಲೈಫ್ ಗಿವಿಂಗ್ ಸ್ಕಿಲ್ಸ್ ಮತ್ತು ಲೈಫ್ ಲಿವಿಂಗ್ ಸ್ಕಿಲ್ಸ್ ಇವೆ. ಎಷ್ಟೋ ಜನ ಇಲ್ಲಿ ವೆಜಿಟೇರಿಯನ್ಸ್ ಇರಬಹುದು, ಪ್ರಾಣಿ ಬಲಿ ಅಥವಾ ಹಿಂಸೆ ಕೊಡುವುದು ವೇದ ಪುರಾಣಗಳಲ್ಲಿ ಇತ್ತು, ದಾರ್ಶನಿಕವಾಗಿ ನಾವು ಸುಳ್ಳು ಹೇಳುವುದು ತಪ್ಪು, ಕೊಲೆ ಸುಲಿಗೆ ಮಾಡುವುದು ತಪ್ಪು ಎನ್ನುವುದೆಲ್ಲವನ್ನು ಬಸವಣ್ಣನವರು ತಮ್ಮ ವಚನಗಳ ಮೂಲಕ, ಒಂದು ಯೋಚನೆ ಮೂಲಕ ಅವರು ಮಹಾಮಾನವತಾವಾದಿಯಾಗಿ ಜನಗಳಿಗೆ 'ಕಾಯಕವೇ ಕೈಲಾಸ' ಎಂಬುದನ್ನು ಹೇಳಿಕೊಟ್ಟರು ಮತ್ತು ಅದರ ತತ್ವಗಳನ್ನು ಪಾಲಿಸಲು ನಮ್ಮ ಜೀವನದಲ್ಲಿ ಹೇಗೆ ಪ್ರಾಮುಖ್ಯತೆ ಕೊಡಬೇಕೆಂದು ತಿಳಿಸಿಕೊಟ್ಟರು ಎಂದರು.

ಮುಂದುವರಿದು ಮಾತನಾಡುತ್ತಾ, ಸಾಹಿತ್ಯ ಕ್ಷೇತ್ರಕ್ಕೆ ವಚನ ಸಾಹಿತ್ಯ ಒಂದು ಅಪೂರ್ವವಾದ ಕೊಡುಗೆ ನೀಡಿದೆ, ಬಸವಣ್ಣನವರ ಸುಮಾರು ಒಂದೂವರೆ ಸಾವಿರ ವಚನಗಳ ಸಂಗ್ರಹವಿದೆ, ಜೀವನದ ಎಲ್ಲಾ ಭಾಗಗಳ (all aspects of life) ಬಗ್ಗೆ ಬರೆದಿರುವ ಈ ವಚನಗಳಲ್ಲಿ, ಅವುಗಳ ಮೌಲ್ಯ ತಿಳಿಸಿಕೊಟ್ಟು, ಸಮಾಜಮುಖಿಯಾಗಿ ಕೆಲಸ ಮಾಡಲು ಹೇಗೆ ಬೆಳವಣಿಗೆ ಮಾಡಿಕೊಳ್ಳಬಹುದೆನ್ನುವುದನ್ನು ಅವರು ಸಾರಿದ್ದಾರೆ, ಅವರ ನೆನಪಿನಲ್ಲಿ ವಚನಗಳನ್ನ ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಅವರ ಜಯಂತಿ ಆಚರಣೆಗೆ ನಿಜವಾದ ಅರ್ಥ ಬರುತ್ತದೆ ಎಂದರು. ಗುರುಗಳೊಬ್ಬರು ಹೇಳಿದ ಹಾಗೆ ಜಗತ್ತು ಇವತ್ತು ಬಸವಣ್ಣನವರ ವಚನದ ಮೇಲೆ ನಿಂತಿದೆ, ಬಸವಣ್ಣನವರ ದಾರ್ಶನಿಕ ಮನೋಭಾವ ಇಡೀ ಜಗತ್ತಿಗೆ ಅನುಕೂಲವಾಗುವಂತದ್ದು, ತಮ್ಮ ಅನುಭವಗಳ ಮೂಲಕ ಅನುಭವ ಮಂಟಪವನ್ನು ಸ್ಥಾಪಿಸಿ, ಅದರಿಂದ ಎಲ್ಲಾ ಜಾತಿ ಮತ್ತು ಧರ್ಮದವರಿಗೆ ಅವಕಾಶ ಕಲ್ಪಿಸಿಕೊಟ್ಟು, ಸಮಾಜದಲ್ಲಿ ಮೊಟ್ಟ ಮೊದಲ ಬಾರಿಗೆ ಒಂದು ಜಾತ್ಯಾತೀತ ಭಾವನೆಯನ್ನು ಪ್ರತಿಪಾದನೆ ಮಾಡಿದವರು ನಮ್ಮ ಬಸವಣ್ಣನವರು, ಅವರನ್ನು ಪ್ರಧಾನಿಯವರು ಎಲ್ಲೆಡೆ ನೆನಪಿಸಿಕೊಳ್ಳುತ್ತಾರೆ, ಆ ಮಹಾ ಚೇತನವನ್ನು ನಾವು ಸದಾ ಜ್ಞಾಪಿಸಿಕೊಳ್ಳಬೇಕು, ಸಾಧ್ಯವಾದರೆ ತಾಯಂದಿರು ತಮ್ಮ ಮಕ್ಕಳಿಗೆ ಮನೆಯಲ್ಲಿ ಕನ್ನಡ ಕಲಿಸುವುದರ ಜೊತೆಗೆ ಒಂದೆರಡು ವಚನಗಳನ್ನ ಹೇಳಿಕೊಡಬೇಕು ಎಂದು ಕರೆ ನೀಡಿದರು.

ಅಕ್ಕಮಹಾದೇವಿ ಅವರ ಬಗ್ಗೆ ಮಾತನಾಡುತ್ತಾ, 12ನೇ ಶತಮಾನದಲ್ಲಿದ್ದಂತಹ ಪುರುಷ ಪ್ರಧಾನ ಸಮಾಜದಲ್ಲಿ ಎಲ್ಲರಿಗೂ ದಾರಿದೀಪವಾದಂತಹ ಆ ಜಗನ್ಮಾತೆ ಎಲ್ಲ ಮಹಿಳೆಯರಿಗೆ ಆದರ್ಶ, ಸಮಾಜಕ್ಕೆ ಅವರ ಕೊಡುಗೆ ಅಪಾರ, ಈಗ ಅವರನ್ನ ಸ್ಮರಿಸುವುದು ಕಡಿಮೆಯಾಗಿ ಕಾಣುತ್ತದೆ, ತಾನು ತನ್ನ ಇಷ್ಟದೇವನನ್ನ ಪೂಜಿಸಲು ಅವರೇನು ತ್ಯಾಗ ಮಾಡಬೇಕಾಯ್ತು, ಆ ಕಷ್ಟದಿಂದ ಹೊರಬಂದು ಜಗತ್ತಿಗೆ ದಾರಿದೀಪವಾದ ಅವರ ಬದುಕಿನ ಬಗ್ಗೆ ನಮ್ಮ ರೀಸರ್ಚರ್ಸ್ ಮತ್ತು ಸ್ಕಾಲರ್ಸ್ ಇನ್ನೂ ಹೆಚ್ಚು ಅಧ್ಯಯನ ಮಾಡಿದರೆ ಸಮಾಜಕ್ಕೆ ಒಳ್ಳೆಯ ಬೆಳಕನ್ನು ತೋರಿಸಬಹುದು ಎಂದು ಡಾ. ಕೆ.ಜೆ. ಶ್ರೀನಿವಾಸ್ ಅಭಿಪ್ರಾಯ ವ್ಯಕ್ತಪಡಿಸಿದರು.



ಮತ್ತೋರ್ವ ಅತಿಥಿ **ಶ್ರೀ ಅಮರೇಶ್ವರ ಪಾಟೀಲ್** ಅವರು ಮಾತನಾಡಿ, ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿಯ ಶುಭಾಶಯಗಳನ್ನು ಎಲ್ಲರಿಗೂ ಹೇಳುತ್ತಾ, ಅಸಮಾನತೆ ಮತ್ತು ಶೋಷಣೆಗಳಿಂದ ತುಂಬಿದ್ದ 12ನೇ ಶತಮಾನದಲ್ಲಿ, ಹೇಗೆ ಬಸವಣ್ಣನವರು ಸಮ ಸಮಾಜ, ಕಲ್ಯಾಣ ಸಮಾಜವನ್ನು ನಿರ್ಮಾಣ ಮಾಡಿದ್ದರು ಎಂಬುದರ ಬಗ್ಗೆ ತಿಳಿಸಿದರು.

ಆಗ ನಡೆದ ವಚನ ಚಳುವಳಿ ಅಥವಾ ಕ್ರಾಂತಿ (revolution) ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕವಾದ ಎಲ್ಲಾ ವಿಷಯಗಳಲ್ಲಿ ಸಂಪೂರ್ಣ ಕ್ರಾಂತಿಯಾಗಿತ್ತು. 12ನೇ ಶತಮಾನದಲ್ಲಿ ಇಡೀ



ಭಾರತ ದೇಶದಲ್ಲಿ ಅಸಮಾನತೆ, ಮೌಢ್ಯಾಚಾರಗಳು ಮತ್ತು ದೇವರ ಹೆಸರಿನಲ್ಲಿ ಶೋಷಣೆ ಸಮಾಜದಲ್ಲಿ ತುಂಬಿತ್ತು, ಇದನ್ನು ಸರಿಪಡಿಸಲು ಬಸವಣ್ಣನವರು ಇಷ್ಟ ಲಿಂಗದ ಪರಿಕಲ್ಪನೆಯನ್ನು ಕೊಟ್ಟರು, ಅಂದರೆ ದೇವರು ದೇವಾಲಯದಲ್ಲಿಲ್ಲ ನಮ್ಮಲ್ಲಿಯೇ ಇದ್ದಾರೆ ಎನ್ನುವ ವಿಚಾರವನ್ನು ತಿಳಿಸಿಕೊಟ್ಟರು. ಹಾಗೇನೇ, ಇಹ ಲೋಕದಲ್ಲೇನು ಇಲ್ಲ ಪರಲೋಕಕ್ಕೆ ಮಾಡಬೇಕೆನ್ನುವ ಭಾವನೆ ತೆಗೆದು, ಈ ಸಂಸಾರದಲ್ಲೇ ಇರಬೇಕು ಇದು ಒಂದು ಕರ್ತಾರನ ಕಮ್ಮಟ, ಇಲ್ಲಿದ್ದೇ ನಾವು ಸಾಧನೆ ಮಾಡಬೇಕೆಂದು ಧಾರ್ಮಿಕ ಭಾವನೆಯಲ್ಲಿ ಸಂದೇಶ ನೀಡಿದ್ದರು ಎಂದು ತಿಳಿಸಿದರು.

ಆ ಕಾಲದಲ್ಲಿ ಇದ್ದ ವರ್ಣ ವ್ಯವಸ್ಥೆಯಲ್ಲಿ ನಾಲ್ಕು ವರ್ಗಗಳ ಜೊತೆ 5ನೇ ವರ್ಗ ಅಂತ್ಯಜ ಅಥವಾ ಅಸ್ಪೃಶ್ಯರು ಇದ್ದರು. ಅಂಥವರನ್ನು ಹೇಗೆ ಸಮಾಜದ ಭಾಗವಾಗಿ ಮಾಡಿ ಮೇಲೆ ತರಬೇಕು, ಅಸಮಾನತೆಯನ್ನು, ವರ್ಣಭೇದವನ್ನು ತೆಗೆದು ಅವರಿಗೆ ಸಾಮಾಜಿಕ ನ್ಯಾಯವನ್ನು ಕೊಡಿಸಬೇಕು ಸಕಲ ಜೀವಾತ್ಮಗಳಿಗೆ ಲೇಸನ್ನು ಬಯಸಬೇಕು

## ಶ್ರೀ ಭೀಮಸೇನ ಭಜಂತ್ರಿ ಅವರಿಂದ ವಚನ ಗಾಯನ












**ಕನ್ನಡ ಕಲಿಕಾ ಕೇಂದ್ರದ ಶಿಕ್ಷಕಿ ಶ್ರೀಮತಿ ರೂಪಶ್ರೀ ನರಸಿಂಹ ಮೂರ್ತಿ ಅವರೊಂದಿಗೆ ಪ್ರದರ್ಶನ ನೀಡಿದ ಮಕ್ಕಳು**

ಎನ್ನುವ ಪರಿಕಲ್ಪನೆಗೆ ಅವರು ಒತ್ತು ಕೊಟ್ಟಿದ್ದರು ಎಂದರು. ಸಾಮಾಜಿಕ ನ್ಯಾಯಕ್ಕಾಗಿ, ಶ್ರಮಿಕ ವರ್ಗಗಳ ಹಕ್ಕಿಗಾಗಿ ಕಾರ್ಲ್ ಮಾರ್ಕ್ಸ್ 19ನೇ ಶತಮಾನದಲ್ಲಿ ಪ್ರಯತ್ನಪಟ್ಟಿದ್ದರೆ, ಬಸವಣ್ಣನವರು 12ನೇ ಶತಮಾನದಲ್ಲಿಯೇ ಪ್ರಯತ್ನಿಸಿದ್ದರು. ಹಾಗು ಉಳ್ಳವರು ಮತ್ತು ಇಲ್ಲದವರು ಇವರ ನಡುವಿನ ವರ್ಣಭೇದ ಮತ್ತು ವರ್ಗಭೇದವನ್ನು ಅವರು ಹೊಡೆದು ಹಾಕಿದ್ದರು, ಸಮಾನತೆ ತರುವ ನಿಟ್ಟಿನಲ್ಲಿ ಬಸವಣ್ಣನವರ ಎರಡು ತತ್ವಗಳು : ಕಾಯಕ ತತ್ವ ಮತ್ತು ದಾಸೋಹ ತತ್ವ ಬಹಳ ಪ್ರಮುಖವಾಗಿವೆ. ಕಾಯಕ ತತ್ವ ಅಂದರೆ, ಶ್ರದ್ಧೆಯಿಂದ ಮಾಡುವ ಕೆಲಸವೇ ಕಾಯಕ, ಅದೇ ದೇವರಿಗೆ ಮಾಡುವ ಪೂಜೆಯೆಂದು ಜನರಿಗೆ ಅರ್ಥವಾಗುವಂತೆ ಹೇಳಿ ಕಾಯಕದಲ್ಲಿ ಎಲ್ಲರೂ ಸಮಾನರು ಎಂದು ತಿಳಿಸಲು ಅವರು ಪ್ರಯತ್ನಪಟ್ಟಿದ್ದರು, ಕೊಚ್ಚೆಯಲ್ಲಿ ಇರೋರನ್ನ ಮೇಲೆತ್ತಲು ಅವರು ಮಾಡಿದ ಕೆಲಸ ಅವರಲ್ಲಿದ್ದ ಒಬ್ಬ ಮಹಾನ್ ನಾಯಕನ ಲೀಡರ್‌ಶಿಪ್ ಕ್ವಾಲಿಟಿಯನ್ನು ಎತ್ತಿ ತೋರಿಸುತ್ತದೆ ಎಂದರು.

ಮುಂದುವರಿಯುತ್ತಾ, ಬಸವಣ್ಣ ಅವರ ಜೀವನದ ಬಗ್ಗೆ ಪ್ರಸ್ತಾಪಿಸಿದ ಶ್ರೀ ಅಮರೇಶ್ವರ ಪಾಟೀಲ್ ಅವರು ಬಸವಣ್ಣ ಹುಟ್ಟಿದ್ದು ಬಾಗೇವಾಡಿಯಲ್ಲಿ, ಓದಿದ್ದು ಕೂಡಲಸಂಗಮದಲ್ಲಿ, ಅನಂತರ ಬಸವ ಕಲ್ಯಾಣಕ್ಕೆ ಬಂದರು. ಅಲ್ಲಿ ಕಲಚೂರಿನ ಸಾಮಂತ ರಾಜ ಬಿಜ್ಜಳನ ಜೊತೆ ಕಾರಣಿಕರಾಗಿ ಸೇರಿಕೊಂಡು ನಂತರ ಪ್ರಧಾನಿಯಾಗಿ ಕೆಲಸ ಮಾಡುತ್ತಾರೆ, ಆಗ ಅವರ ಮೇಲೆ ಬಿಜ್ಜಳನ ಭಂಡಾರವನ್ನು ತಮ್ಮ ದಾಸೋಹಕ್ಕಾಗಿ ದುರುಪಯೋಗ ಮಾಡಿಕೊಂಡರು ಎಂಬ ಆಪಾದನೆ ಬರುತ್ತದೆ, ಅನಂತರ ತನಿಖೆಯಾಗಿ ಆಪಾದನೆಯಿಂದ ಮುಕ್ತರಾಗ್ತಾರೆ, ಆಗ ಬಸವಣ್ಣ ತಮ್ಮ ವಚನದಲ್ಲಿ ಹೇಳ್ತಾರೆ ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು ಒರೆ ಹಾಲಿನ ಬೆನ್ನಲಿ ಹರಿಯುವುದೇಕಯ್ಯ ಎಂದು. ಹಾಗೇನೇ, ದಾಸೋಹ ತತ್ವದಿಂದ ಆರ್ಥಿಕ ಪ್ರಗತಿ ಆಗುತ್ತದೆ, ಕೇವಲ ಸಾಮಂತ ದೊರೆಯಾಗಿದ್ದ ಬಿಜ್ಜಳ ಆರ್ಥಿಕ ತತ್ವ ದಾಸೋಹದಿಂದ ಚಕ್ರವರ್ತಿ ಆಗುತ್ತಾನೆ, ಹೀಗೆ ದಾಸೋಹ ತತ್ವ ಮತ್ತು ಕಾಯಕ ತತ್ವದಿಂದ 12ನೇ ಶತಮಾನದಲ್ಲಿಯೇ ಬಸವಣ್ಣನವರು ಸಮ ಸಮಾಜ ನಿರ್ಮಾಣ ಮಾಡಿದ್ದರು, ಈಗ ನಮ್ಮ ಸಂವಿಧಾನವು ಅದನ್ನೇ ಪ್ರತಿಪಾದಿಸುತ್ತದೆ, ತಮ್ಮ ವಚನದಲ್ಲಿ ಬಸವಣ್ಣನವರು ಸಾರಿದಂತೆ ಎಲ್ಲರೂ ನಮ್ಮವರು ಎನ್ನುವ ಭಾವನೆಯಿಂದ ನಾವೆಲ್ಲಾ ಒಂದಾಗಿ ಬಾಳಬೇಕು ಮತ್ತು ಅದನ್ನು ಸದಾ ಪಾಲಿಸಬೇಕು ಎಂದು ಹೇಳಿ ತಮ್ಮ ಮಾತನ್ನು ಮುಗಿಸಿದರು.



ನಂತರ ಮತ್ತೋರ್ವ ಮುಖ್ಯ ಅತಿಥಿ **ಶ್ರೀ ಸಚಿನ್ ರಾಣಾ** ಅವರು ಮಾತನಾಡಿ ಹಮ್‌ಲೋಗ್ ಆಜ್ ಬಸವಣ್ಣ ಜಯಂತಿ ಸೆಲಬ್ರೇಶನ್ ಕೆ ಲಿಯೇ ಯಹಾ ಮಿಲ್ ರಹೇ ಹೈ, ಉನ್ಕ ಬಹುತ್ ಇಂಪಾರ್ಟೆಂಟ್ ಸೋಚ್ ತಾ ಇಕ್ವಾಲಿಟಿ, ಇಸ್ ಕೆ ಲಿಯೇ ಮೈ ಅಚ್ಚ ಉದಾಹರಣ್ ಹ್ಞೂ, ಕ್ಯೋಕೀ ಇತನೆ ಕನ್ನಡಿಗಾಕೆ ಬೀಚ್ ಮೇ ಹಿಂದಿ ಬೋಲನೇವಾಲ ಆದ್ಮಿ ಕೋ ಆಪ್ ಲೋಗ್ ಟಾಲ್ರೇಟ್ ಕರ್ ರಹೇ ಹೈ. This toleration and inclusiveness is the true message ಎಂದರು.

ಬಸವಣ್ಣ ಸಾಬ್ ಬಹುತ್ ಅಚ್ಛೇ ಸಂದೇಶ್ ದಿಯೇ ಹೈ, ಔರ್ ದೇಶ್ ಕೆ ಅನ್ಯ ಸಂತ್ ಲೋಗ್ ಬೀ ಅಲಗ್ ಅಲಗ್ ಸಂದೇಶ್ ದಿಯೆ ಹೈ, ಲೇಕಿನ್ ಸಬ್ ಕಾ ಕಾಮನ್ ಟೀಚಿಂಗ್ಸ್ ಹೈ ಕೀ ಹಮ್ಕೋ ಅಪನಾ ದೇಶ್ ಸೆ ಪ್ರೇಮ್ ಕರ್ನಾ ಚಾಯಿಯೇ, ಹ್ಯೂಮನ್ ಬಿಯಿಂಗ್ಸ್ ಗೆ ಸಾಥ್ ಹುಮಾನಿಟಿ ಸೇ ಟ್ರೀಟ್ ಕರ್ನಾ ಔರ್ ಈಕ್ವಲ್ ಟ್ರೀಟ್‌ಮೆಂಟ್ ದೇನಾ ಚಾಯಿಯೇ, ಕ್ಯಾಸ್ಟ್, ಕ್ರೀಡ್, ರಿಲೀಜಿನ್ ಚೋಡ್ ಕೆ ಹ್ಯುಮಾನಿಟಿಸೆ ಜೇನೇಕಾ ಬೇಸಿಕ್ ಟೀಚಿಂಗ್ಸ್ ಕೋ ಹಮ್ ಪಾಲನ್ ಕರ್ನಾ ಚಾಹಿಯೇ, ಕನ್ನಡ ಸಮಾಜ್ ಮೆ ಶ್ರೀಮತಿ ಸುಧಾ ಮೂರ್ತಿ ಜೈಸೆ ಬಡೆಬಡೆ ರೈಟರ್ಸ್ ಹೈ ಔರ್ ಉನ್ಕಾ ಟೀಚಿಂಗ್ಸ್ ಕೋ ಹಮಾರಿ ಬಚ್ಚೋಕು ಸಿಕಾನಾ ಚಾಹಿಯೇ, ಬಸವಣ್ಣ ಜೀ ಕಾ ಸೆಲೆಬ್ರೇಶನ್ ಅಭಿ ಅಭಿ ಪಾರ್ಲಿಮೆಂಟ್ ಮೇಬೀ ಹುವಾ ಹೈ, ಕನ್ನಡ ಸಮಾಜ ಕೀ ಲೋಗ್ ಕೋ ಬೀ ಪ್ರಾಮುಖ್ಯತಾ ಮಿಲ್ ರಹಾ ಹೈ, ಆಜ್ ಮುಜೆ ಐಸ್ ಕಾರ್ಯಕ್ರಮ್ ಮೇ ಭಾಗ್ ಲೇತೇ ಹುಯೆ ಮೈ ಬಹುತ್ ಖುಷ್ ಹ್ಞೂ, ಆಮಂತ್ರಣ್ ದೇನೇಕೇಲಿಯೇ ಆಪ್ ಸಬ್ಕೋ ಮೈ ಧನ್ಯವಾದ್ ಕರ್ತಾ ಹ್ಞೂ ಎಂದರು.



ಇನ್ನೋರ್ವ ಮುಖ್ಯ ಅತಿಥಿಗಳಾದ **ಶ್ರೀ ಅಮರನಾಥ ತಲವಾಡೆ** ಅವರು ಮಾತನಾಡಿ, ದೆಹಲಿ ಕರ್ನಾಟಕ ಸಂಘ ಕಳೆದ ಹಲವಾರು ವರ್ಷಗಳಿಂದ ದೆಹಲಿಯಲ್ಲಿ ಬಹಳ ಉತ್ತಮ ಚಟುವಟಿಕೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದನ್ನು ಸ್ವತಃ 35 ವರ್ಷಗಳಿಂದ ನೋಡುತ್ತಾ ಬಂದಿದ್ದೇನೆ, ಪ್ರತಿ ವರ್ಷ ಸಂಘದಲ್ಲಿ ಆಚರಿಸುತ್ತಿರುವ ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ 12ನೇ ಶತಮಾನದಲ್ಲಿ ಅವರು ಏನೇನು ಮಾಡಿ ಹೋಗಿದ್ದನ್ನು ನಾವು ನೆನಪಿಸಿಕೊಳ್ಳುತ್ತಿದ್ದೇವೆ. ಇಂದು ಪ್ರಶ್ನೆ ಏನೆಂದರೆ 12ನೇ ಶತಮಾನದಲ್ಲಿ ಬಸವೇಶ್ವರರು ಯಾಕೆ ಕ್ರಾಂತಿ ಮಾಡಿದ್ರು ಅಂತ.ಆ ಸಮಯದಲ್ಲಿ ಸಮಾಜ ಹೇಗಿತ್ತು ಎನ್ನುವುದರ ಪ್ರಕಾರ ಕ್ರಾಂತಿಯ ಉತ್ಪನ್ನ ಆಗಿತ್ತು. 1131 ರಿಂದ 1196 ರ ವೇಳೆಯಲ್ಲಿ ಬಸವೇಶ್ವರರು ಇದ್ದ ಕಾಲಘಟ್ಟದಲ್ಲಿ ಸಮಾಜದಲ್ಲಿ ಬಹಳ ಅನ್ಯಾಯ ಇತ್ತು, ಅತ್ಯಾಚಾರ ಇತ್ತು, ತಾರತಮ್ಯಗಳಿದ್ದವು, ಹೆಣ್ಣು ಮಕ್ಕಳಿಗೆ ಸರಿಯಾದ ಸ್ಥಾನಮಾನ ಇರಲಿಲ್ಲ. ಸೆಕೆಂಡ್ ರೇಟ್ ಸಿಟಿಜನ್ ಶಿಪ್ ಇತ್ತು, ಆಮೇಲೆ ಕರ್ಮಕ್ಕೆ ಡಿಗ್ನಿಟಿ ಆಫ್ ಲೇಬರ್ ಇರಲಿಲ್ಲ, ಯಾರು ಏನೇ ಕೆಲಸ ಮಾಡಿದರೂ ಅದಕ್ಕೆ ಬೆಲೆ ಇರಲಿಲ್ಲ. ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ಬಸವೇಶ್ವರರು ಈ ತರಹದ ಸಮಾಜದಲ್ಲಿ ಎಷ್ಟು ಅಸಮಾನತೆ ಇದೆ, ಎಷ್ಟು ಅನ್ಯಾಯ ಇದೆ, ಎಷ್ಟು ಅತ್ಯಾಚಾರ ಆಗ್ತಾ ಇದೆ, ಧರ್ಮ ಎನ್ನುವುದು ಬರೀ ಶ್ರೀಮಂತರಿಗಷ್ಟೇ, ಅದು ಬಡವರಿಗೆ ಇಲ್ಲೇ ಇಲ್ಲ ಎಂಬಂತಹವೆಲ್ಲವನ್ನು ನೋಡಿ ಅದಕ್ಕೋಸ್ಕರ ಆ ಕ್ರಾಂತಿಯನ್ನು ಪ್ರಾರಂಭ ಮಾಡಿದರು ಎಂದರು.

ಆ ಕಾಲದಲ್ಲಿ ಎಲ್ಲರಲ್ಲಿ, ಸಮಾಜದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಧರ್ಮದ ಒಂದು ಸಮಾನತೆ ತರಬೇಕು ಎಂಬ ವಿಚಾರದಿಂದ ಅವರು ಪ್ರಯತ್ನ ಮಾಡಿ ಈ ಕ್ರಾಂತಿಯನ್ನು ಕಲ್ಯಾಣದಲ್ಲಿ ಪ್ರಾರಂಭ ಮಾಡಿದರು. ಆ ವೇಳೆಯಲ್ಲಿ ಬಹಳಷ್ಟು ಶರಣರು, ಶರಣೆಯರು ಅವರ ಜೊತೆಗೂಡಿದರು ಮತ್ತು ಅಕ್ಕಮಹಾದೇವಿ, ಬಸವಣ್ಣವರಾದಿಯಾಗಿ ಅವರೆಲ್ಲ ಅನೇಕ ವಚನಗಳನ್ನ ಬರೆದಿದ್ದರು. ಅದೇ ಸಮಯದಲ್ಲಿ ಬಸವಣ್ಣ ಕಲ್ಯಾಣದಲ್ಲಿ ಅನುಭವ ಮಂಟಪವೆಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಅಷ್ಟೊಂದು ಅಸಮಾನತೆಯಿದ್ದ ಆ ಸಮಾಜದಲ್ಲಿ ಅದೊಂದು ಬಹಳ ಧೈರ್ಯದಿಂದ ಮಾಡಿದ ಗಮನಾರ್ಹ ಕಾರ್ಯವಾಗಿತ್ತು. ನಮ್ಮ ದೇಶದ ಪ್ರಧಾನಿಯವರು ಸಹಾ ಸಂಸತ್ತಿನಲ್ಲಿ, ದೇಶದ ಎಲ್ಲಾ ಕಡೆ ಬಹಳಷ್ಟು ವೇದಿಕೆಗಳಲ್ಲಿ ಬಸವೇಶ್ವರರ ಬಗ್ಗೆ, ಅವರ ವಿಚಾರಗಳ ಕುರಿತು ಆಗಾಗ ಹೇಳುತ್ತಾ ಇರುತ್ತಾರೆ ಎಂದರು.

ಈಗ ಬಸವಣ್ಣನವರು ಕೇವಲ ಕರ್ನಾಟಕಕ್ಕೆ ಅಥವಾ ಲಿಂಗಾಯತ ಜಾತಿಗೆ ಮಾತ್ರ ಸೀಮಿತವಾಗಿಲ್ಲ, ಅವರು ಎಲ್ಲರಿಗೂ, ಎಲ್ಲ ರಾಜ್ಯಗಳಲ್ಲಿಯೂ ಪ್ರಸ್ತುತವಾಗಿದ್ದಾರೆ, ಅವರು ಕ್ಲಾಸ್ ಲೆಸ್, ಕ್ಯಾಸ್ಟ್ ಲೆಸ್ ಸೊಸೈಟಿ ಬಗ್ಗೆ ಹೇಳಿದ್ರು, ಸಮಾಜದಲ್ಲಿ ಎಲ್ಲರೂ ಸಮಾನರು, ಶ್ರೀ ಅಮರೇಶ್ವರ ಪಾಟೀಲ್ ಅವರು ಹೇಳಿದಂತೆ ಅವರ ಸೋಶಿಯಲ್, ಎಕಾನಮಿಕಲ್ ಮತ್ತು ರಿಲೀಜಿಯಸ್ ಪಾಲಿಸಿ ಸಮಾಜದಲ್ಲಿ ಕ್ರಾಂತಿಯನ್ನ ತಂದಿತ್ತು. ಕಳಬೇಡ, ಕೊಲಬೇಡ ಹುಸಿಯ ನುಡಿಯಬೇಡ...

ಎನ್ನುವ ಅವರ ವಚನವನ್ನು ಕೇಳಿದರೆ ಮತ್ತು ಅದನ್ನು ಅಳವಡಿಸಿಕೊಂಡರೆ ನಮ್ಮ ಜೀವನದ ಎಲ್ಲ ಸಮಸ್ಯೆಗಳಿಗೆ ಉತ್ತರ ದೊರೆಯುತ್ತದೆ, ಶಾಂತಿ ಸಿಗುತ್ತದೆ. 12ನೇ ಶತಮಾನದಲ್ಲಿ ಇದ್ದಂತಹ ಪರಿಸ್ಥಿತಿಗಿಂತ ಈಗ 21ನೇ ಶತಮಾನದಲ್ಲಿ ಅದು ಇನ್ನೂ ಹದಗೆಟ್ಟಿದೆ ಆದ್ದರಿಂದ, ಬಸವಣ್ಣನವರ ವಿಚಾರಗಳನ್ನು ಮತ್ತು ನೀತಿಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ, ಪ್ರಸಾರ ಮಾಡಬೇಕಾಗುತ್ತದೆ, ನಾವೇನು ನುಡಿಯುತ್ತಿವ್ರೋ ಅದರಂತೆ ನಡೆಯಬೇಕಾಗುತ್ತದೆ, ಆಚಾರವೇ ಸ್ವರ್ಗ ಅನಾಚಾರವೇ ನರಕ... ದೇವಲೋಕ ಮತ್ರ್ಯಲೋಕ, ಮಿಥ್ಯ ಲೋಕ ಇಲ್ಲೇ ಕಾಣಿರಯ್ಯ..., ನುಡಿದರೆ ಮುತ್ತಿನ ಹಾರದಂತಿರಬೇಕು...ಬಯಸಿ ಬಂದದ್ದು ಅಂಗ ಭೋಗ, ಬಯಸದೇ ಬಂದದ್ದು ಲಿಂಗ ಭೋಗ ಮುಂತಾದ ಬಸವಣ್ಣನವರ ಕೆಲವು ವಚನಗಳನ್ನ ವಾಚಿಸುತ್ತಾ ಕಾಯಕವೇ ಕೈಲಾಸ, ದಾಸೋಹ...ಎಂಬ ಅವರ ತತ್ವಗಳ ಬಗ್ಗೆ ಹೇಳಿ ಎಲ್ಲರೂ ನಿಸ್ವಾರ್ಥವಾಗಿ ಸೇವೆ ಮಾಡಬೇಕೆಂದು ತಿಳಿಸಿದರು.


ಮುಂದುವರಿದು, ಬಸವಣ್ಣನವರ ಫಿಲಾಸಫಿಯ ಬಗ್ಗೆ ನಾವೆಲ್ಲ ವಿಚಾರ ಮಾಡಬೇಕು ನಮ್ಮ ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನಿಂದಲೂ ಸಹ, ಮೊದಲು ನಾವು ಅನೇಕ ಕಾನ್ಫರೆನ್ಸ್ ಮತ್ತು ಸಿಂಪೋಸಿಯಂ ಮಾಡಿದ್ದೇವೆ, ಈ ಬಗ್ಗೆ ಇನ್ನೂ ಹೆಚ್ಚು ಕೆಲಸ ಮಾಡಬೇಕಾಗಿದೆ, ನಗರಗಳಲ್ಲಿ ಮತ್ತು ಹಳ್ಳಿಗಳಲ್ಲಿ ಬಹಳ ಸಮಸ್ಯೆಗಳಿವೆ, ಬಸವ ತತ್ವಗಳು ಈಗಿನ ಕಾಲಕ್ಕೆ ಹೇಗೆ ಪ್ರಸ್ತುತವಾಗಬಹುದು ಎಂಬ ಬಗ್ಗೆ ಮುಂದೆಯೂ ಅನೇಕ ಆಸಕ್ತರನ್ನ ಸೇರಿಸಿ, ನೀವು ನಾವು ಜೊತೆಗೂಡಿ, ದೆಹಲಿ ಕರ್ನಾಟಕ ಸಂಘದಲ್ಲಿ ಒಂದು ವಿಚಾರ ಸಂಕಿರಣ ಮಾಡಬಹುದು ಎಂದು ಯೋಚನೆ ಮಾಡ್ತಾ ಇದ್ದೇವೆ, ಈ ಬಗ್ಗೆ ಸಂಘದ ಅಧ್ಯಕ್ಷ ಶ್ರೀ ಸಿ.ಎಂ.ನಾಗರಾಜ ಅವರ ಜೊತೆ ಪ್ರಸ್ತಾಪ ಮಾಡಿದ್ದೇವೆ ಎಂದು ಹೇಳಿ, ಎಲ್ಲರಿಗೂ, ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿಯ ಶುಭಾಶಯಗಳನ್ನು ತಿಳಿಸುತ್ತಾ ತಮ್ಮ ಮಾತುಗಳನ್ನು ಮುಗಿಸಿದರು.



ಸಂಘದ ಅಧ್ಯಕ್ಷ **ಶ್ರೀ ಸಿ.ಎಂ. ನಾಗರಾಜ** ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಅಮೃತ ಮಹೋತ್ಸವ ಸಂದರ್ಭದಲ್ಲಿ ಪ್ರಧಾನಿಯವರು ನಮಗೆ ಕನ್ನಡೇತರರನ್ನು ಕರೆಯಿಸಿ ಕನ್ನಡ ಸಂಸ್ಕೃತಿಯನ್ನು ಪರಿಚಯಿಸಬೇಕು ಎಂದು ಕಿವಿ ಮಾತನ್ನು ನೀಡಿದ್ದರು. ಅದರಂತೆ ದೆಹಲಿ ಜಲ ಮಂಡಳಿಯಲ್ಲಿ ಅಡಿಷನಲ್ ಸಿ.ಇ.ಓ. ಆಗಿರುವ ಐಎಎಸ್ ಅಧಿಕಾರಿ ಶ್ರೀ ಸಚಿನ್ ರಾಣಾ ಅವರು ನಮ್ಮ ಆಹ್ವಾನವನ್ನು ಸ್ವೀಕರಿಸಿ ಬಂದಿರುವುದು ನಮಗೆ ಸಂತೋಷ ತಂದಿದೆ ಎಂದರು. ದೆಹಲಿ ಕರ್ನಾಟಕ ಸಂಘ ನಮ್ಮ ಮಕ್ಕಳಿಗೆ ಸಂಗೀತ, ನೃತ್ಯ ಕಲಿಸುವುದರ ಜೊತೆಗೆ, ಕನ್ನಡವನ್ನು ಕಲಿಸುವ ಕಲಿಕಾ ಕೇಂದ್ರವನ್ನು ನಡೆಸುತ್ತಿದೆ, ಆ ಮಕ್ಕಳು ಇಂದು ವಚನಗಳಾಧಾರಿತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಇದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ನಮ್ಮ ಕರ್ನಾಟಕದ ಸಾಂಸ್ಕೃತಿಕ ನಾಯಕರಾದ ಬಸವಣ್ಣನವರ ಬಗ್ಗೆ ಮಕ್ಕಳಲ್ಲಿ, ಇಲ್ಲಿನ ಕನ್ನಡಿಗರಲ್ಲಿ ಅರಿವು ಮೂಡಿಸುವ ಕೆಲಸವನ್ನೂ ದೆಹಲಿ ಕರ್ನಾಟಕ ಸಂಘ ಮಾಡುತ್ತಿದೆ. ಕಳೆದ ಏಪ್ರಿಲ್ 30ನೇ ತಾರೀಖು ಕೇಂದ್ರ ಸಚಿವ ಶ್ರೀ ವಿ. ಸೋಮಣ್ಣನವರ ನೇತೃತ್ವದಲ್ಲಿ ಸಂಸದ್ ಭವನದ ಆವರಣದಲ್ಲಿ ಸುಮಾರು 1000ಕ್ಕೂ ಹೆಚ್ಚು ಜನ ಕನ್ನಡಿಗರನ್ನು ಸೇರಿಸಿ, ಕೇಂದ್ರ ಮಂತ್ರಿಗಳು, ಸಂಸದರು, ಪೂಜ್ಯ ಸ್ವಾಮೀಜಿಯವರು ಮತ್ತು ಅಧಿಕಾರಿಗಳ ಸಮ್ಮುಖದಲ್ಲಿ ಅತ್ಯಂತ ವಿಜೃಂಭಣೆಯಿಂದ ಪ್ರಪ್ರಥಮ ಬಾರಿ ಬಸವೇಶ್ವರ ಅವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಬಸವ ಜಯಂತಿ ಕಾರ್ಯಕ್ರಮವನ್ನು ಸಂಘದ ಸಹಕಾರದಿಂದ ಯಶಸ್ವಿಯಾಗಿ ಆಚರಿಸಲಾಗಿದೆ ಎಂದರು.

ದೆಹಲಿ ಕರ್ನಾಟಕ ಸಂಘವು ಬಸವ ಇಂಟರ್‌ನ್ಯಾಷನಲ್ ಸೆಂಟರ್ ಮತ್ತು ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಸಮಿತಿ ಜೊತೆ ಇನ್ನೂ ಹೆಚ್ಚಿನ ಕಾರ್ಯಕ್ರಮಗಳ ಆಯೋಜಿಸಲು ಮುಂದಾಗಲಿದೆ. ನಮ್ಮ ಸಂಘಕ್ಕೆ 75 ವರ್ಷಗಳ ಸುದೀರ್ಘ ಇತಿಹಾಸವಿದೆ. 2023ರಲ್ಲಿ ನಡೆದ ಅಮೃತ ಮಹೋತ್ಸವ ಸಮಾರಂಭದಲ್ಲಿ ಮಾನ್ಯ ಪ್ರಧಾನಿಗಳು ಬಂದಾಗ ಸುಮಾರು 2 ಗಂಟೆಗಳ ಕಾಲ ಭಾಗವಹಿಸಿ ತಮ್ಮ ಮಾತುಗಳಲ್ಲಿ ಮೆಚ್ಚುಗೆ ವ್ಯಕ್ತ ಪಡಿಸಿದ್ದರು. ಸುಮಾರು 1 ಕೋಟಿ 80 ಲಕ್ಷ ಜನ ಆ ಕಾರ್ಯಕ್ರಮವನ್ನು ಟೀವಿ, ಫೇಸ್‌ಬುಕ್ ಮುಂತಾದ ಆನ್‌ಲೈನ್‌ನಲ್ಲಿ ವೀಕ್ಷಿಸಿದ್ದರು. ಅದೊಂದು ಅಭೂತಪೂರ್ವ ಕಾರ್ಯಕ್ರಮವಾಗಿತ್ತು ಎಂದು ಶ್ರೀ ಸಿ.ಎಂ. ನಾಗರಾಜ ತಿಳಿಸಿದರು.

ಹಾಗೇನೇ, ನವದೆಹಲಿಯ ಬಸವ ಇಂಟರ್‌ನ್ಯಾಷನಲ್ ಸೆಂಟರ್ ಹಾಗು ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ಗಳು ಮಾಡುತ್ತಿರುವ ಕಾರ್ಯಗಳನ್ನು ಪ್ರಸ್ತಾಪಿಸಿದ ಅಧ್ಯಕ್ಷರು, ರಾಷ್ಟ್ರ ರಾಜಧಾನಿಯಲ್ಲಿ ಕನ್ನಡ ಸಂಘಗಳು ಬೆಳೆದರೆ ಅದು ಕನ್ನಡವನ್ನು ಇನ್ನಷ್ಟು ಗಟ್ಟಿ ಮಾಡಿದ್ದಂತಾಗುತ್ತದೆ. ನಾವು ಕನ್ನಡವನ್ನು ಉಳಿಸುವ ಕೆಲಸವಾಗುತ್ತದೆ. ದೆಹಲಿಯಲ್ಲಿ ನಮ್ಮದು ಕೇವಲ ಒಂದು ಜಾತಿಯೆಂದರೆ ಅದು ಕನ್ನಡ ಜಾತಿ ಮಾತ್ರ. ನಾವೆಲ್ಲರೂ ಒಟ್ಟಾಗಿ ಹೋದಾಗ ಅದು ಬಸವಣ್ಣನವರು ತಮ್ಮ ವಚನಗಳಲ್ಲಿ ಕೊಟ್ಟ ಸಂದೇಶಗಳಿಗೆ ದೊಡ್ಡ ಬೆಲೆ ಕೊಟ್ಟಂತಾಗುತ್ತದೆ. ನಾವು ಹೇಳುವುದೇ ಒಂದು ಮಾಡುವುದೇ ಒಂದು ಆಗಬಾರದು ಎಂದರು. ಪರಮಪೂಜ್ಯ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರು ಮೊದಲ ಬಾರಿಗೆ ದೆಹಲಿ ಕರ್ನಾಟಕ ಸಂಘಕ್ಕೆ ಬಂದಿರುವುದು ನಮ್ಮೆಲ್ಲರ ಸೌಭಾಗ್ಯ, ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾಗೂ ಏಳು ಕೋಟಿ ಕನ್ನಡಿಗರ ಪರವಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬರುವ ದಿನಗಳಲ್ಲಿ ನಮ್ಮ ದೊಡ್ಡ ಕಾರ್ಯಕ್ರಮದಲ್ಲಿ ಪೂಜ್ಯ ಗುರುಗಳು ಬಂದು ಭಾಗಿಯಾಗಬೇಕೆಂದು ಅವರಿಗೆ ವಿನಂತಿಸುತ್ತೇನೆ. ಬಸವ ಇಂಟರ್‌ನ್ಯಾಷನಲ್ ಸೆಂಟರ್ ಜೊತೆ ನಮ್ಮ ಸಂಘ ಸದಾ ಇರುತ್ತದೆ, ಸಾಂಸ್ಕೃತಿಕ ನಾಯಕ ಬಸವಣ್ಣನವರ ವಿಚಾರಗಳನ್ನು ಮುಂದುವರಿಸುತ್ತಾ ಇರುತ್ತೇವೆ ಎಂದು ಹೇಳಿ ಅಧ್ಯಕ್ಷರು ತಮ್ಮ ಮಾತುಗಳನ್ನು ಮುಗಿಸಿದರು. ಅನಂತರ ಶ್ರೀ ಸಚಿನ್ ರಾಣಾ ಐಎಎಸ್ ಮತ್ತು ಅವರ ಪತ್ನಿ ಅವರಿಗೆ ಸಂಘದ ಪರವಾಗಿ ಅಭಿನಂದನೆ ಸಲ್ಲಿಸಲಾಯಿತು.



ದಿವ್ಯ ಸಾನಿಧ್ಯ ವಹಿಸಿದ್ದ **ಪರಮಪೂಜ್ಯ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ** ಅವರು ನೆರೆದಿದ್ದ ಎಲ್ಲರಿಗೂ ಶುಭಾಶೀರ್ವಚನ ನೀಡಿದರು. ದೇವಲೋಕದವರಿಗೂ, ಮರ್ತ್ಯಲೋಕದವರಿಗೂ, ನಾಗಲೋಕದವರಿಗೂ ಬಸವಣ್ಣನೇ ದೇವರು. ಮೇರು ಗಿರಿ, ಮಂದರಗಿರಿ ಈ ಮೊದಲಾದವೆಲ್ಲಕ್ಕೂ ಬಸವಣ್ಣನೇ ದೇವರು, ಚೆನ್ನಮಲ್ಲಿಕಾರ್ಜುನಯ್ಯಾ, ನಿಮಗೂ, ಎನಗೂ, ನಿಮ್ಮ ಶರಣರಿಗೆಲ್ಲರಿಗೂ ಬಸವಣ್ಣನೇ ದೇವರು ಎಂದು ಹೇಳುತ್ತಾ ತಮ್ಮ ಮಾತುಗಳನ್ನು ಆರಂಭಿಸಿದ ಸ್ವಾಮೀಜಿ ಅವರು, ಕಾಯಕ ತತ್ವ ತಳಹದಿಯಲ್ಲಿ ಹೊಸ ಸಮಾಜವನ್ನು ಕಟ್ಟಿದ, ವರ್ಗ ರಹಿತ, ವರ್ಣ ರಹಿತ, ಜಾತಿ ರಹಿತ ಕಲ್ಯಾಣ ರಾಜ್ಯ ನಿರ್ಮಾಣ ಮಾಡಿದಂತಹ ಪ್ರಜಾಪ್ರಭುತ್ವದ ಮೊದಲ ಹರಿಕಾರ ಬಸವಣ್ಣನವರನ್ನು ಮತ್ತು ಅವರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಬಾಳಿ ಬೆಳಗಿದ ಎಲ್ಲ ಕಾಯಕದ, ಎಲ್ಲ ವರ್ಗದ, ಎಲ್ಲ ಭಾಷೆಯ ಶರಣ ಶರಣೆಯರನ್ನು, ಈ ಪ್ರಪಂಚದ ಎಲ್ಲ ದಾರ್ಶನಿಕರನ್ನು, ನಾಡಿನ ಎಲ್ಲ ಸಂತ, ಮಹಂತ, ದಾಸ ಶ್ರೇಷ್ಠರನ್ನು ಸ್ಮರಣೆ ಮಾಡಿಕೊಂಡರು. ಮಹಾನಗರ ರಾಜಧಾನಿ ದೆಹಲಿಯಲ್ಲಿ 77 ವರ್ಷಗಳ ಹಿಂದೆಯೇ ಕನ್ನಡಿಗರ ಧ್ವನಿಯಾಗಿ ಸ್ಥಾಪನೆಯಾಗಿರುವಂತಹ ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಕರ್ನಾಟಕದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಹಾಗು ಜಗತ್ತಿನ ಮೊಟ್ಟ ಮೊದಲ ಮಹಿಳಾ ಕವಯತ್ರಿ ಅಕ್ಕಮಹಾದೇವಿಯ ಜಯಂತೋತ್ಸವ ಕಾರ್ಯಕ್ರಮ ನಡೆಯುತ್ತಿರುವುದು ತಮಗೆ ತುಂಬಾ ಸಂತೋಷ ತಂದಿದೆ ಎನ್ನುತ್ತಾ ವೇದಿಕೆಯಲ್ಲಿರುವ ಎಲ್ಲಾ ಅತಿಥಿ ಗಣ್ಯರಿಗೆ ಹಾಗು ಸಭಾಂಗಣದಲ್ಲಿ ನೆರೆದಿದ್ದ ಎಲ್ಲ ಕನ್ನಡಿಗರಿಗೂ ಬಸವಣ್ಣ ಮತ್ತು ಅಕ್ಕಮಹಾದೇವಿ ಅವರ ಜಯಂತಿಯ ಶುಭಾಶಯಗಳನ್ನು ಅರ್ಪಿಸಿದರು.







ದೆಹಲಿಯ ಕರ್ನಾಟಕ ಸಂಘಕ್ಕೂ ಬಸವಣ್ಣನವರಿಗೂ ದೊಡ್ಡ ಸಂಬಂಧವಿದೆ, ಅದನ್ನು ಸಂಘ ಇಲ್ಲಿ ಗಟ್ಟಿಗೊಳಿಸುತ್ತಿದೆ, ಅವತ್ತು ರಾಜಧಾನಿಯಾಗಿದ್ದಂತಹ ಕಲ್ಯಾಣದ ಮೂಲಕ ಕ್ರಾಂತಿ ಮಾಡಿದವರು ಬಸವಣ್ಣ, ಇವತ್ತು ರಾಜಧಾನಿ ದೆಹಲಿಯಲ್ಲಿ ಸಂಸತ್ತಿನ ಮುಂಭಾಗದಲ್ಲಿ ಇರುವ ಬಸವೇಶ್ವರರ ಪ್ರತಿಮೆಗೆ ಸ್ಥಾಪನೆಯಾಗಿ 22 ವರ್ಷಗಳ ನಂತರ ಮೊಟ್ಟ ಮೊದಲ ಬಾರಿಗೆ ಮಾಲಾರ್ಪಣೆ ಮಾಡಿದ್ದು ಬಹಳ ವಿಶೇಷವಾದ ಸಂತೋಷದಾಯಕ ಸಂದರ್ಭವಾಗಿತ್ತು. 2003ರಲ್ಲಿ ಸ್ಥಾಪನೆಯಾದ ಸಮಾನತೆ ಕೊಟ್ಟಂತಹ ಬಸವಣ್ಣನವರ ಪ್ರತಿಮೆ (The Statue of Equality) ಹಾಗು 2007 ರಲ್ಲಿ ಸ್ಥಾಪಿತವಾದ ಸ್ವಾತಂತ್ರ್ಯ ಹೋರಾಟದ ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆ (The Statue of Freedom) ಗಳಿಗೆ ಮಾನ್ಯ ಭಾರತ ಸರ್ಕಾರದ ಸಚಿವರಾದ ಶ್ರೀ ವಿ. ಸೋಮಣ್ಣನವರ ಹಾಗು ಎಲ್ಲಾ ಕೇಂದ್ರ ಮಂತ್ರಿಗಳು ಮತ್ತು ಸಂಸದರ ಪ್ರಾಮಾಣಿಕ ಪ್ರಯತ್ನದಿಂದ ಹಾಗು ಇಲ್ಲಿನ ದೆಹಲಿ ಕರ್ನಾಟಕ ಸಂಘದ ಶ್ರಮ, ನೆರವಿನಿಂದ ಭಾರತ ಸರ್ಕಾರ ಗೌರವ ಕೊಟ್ಟು 2024ರಲ್ಲಿ ಮತ್ತು 2025 ರಲ್ಲಿ ಅಭಿನಂದನೆ ಸಲ್ಲಿಸಿರುವುದು, ನೀವೆಲ್ಲಾ ಕೂಡಿ ಮಾಡಿರುವುದು ಇಲ್ಲಿನ ನಮ್ಮ ಕನ್ನಡಿಗರ ಶಕ್ತಿ ಪಾರ್ಲಿಮೆಂಟಿನಲ್ಲಿ ಸಾಬೀತಾಗಿದೆ ಎಂದು ಸ್ವಾಮೀಜಿ ಹೆಮ್ಮೆ ಪಟ್ಟು ಹೇಳಿದರು.

ಕನ್ನಡ ಅಂದರೆ ಬಸವಣ್ಣ, ಬಸವಣ್ಣ ಅಂದರೆ ಕನ್ನಡ, ಬಸವಣ್ಣ ಕನ್ನಡದ ಕುಲಗುರುಗಳು. ರಾಷ್ಟ್ರಕವಿ ಕುವೆಂಪುರವರು ಶ್ರೀರಾಮಾಯಣ ದರ್ಶನಂ ಬರೆಯುವುದಕ್ಕಿಂದ ಮುಂಚೆ ಬಸವಣ್ಣನವರ ಪರಿಚಯವಾಗಿದ್ದಿದ್ದರೆ, ತಾವು ಬಸವ ದರ್ಶನ ಬರೆಯುತ್ತಿದ್ದೆ ಎಂದು ಹೇಳಿದ ಮಾತುಗಳನ್ನು ಉಲ್ಲೇಖಿಸಿದ ಸ್ವಾಮೀಜಿ ಕನ್ನಡ ಸಾಹಿತ್ಯ ಸರಸ್ವತಿಯ ಕಿರೀಟದ ವಜ್ರವೆಂದರೆ ಬಸವಣ್ಣನವರು. ರಂಗರಾಜರು ಹೇಳುವಂತೆ ಉಪನಿಷತ್ತಿನಲ್ಲಿ ಇರುವುದೆಲ್ಲಾ ವಚನದಲ್ಲಿದೆ, ಕನ್ನಡದಲ್ಲಿದೆ, ಆದರೆ ವಚನಗಳಲ್ಲಿರುವುದು ಉಪನಿಷತ್ತಿನಲ್ಲಿ ಇಲ್ಲ ಎಂಬ ವಿಷಯವನ್ನು ತಿಳಿಸಿದರು. ಹಾಗೆಯೇ ಅಂಬೇಡ್ಕರ್ ಅವರಿಗೆ ಸಂವಿಧಾನ ಬರೆಯಲು ದೊಡ್ಡ ಸ್ಫೂರ್ತಿ ಬಸವಣ್ಣನವರು. ಭಾರತ ಸಂವಿಧಾನದಲ್ಲಿ ಈಗ ಏನು ಹೇಳಿದೆಯೋ ಅದೇ ಸಂವಿಧಾನವನ್ನು ವಚನಗಳ ಮೂಲಕ 12ನೇ ಶತಮಾನದಲ್ಲಿ ಮೊದಲು ತೋರಿಸಿಕೊಟ್ಟವರು ಬಸವಣ್ಣನವರು. ನಾವು ನಮ್ಮ ಮಡಿವಂತಿಕೆ ಬಿಟ್ಟು ಗಾಂಧೀಜಿಯವರಿಗೆ, ವಿವೇಕಾನಂದರಿಗೆ ಹಾಗು ಅಂಬೇಡ್ಕರ್‌ರವರಿಗೆ ಬಸವಣ್ಣನವರ ಪೂರ್ಣ ಪರಿಚಯ ಮೊದಲೇ ಮಾಡಿಕೊಟ್ಟಿದ್ದರೆ, ದೇಶದಲ್ಲಿರುವ ಅಸಮಾನತೆ, ಭಾಷಾ ಸಮಸ್ಯೆ, ಭ್ರಷ್ಟಾಚಾರಣೆ ಮತ್ತು ಅನೈತಿಕತೆ ತೊಲಗಿ ಹೋಗುತ್ತಿತ್ತು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಮೀರಾಬಾಯಿ, ಗುರುನಾನಕನಂತವರು ದೇಶದಾದ್ಯಂತ ಪರಿಚಯವಾಗಿದ್ದಂತೆ, ಬಸವಣ್ಣನವರು ಕರ್ನಾಟಕ ರಾಜ್ಯವನ್ನು ಹೊರತು ಪಡಿಸಿ ರಾಜಧಾನಿ ದೆಹಲಿ, ಉತ್ತರ ಭಾರತ ಮತ್ತು ದೇಶದ ಇತರ ಭಾಗಗಳಲ್ಲಿ ಹೆಚ್ಚಾಗಿ ಪರಿಚಯವಾಗಿಲ್ಲ, ಕಾರಣ ಬಸವಣ್ಣನವರು ವಚನಗಳನ್ನು ಕನ್ನಡದಲ್ಲಿ ರಚಿಸಿದರು, ಧರ್ಮವನ್ನು ಕನ್ನಡದಲ್ಲಿ ಪಸರಿಸಿದರು ಹಾಗು ಆಡಳಿತವನ್ನು ಕನ್ನಡದಲ್ಲೇ ಮಾಡಿದರು. ಹೀಗಾಗಿ ಅವರು ಕರ್ನಾಟಕ ಬಿಟ್ಟು ಹೊರಗೆ ಹೋಗಲಿಲ್ಲ. ಅಪ್ಪಟ ಕನ್ನಡ ಅಭಿಮಾನಿಯಾದ ಅವರು ಕನ್ನಡ ಬಿಟ್ಟು ಏನೂ ಮಾಡಲಿಲ್ಲ. ದೇಶದ ವಿವಿಧ ಪ್ರದೇಶದಿಂದ ಅನುಭವ ಮಂಟಪಕ್ಕೆ ಬಂದಂತಹ ಇತರ ಭಾಷೆಯ ಅನೇಕ ಶರಣರಿಗೆ ಬಸವಣ್ಣ ಕನ್ನಡ ಕಲಿಸಿಕೊಟ್ಟರು. ಆ ಮೂಲಕ ಕನ್ನಡ ಭಾಷೆಯನ್ನು ದೇವ ಭಾಷೆಯಾಗಿ ಅವರು ಮಾಡಿದರು. ಕನ್ನಡದ ಮೂಲಕ ದೇವರನ್ನು ಒಲಿಸಿಕೊಳ್ಳುವ ಕನ್ನಡ ಭಾಷೆಯ ಕಳಕಳಿ ಅವರಲ್ಲಿತ್ತು. ಸ್ವಲ್ಪ ತಡವಾಗಿಯಾದರೂ ಕರ್ನಾಟಕ ಸರ್ಕಾರವು ಬಸವಣ್ಣನವರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ'ನೆಂದು ಘೋಷಿಸಿರುವುದು ಪ್ರಸ್ತುತ ಹಾಗು ಯೋಗಾಯೋಗವಾಗಿದೆ. ಹಾಗಾಗಿ, ಹೇಗೆ ಮೊಬೈಲ್ ಈ ಕಾಲದಲ್ಲಿ ಜನರ ಜೀವನದಲ್ಲಿ ಬಹು ಮುಖ್ಯವಾಗಿದೆಯೂ ಅದೇ ರೀತಿ ಬಸವಣ್ಣ ಈಗಿನ 21ನೇ ಶತಮಾನಕ್ಕೆ ಅನಿವಾರ್ಯವಾಗಿದ್ದಾರೆ ಎಂದರು.

ಪ್ರಪಂಚದಲ್ಲಿ ಬೇರೆ ಬೇರೆ ದೇಶದಲ್ಲಿರುವವರೆಲ್ಲರೂ, ಬೇರೆ ಭಾಷೆಯವರೆಲ್ಲರೂ ಒಪ್ಪುವಂತಹ ವಿಚಾರ ಬಸವಣ್ಣನವರ ತತ್ವಗಳು. ಬಸವಣ್ಣನವರಲ್ಲಿ ಮಹಾವೀರನ ಅಹಿಂಸೆ ಇತ್ತು, ಬುದ್ಧನ ಮಾನವೀಯತೆ ಇತ್ತು, ಏಸುವಿನ ಪ್ರೀತಿಯಿತ್ತು, ಪೈಗಂಬರನ ಶಾಂತಿಯಿತ್ತು, ಗುರುನಾನಕರ ಶ್ರದ್ಧೆ ಇತ್ತು, ಅಂಬೇಡ್ಕರ್‌ರವರ ಸಂವಿಧಾನವಿತ್ತು, ಸ್ವಾಮಿ ವಿವೇಕಾನಂದರ ಆಧ್ಯಾತ್ಮ ಶಕ್ತಿ ಇತ್ತು. ಆದ್ದರಿಂದ ಬಸವಣ್ಣ ಬಹಳ ಸರಳವಾದ **'ಕಾಯಕವೇ ಕೈಲಾಸ'**ವೆಂಬ ವಿಚಾರವನ್ನು ಪ್ರತಿಪಾದಿಸಿದ್ದರು, ಜವಾನನ ಕೆಲಸವಾಗಿರಬಹುದು, ಪ್ರಧಾನಿಯ ಕೆಲಸವಾಗಿರಬಹುದು ಮಾಡುವ ಕಾಯಕ ಸತ್ಯ ಶುದ್ಧವಾಗಿರಲಿ, ಬಂದಿರುವಂತಹ ಸಂಪತ್ತನ್ನು ಸತ್ಯ ಶುದ್ಧವಾಗಿ ಹಂಚಿಕೊಳ್ಳಿ, ಬಸವಣ್ಣನವರ ತತ್ವಗಳನ್ನು ಪಾಲಿಸುತ್ತಾ ಎಲ್ಲರೂ ಕನ್ನಡದ ಅಸ್ಮಿತೆಯನ್ನು ಉಳಿಸಿಕೊಳ್ಳಿ ಎಂದು ಪೂಜ್ಯ ಗುರುಗಳು ಕರೆ ನೀಡಿದರು.

ಇಂದು ದೆಹಲಿಯಲ್ಲಿ ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿಯನ್ನು ಆಚರಿಸುತ್ತಿರುವುದು ಮತ್ತು ಅದರಲ್ಲಿ ಭಾಗಿಯಾಗುತ್ತಿರುವುದು ತಮಗೆ ಅತೀವ ಸಂತೋಷ ತಂದಿದೆ, ಇದಕ್ಕಾಗಿ ದೆಹಲಿ ಕರ್ನಾಟಕ ಸಂಘವನ್ನು ಮತ್ತು ಇಲ್ಲಿನ ಕನ್ನಡಿಗರನ್ನು ಅಭಿನಂದಿಸುತ್ತೇನೆ, ಮುಂದೆ ಪ್ರಧಾನಿಯವರನ್ನು ಕರೆಸಿ ದೊಡ್ಡಮಟ್ಟದಲ್ಲಿ ದೆಹಲಿಯ ಭಾರತ ಮಂಟಪಂನಲ್ಲಿ ಅಥವಾ ರಾಮಲೀಲಾ ಮೈದಾನದಲ್ಲಿ ಬಸವಣ್ಣನವರ ಜಯಂತಿ ಆಚರಿಸೋಣ, ನೀವೆಲ್ಲರೂ ಜಾತಿಭೇದವಿಲ್ಲದೆ ಒಟ್ಟಾರೆ ಕೂಡಿ ದೆಹಲಿಯಲ್ಲಿ ಕನ್ನಡಿಗರು ಸಾರ್ವಭೌಮರು ಎಂಬುದನ್ನು ಸಾಬೀತು ಪಡಿಸುವ ಕೆಲಸವನ್ನು ಮಾಡೋಣ, ಎಲ್ಲರಿಗೂ ಶುಭವಾಗಲಿ ಎಂದು ಹೇಳುತ್ತಾ ಸ್ವಾಮೀಜಿಯವರು ತಮ್ಮ ಆಶೀರ್ವಚನ ನುಡಿಗಳನ್ನು ಮುಕ್ತಾಯ ಮಾಡಿದರು. ಸಂಘದ ಪರವಾಗಿ ಪೂಜ್ಯ ಶ್ರೀ ಸ್ವಾಮೀಜಿಯವರಿಗೆ ಗೌರವಾರ್ಪಣೆ ಮಾಡಲಾಯಿತು ಹಾಗು ಆಗಮಿಸಿದ್ದ ಅತಿಥಿಗಣ್ಯರಿಗೆ ಗೌರವ ಅಭಿನಂದನೆ ಸಲ್ಲಿಸಲಾಯಿತು.

ಕೊನೆಯಲ್ಲಿ ನವದೆಹಲಿಯ ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರೂ ಹಾಗು ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ವಿ.ವಿ. ಬಿರಾದಾರ ಅವರು ಸಂಘದಲ್ಲಿ ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿ ಆಚರಣೆಯು ಪ್ರಾರಂಭವಾದ ಹಿನ್ನೆಲೆಯನ್ನು ಮತ್ತು ಸಂಸದ್ ಭವನದ ಆವರಣದಲ್ಲಿ ಶ್ರೀ ಬಸವೇಶ್ವರ ಅವರ ಪ್ರತಿಮೆ ಸ್ಥಾಪನೆಯಾಗುವುದಕ್ಕೆ ಶ್ರಮಿಸಿದ ಸಂದರ್ಭಗಳನ್ನು ವಿವರಿಸಿದರು. ಇಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಎಲ್ಲರಿಗೂ ಆಶೀರ್ವಾದ ಮಾಡಿದ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಆಗಮಿಸಿದ್ದ



**ಶ್ರೀ ವೆಂಕಟೇಶ್ ಅವರಿಂದ ವಚನ ಗಾಯನ**

ಎಲ್ಲಾ ಮುಖ್ಯ ಅತಿಥಿಗಳಿಗೆ, ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಮತ್ತು ಸಭಾಂಗಣದಲ್ಲಿ ಆಸೀನರಾಗಿದ್ದ ಎಲ್ಲಾ ಸ್ಥಳೀಯ ಕನ್ನಡಿಗರಿಗೆ ಅವರು ಧನ್ಯವಾದಗಳನ್ನು ಅರ್ಪಿಸಿದರು.

ಸಭಾ ಕಾರ್ಯಕ್ರಮದ ನಂತರ ಸಂಘದಲ್ಲಿ ನೃತ್ಯ, ಸಂಗೀತ ಹಾಗೂ ಕನ್ನಡ ಕಲಿಯುತ್ತಿರುವ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಸ್ತುತಿಗೊಂಡವು. ಪ್ರದರ್ಶನ ನೀಡಿದ ಮಕ್ಕಳು : ಕು. ಶರಣ್ಯ, ಸಾನಿಧ್ಯ ಎಸ್, ವೈಷ್ಣವಿ ಎಸ್., ಸಾನ್ವಿಕ, ಸಾನಿಧ್ಯ ಎಂ.ಜಿ., ನವಿಕ ಸಿ.ಎಂ., ದಿವ್ಯ, ಮಿಥುನ್, ಅರ್ಜುನ್, ಲಿದ್ವಿತ್, ಚಾರ್ವಿಕ್ ಸಿ.ಎಂ., ರಾಜವರ್ಧನ್. ಜೊತೆಗೆ ಗುರುಗಾಂವ್ ಕನ್ನಡ ಸಂಘದ ಮತ್ತು ಸ್ಥಳೀಯ ಮಕ್ಕಳು ವಿವಿಧ ನೃತ್ಯ ಮತ್ತು ಗಾಯನ ಪ್ರದರ್ಶನ ನೀಡಿದರು. ಎಲ್ಲಾ ಮಕ್ಕಳನ್ನು ಅಭಿನಂದಿಸಲಾಯಿತು.

ಉತ್ತಮವಾಗಿ ಪ್ರದರ್ಶಿಸಿದ ಬಾಲ ಕಲಾವಿದರಿಗೆ ಅಪಾರ ಕರತಾಡನಗಳೊಂದಿಗೆ ಪ್ರೇಕ್ಷಕರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀ ಪ್ರಭಾಕರ ಮಡ್ಡಿತೋಟ್ ಅವರು ಸಭಾ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಬಹಳ ಅಚ್ಚುಕಟ್ಟಾಗಿ ನಿರೂಪಣೆ ಮಾಡಿದರು ಅವರೊಂದಿಗೆ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಅರುಣ್ ಸಿ.ಎಸ್. ನಿರ್ವಹಣೆಯಲ್ಲಿ ಸಹಕರಿಸಿದರು. ಕಾರ್ಯಕ್ರಮದ ನಂತರ ಭೋಜನ ವ್ಯವಸ್ಥೆಯನ್ನು ಮಾಡಲಾಗಿತ್ತು. ಎಲ್ಲರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಈ ವರ್ಷದ ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿ ಆಚರಣೆ ಬಹಳ ಅರ್ಥಪೂರ್ಣವಾಗಿ ನಡೆದು ಯಶಸ್ವಿಯಾಗಿ ಮುಕ್ತಾಯಗೊಂಡಿತು. ❑

***ಅಭಿಮತ ವರದಿ***



**ಪೂಜ್ಯ ಸ್ವಾಮೀಜಿ, ಅತಿಥಿ ಗಣ್ಯರು ಮತ್ತು ಸಂಘದ ಪದಾಧಿಕಾರಿಗಳೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನೀಡಿದ ಸಂಘದ ಕನ್ನಡ ಕಲಿಕಾ ಕೇಂದ್ರದ ಹಾಗು ಸಂಗೀತ ಮತ್ತು ನೃತ್ಯ ತರಬೇತಿ ಪಡೆದ ಮಕ್ಕಳು**

# ಸಂಘದ ಸಭಾಂಗಣದಲ್ಲಿ ಆಧುನಿಕ ಧ್ವನಿ ಸಿಸ್ಟಮ್ ಅಳವಡಿಕೆ
# ಬೆಳ್ಳಿ ತೆರೆಯ ಮೇಲೆ ಎರಡು ಕನ್ನಡ ಚಲನಚಿತ್ರಗಳ ಯಶಸ್ವಿ ಪ್ರದರ್ಶನ





ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ನಗದು ಬಹುಮಾನ ವಿತರಣೆ

ಸಂಘದ ಸಾಂಸ್ಕೃತಿಕ ಸಮುಚ್ಚಯ ಕಟ್ಟಡದ ಉದ್ಘಾಟನೆಯಾಗಿ 20 ವರ್ಷಗಳು ಕಳೆದಿವೆ. 2005 ರಲ್ಲಿ ಸಭಾಂಗಣದಲ್ಲಿ ಅಳವಡಿಸಲಾಗಿದ್ದ ಧ್ವನಿ ವ್ಯವಸ್ಥೆಯನ್ನು ಇತ್ತೀಚೆಗೆ ಬದಲಾಯಿಸಲಾಗಿದ್ದು ನೂತನವಾಗಿ ಬೋಸ್ ಧ್ವನಿ ಸಿಸ್ಟಮ್ ಅನ್ನು ಅಳವಡಿಸಲಾಗಿದೆ. ಈ ಸಂದರ್ಭದಲ್ಲಿ ದಿನಾಂಕ 18.05.2025 ರಂದು ಮಧ್ಯಾಹ್ನ ಕನ್ನಡ ಚಲನಚಿತ್ರ ರಂಗದ ಸೂಪರ್ ಸ್ಟಾರ್ ಅಭಿನವ ಚಕ್ರವರ್ತಿ ಕಿಚ್ಚ ಸುದೀಪ್ ಅವರ ಅಭಿನಯದ **'ಮ್ಯಾಕ್ಸ್'** ಚಲನಚಿತ್ರ ಅದ್ಭುತವಾಗಿ ಪ್ರದರ್ಶನಗೊಂಡು ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಯಿತು. ಹೊಸ ಡಿಜಿಟಲ್ ಬೋಸ್ ಸೌಂಡ್ ಸಿಸ್ಟಮ್ ಮತ್ತು ಓವರ್ ಹೆಡ್ ಪ್ರೊಜೆಕ್ಟರ್ ಮೂಲಕ ಬೆಳ್ಳಿತೆರೆಯ ಮೇಲೆ ಕನ್ನಡ ಚಿತ್ರ ವೀಕ್ಷಿಸಿದ ಸಿನಿಮಾಸಕ್ತ ಕನ್ನಡಿಗರು ಪಿ.ವಿ.ಆರ್.ನಲ್ಲಿ ಸಿನಿಮಾ ನೋಡಿದಂತಹ ಅನುಭವ ಪಡೆದರು. ಈ ಬಗ್ಗೆ ನಮ್ಮ ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ಚೆನ್ನು ಎಸ್. ಮಠದ ಅವರು ತಮ್ಮ ಅನಿಸಿಕೆಗಳನ್ನು ನೀಡಿ ಸಂತಸ ವ್ಯಕ್ತಪಡಿಸಿದ್ದಾರೆ. ಸಿ.ಆರ್.ಪಿ.ಎಫ್.ನ ಸಬ್ ಇನ್ಸ್‌ಪೆಕ್ಟರ್ ಶ್ರೀ ವೆಂಕಟೇಶ್ ಎಚ್. ಅವರೂ ಸಹ ತಮ್ಮ ಅನಿಸಿಕೆ ವ್ಯಕ್ತಪಡಿಸಿ ಚಿತ್ರ ವಿಮರ್ಷೆ ಮಾಡಿದ್ದಾರೆ. 2024ರಲ್ಲಿ ತೆರೆಕಂಡ ಶ್ರೀವಿಜಯ ಕಾರ್ತಿಕೇಯ ಅವರ ಚೊಚ್ಚಲ ನಿರ್ದೇಶನದ ಆಕ್ಷನ್ ಥ್ರಿಲ್ಲರ್ 'ಮ್ಯಾಕ್ಸ್' ಚಲನಚಿತ್ರದಲ್ಲಿ ಸುದೀಪ್ ಜೊತೆ ಮ್ಯಾಕ್ಸ್ ಮಂಜು, ವರಲಕ್ಷ್ಮಿ, ಶರತ್‌ಕುಮಾರ್ ಮುಂತಾದವರು ಅಭಿನಯಿಸಿದ್ದಾರೆ.

ಚಲನಚಿತ್ರ ಪ್ರದರ್ಶನದ ಮಧ್ಯಂತರ ವಿರಾಮದ ಸಮಯದಲ್ಲಿ, ಈ ಬಾರಿ ಸಂಘವು ಏರ್ಪಡಿಸಿದ್ದ 2025ರ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ನಗದು ಬಹುಮಾನವನ್ನು ವೇದಿಕೆ ಮೇಲೆ ವಿತರಿಸಲಾಯಿತು. ವಿನ್ನರ್ಸ್–ಕನ್ನಡ ಗೆಳೆಯರು ತಂಡದ ಹಾಗೂ ರನ್ನರ್ಸ್–ಕರ್ನಾಟಕ ಕಮಾಂಡೋಸ್ ತಂಡದ ನಾಯಕರು ಮತ್ತು ಆಟಗಾರರು ಹಾಗೂ ಬೆಸ್ಟ್ ಬೌಲರ್, ಬೆಸ್ಟ್ ಬ್ಯಾಟ್ಸ್‌ಮನ್, ಬೆಸ್ಟ್ ಆಲ್‌ರೌಂಡರ್ ಪ್ರಶಸ್ತಿಗೆ ಆಯ್ಕೆಯಾದವರು ತಮ್ಮ ತಮ್ಮ ಬಹುಮಾನವನ್ನು ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಂದ, ಕಾವಲು ಸಮಿತಿಯ ನಿಕಟಪೂರ್ವ ಸದಸ್ಯರಾದ ಶ್ರೀ ಅನಂತರಾಮ ಅರಳಿ, ಪ್ರಸ್ತುತ ಸದಸ್ಯರಾದ ಶ್ರೀ ಎನ್.ಎ. ಮಾಧವ ಮತ್ತು ಶ್ರೀ ಎಂ.ವಿ. ವೆಂಕಟೇಶ್ ಅವರ ಸಮ್ಮುಖದಲ್ಲಿ ಸ್ವೀಕರಿಸಿದರು. ಚಲನಚಿತ್ರ ಪ್ರದರ್ಶನದ ನಂತರ ಎಲ್ಲರಿಗೂ ಲಘು ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಚಿತ್ರ ವೀಕ್ಷಿಸಿದ ನಮ್ಮ ಕನ್ನಡಿಗರು ಬಲು ಸಂತಸ ಪಟ್ಟರು.

**'ಫಾರೆಸ್ಟ್' ಕನ್ನಡ ಚಲನಚಿತ್ರ ಪ್ರದರ್ಶನ :** ದಿನಾಂಕ 25.05.2025 ರಂದು ಸಂಜೆ ಮತ್ತೊಂದು ಕನ್ನಡ ಚಲನಚಿತ್ರ 'ಫಾರೆಸ್ಟ್' ಸಂಘದ ಸಭಾಂಗಣದಲ್ಲಿ ಪ್ರದರ್ಶನಗೊಂಡಿತು. ಫಾರೆಸ್ಟ್ ಕನ್ನಡ ಚಿತ್ರವು ಹಾಸ್ಯ ಮತ್ತು ಥ್ರಿಲ್ಲರ್ ಪ್ರಕಾರಕ್ಕೆ ಸೇರಿದ ಚಲನಚಿತ್ರವಾಗಿದೆ. 2025ರಲ್ಲಿ ಬಿಡುಗಡೆಯಾದ ಈ ಚಿತ್ರದ ನಿರ್ದೇಶಕರು ಶ್ರೀ ಚಂದ್ರಮೋಹನ್. ತಾರಾಗಣದಲ್ಲಿ ಚಿಕ್ಕಣ್ಣ, ಅನೀಶ್, ತೇಜೇಶ್ವರ್, ರಂಗಾಯಣ ರಘು, ಗುರುನಂದನ್, ಶರಣ್ಯ ಶೆಟ್ಟಿ ಮತ್ತು ಅರ್ಚನಾ ಕೊಟ್ಟಿಗೆ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಹೊಸ ಸೌಂಡ್ ಸಿಸ್ಟಮ್‌ನಲ್ಲಿ ಯಶಸ್ವಿಯಾಗಿ ಪ್ರದರ್ಶನವಾದ ಈ ಚಲನಚಿತ್ರವು ಸಹಾ ದೆಹಲಿ ಕನ್ನಡಿಗರಿಗೆ ಮೆಚ್ಚುಗೆಯಾಯಿತು. ❑

## ಸುಸಜ್ಜಿತ ಸಿನಿಮಾ ಪ್ರೊಜೆಕ್ಟರ್‌ನಿಂದ ಕನ್ನಡ ಚಲನಚಿತ್ರ ವೀಕ್ಷಣೆ–ಪಿವಿಆರ್ ಐನಾಕ್ಸ್ ಅನುಭವ

ದೆಹಲಿ ಕನ್ನಡಿಗರ ಅನುಗಾಲದ ಬೇಡಿಕೆ ಈಗ ಸಫಲವಾಗಿದೆ. ಹೌದು. ಬಹಳ ದಿನದಿಂದ ಎಲ್ಲರಿಗೂ ಒಂದು ಕೊರಗಿತ್ತು ಅದೇನೆಂದರೆ ತಮಿಳು ಸಂಘದವರು ಮತ್ತು ಆಂಧ್ರ ಸಂಘದವರು ಅವರವರ ಸಂಘದಲ್ಲಿ ತಮ್ಮ ಭಾಷೆಯ ಚಲನಚಿತ್ರವನ್ನು ಉಚಿತವಾಗಿ ವೀಕ್ಷಿಸುತ್ತಾರೆ, ಆ ಭಾಗ್ಯ ನಮಗೆ ಬರುವುದು ಯಾವಾಗ ಎಂಬ ಎಲ್ಲರ ಕೊರಗನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ದಿನಾಂಕ 18.05.2025 ರಂದು ಸಂಘದಲ್ಲಿ ಹೊಸ ಸಿನಿಮಾ ಪ್ರೊಜೆಕ್ಟರ್ ಅಳವಡಿಸುವ ಮೂಲಕ ದೆಹಲಿ ಕರ್ನಾಟಕ ಸಂಘದ ಮುಕುಟಕ್ಕೆ ಇನ್ನೊಂದು ಗರಿಯಿಟ್ಟಂತೆ ಕನ್ನಡಿಗರ ಕನಸನ್ನು ನನಸು ಮಾಡಿದ್ದಾರೆ. ದೆಹಲಿ ಕರ್ನಾಟಕ ಸಂಘದಲ್ಲಿ ಆಧುನಿಕ ತಂತ್ರಜ್ಞಾನದೊಂದಿಗೆ ಪಿವಿಆರ್ ರೀತಿಯ ಸುಸಜ್ಜಿತ ಸಿನಿಮಾ ಪ್ರೊಜೆಕ್ಟರನ್ನು ಅಳವಡಿಸಿ ದೆಹಲಿ ಕನ್ನಡಿಗರಿಗೆ ಹೊರನಾಡಿನಲ್ಲೂ ಚಿತ್ರಮಂದಿರದಲ್ಲಿ ಕುಳಿತು ಕನ್ನಡ ಚಿತ್ರವನ್ನು ನೋಡಿದಂತಹ ಅನುಭವ ಆಗುವಂತೆ ಮಾಡಿದ ಸಂಘದ ಅಧ್ಯಕ್ಷರು ದೆಹಲಿ ಕನ್ನಡಿಗರ ಮನಗೆದ್ದಿದ್ದಾರೆ. **ಮ್ಯಾಕ್ಸ್ ಚಿತ್ರ :** ದಿನಾಂಕ 18.05.2025 ರಂದು ಭಾನುವಾರ ನಮ್ಮ ಚಂದನವನದ ಅಭಿನಯ ಚಕ್ರವರ್ತಿ ಎಂದು ಬಿರುದಾಂಕಿತ ಕಿಚ್ಚ ಸುದೀಪ್ ಅವರ **"ಮ್ಯಾಕ್ಸ್"** ಸಿನಿಮಾವನ್ನು ಪ್ರದರ್ಶಿಸುವ ಮೂಲಕ ಹೊಸ ಸಿನಿಮಾ ಪ್ರೊಜೆಕ್ಟರನ್ನು ಪ್ರಾರಂಭಿಸಲಾಯಿತು. ಅಪ್ರಾಪ್ತ ಚಿಕ್ಕ ವಯಸ್ಸಿನ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಇಬ್ಬರು ದುರುಳರನ್ನು, ರಾತ್ರಿಯಲ್ಲಿ ನಗರದಿಂದ ಅನತಿ ದೂರವಿರುವ ಒಂದು ಪೊಲೀಸ್ ಠಾಣೆಯಲ್ಲಿ ಯಾವುದೋ ಕಾರಣಕ್ಕೆ ತಂದು ಸೆಲ್‌ನಲ್ಲಿ ಕೂಡಿ ಹಾಕಿರುತ್ತಾರೆ. ಅಲ್ಲಿ ಆ ದುಷ್ಟರ ಕೊಲೆಯಾಗುತ್ತದೆ, ಆದರೆ ಯಾರು ಮಾಡಿದರು ಎಂಬುದೇ ತಿಳಿಯದೆ ಸಿನಿಮಾ ತುಂಬಾ ಕುತೂಹಲ ಮೂಡಿಸುತ್ತದೆ. ಅಲ್ಲದೆ ಆ ಇಬ್ಬರು ರಾಜಕೀಯ ಮುಖಂಡರ ಮಕ್ಕಳಾಗಿರುವುದರಿಂದ ಆ ಠಾಣೆ ಮೇಲೆ ನಡೆಯುವ ಹಲವು ಸಂಚುಗಳಿಂದ, ಎರಡು ತಿಂಗಳಿನಿಂದ ಅಮಾನತ್ತಿನಲ್ಲಿದ್ದ ಇನ್ಸ್‌ಪೆಕ್ಟರ್ ಅದೇ ರಾತ್ರಿ ಆ ಸ್ಟೇಷನ್‌ಗೆ ಬಂದು ತಮ್ಮ ಸಿಬ್ಬಂದಿಯನ್ನು ಮತ್ತು ಅವರ ಪರಿವಾರದವರನ್ನು, ಪುಂಡಪೋಕರಿಗಳು ಹಾಗು ರಾಜಕಾರಣಿಗಳಿಂದ ಹೇಗೆ ಕಾಪಾಡುತ್ತಾನೆ ಮತ್ತು ಆ ಅತ್ಯಾಚಾರಿ ಕಿರಾತಕರನ್ನು ಯಾರು ಕೊಲೆ ಮಾಡಿದರೆಂದು ಹೇಗೆ ಕಂಡು ಹಿಡಿಯುತ್ತಾನೆ ಎಂಬ ಚಿತ್ರವನ್ನು ನಿರ್ದೇಶಕ ವಿಜಯ್ ಕಾರ್ತಿಕೇಯ ಅವರು ತುಂಬಾ ಮನೋಜ್ಞವಾಗಿ ಕಟ್ಟಿಕೊಟ್ಟಿದ್ದಾರೆ ಮತ್ತು ಇನ್ಸ್‌ಪೆಕ್ಟರ್ ಪಾತ್ರದಲ್ಲಿ ಸುದೀಪ್ ಅಭಿನಯ ಚೆನ್ನಾಗಿ ಮೂಡಿ ಬಂದಿದೆ ಈ ಚಲನಚಿತ್ರ ನೋಡಿ ದೆಹಲಿ ಕನ್ನಡಿಗರೊಂದಿಗೆ ನಾನೂ ತುಂಬಾ ಸಂತೋಷ ಪಟ್ಟೆ.

**'ಫಾರೆಸ್ಟ್' ಚಿತ್ರ :** ದಿನಾಂಕ 25.05.2025 ರಂದು ಸಂಘದಲ್ಲಿ **"ಫಾರೆಸ್ಟ್"** ಎಂಬ ಕನ್ನಡ ಚಲನಚಿತ್ರವನ್ನು ತೋರಿಸಲಾಯಿತು. ಕಾಡಿನಲ್ಲಿ ವೀರಪ್ಪನ್ ತಾನು ಕೂಡಿಟ್ಟ ಚಿನ್ನವನ್ನು ಯಾರೂ ತೆಗೆದುಕೊಂಡು ಹೋಗದ ಹಾಗೆ ಇಂದಿಗೂ ದೆವ್ವವಾಗಿ ಕಾಯ್ದು ಕುಳಿತಿರುವ ಕಥೆಯನ್ನು ಊಹಿಸಿ ಬರೆದಿರುವ ನಿರ್ದೇಶಕರಿಗೆ ನನ್ನದೊಂದು ದೊಡ್ಡ ನಮಸ್ಕಾರ. ಈ ಸಿನಿಮಾವು ಕಾಮಿಡಿಯಿಂದ ಇಲ್ಲಿನ ಕೂಡಿದ್ದರೂ, ಬಹಳ ಕುತೂಹಲ ಮೂಡಿಸುವ ಚಿತ್ರವನ್ನು ನೋಡಿ ಕನ್ನಡಿಗರು ಹರ್ಷಿಸಿದರು. ಈ ಚಲನಚಿತ್ರದಲ್ಲಿ ರಂಗಾಯಣ ರಘು ಮತ್ತು ಚಿಕ್ಕಣ್ಣ ಅವರ ಅಭಿನಯವು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತದೆ. ❑

***ವೆಂಕಟೇಶ್ ಎಚ್.***

# ಸೇವಾ ನಿವೃತ್ತಿಯ ನಂತರ ತಾಯ್ನಾಡಿಗೆ ಮರಳುತ್ತಿರುವ ಸಂಘದ ಆಜೀವ ಸದಸ್ಯರಿಗೆ ದೆಹಲಿ ಕನ್ನಡಿಗರಿಂದ ಆತ್ಮೀಯ ಬೀಳ್ಕೊಡುಗೆ



ತಮ್ಮ ಉದ್ಯೋಗಕ್ಕಾಗಿ ದೆಹಲಿಗೆ ಬಂದು ಇಲ್ಲಿನ ಕನ್ನಡಿಗರ ಜೊತೆ ಒಡನಾಟ ಬೆಳೆಸಿ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿಯ ನಂತರ ತಾಯ್ನಾಡಿಗೆ ತೆರಳುತ್ತಿರುವ ಸಂಘದ ಆಜೀವ ಸದಸ್ಯರುಗಳಿಗೆ ಸಂಘದ ವೇದಿಕೆಯಲ್ಲಿ 'ಫಾರೆಸ್ಟ್' ಚಲನಚಿತ್ರ ಪ್ರದರ್ಶನದ ನಂತರ ಬೀಳ್ಕೊಡುಗೆ ಕಾರ್ಯಕ್ರಮವನ್ನು ಇದೇ ಮೊದಲ ಬಾರಿಗೆ ಸಂಘವು ದಿನಾಂಕ 25.05.2025 ರಂದು ಸಂಜೆ ಹಮ್ಮಿಕೊಂಡಿತ್ತು. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ನಿವೃತ್ತರಾದ ಕೇಂದ್ರ ಜಲ ಆಯೋಗದ ಡೆಪ್ಯುಟಿ ಡೈರೆಕ್ಟರ್ ಶ್ರೀ ಶ್ರೀಹರಿ ಶೇಖರ್ (ಶೇಖರಪ್ಪ) ಮತ್ತು ದೆಹಲಿ ಪೋಲಿಸ್‌ನ ಕನ್ನಡಿಗ ಅಧಿಕಾರಿಗಳಾದ ಶ್ರೀ ಅಶ್ವಥ್ ಕೆ. ಹಾಗೂ ಶ್ರೀ ದೇವೇಂದ್ರಪ್ಪ, ಶ್ರೀ ಹನುಮಂತರಾಯ, ಶ್ರೀ ಸುಬ್ರಮಣ್ಯ ಪಿ.ಎಂ., ಶ್ರೀ ಸಿದ್ದರಾಜು ಮತ್ತು ಶ್ರೀ ವೆಂಕಟೇಶ್ ಎನ್.ಎನ್. ಅವರುಗಳನ್ನು ಅವರ ಕುಟುಂಬದವರ ಜೊತೆ ದೆಹಲಿ ಕರ್ನಾಟಕ ಸಂಘದ ವತಿಯಿಂದ ಸನ್ಮಾನಿಸಿ, ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅವರ ನಿವೃತ್ತ ಜೀವನಕ್ಕೆ ಶುಭಕೋರಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

ಎಲ್ಲರನ್ನು ಸ್ವಾಗತಿಸಿದ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ನಿವೃತ್ತರಾಗಿ ತಾಯ್ನಾಡಿಗೆ ಹಿಂತಿರುಗುತ್ತಿರುವ ತಮ್ಮ ದೆಹಲಿ ಪೋಲಿಸ್ ಸಹೋದ್ಯೋಗಿಗಳನ್ನು ಹಾಗೂ ಪ್ರತಿಭಾವಂತ ಇಂಜಿನಿಯರ್ ಹಾಗು ಗಾಯಕ ಶ್ರೀ ಶೇಖರಪ್ಪ ಅವರ ಸಾಧನೆಗಳನ್ನು ಮತ್ತು ದೆಹಲಿ ಕನ್ನಡಿಗರಿಗೆ, ದೆಹಲಿ ಕರ್ನಾಟಕ ಸಂಘಕ್ಕೆ ಈ ಎಲ್ಲರೂ ಎಲೆಮರೆ ಕಾಯಿಯಂತೆ ನೀಡಿದ ಸೇವೆ ಮತ್ತು ಕೊಡುಗೆಗಳನ್ನು ಶ್ಲಾಘಿಸುತ್ತಾ ಅವರುಗಳಿಗೆ ಹಾಗು ಅವರ ಕುಟುಂಬದವರಿಗೆ ಶುಭ ಹಾರೈಸಿದರು.

ಸೇವಾ ನಿವೃತ್ತರಾಗಿರುವ ಸಂಘದ ಈ ಎಲ್ಲಾ ಸದಸ್ಯರಿಗೆ ಗೌರವಾರ್ಪಣೆ ಮಾಡುವ ಸಂದರ್ಭ ಶ್ರೀ ಶೇಖರಪ್ಪ, ಶ್ರೀ ಸುಬ್ರಮಣ್ಯ ಪಿ.ಎಂ., ಶ್ರೀ ಅಶ್ವಥ್ ಕೆ, ಶ್ರೀ ದೇವೇಂದ್ರಪ್ಪ, ಶ್ರೀ ಹನುಮಂತರಾಯ, ಶ್ರೀ ಸಿದ್ದರಾಜು ಮತ್ತು ಶ್ರೀ ವೆಂಕಟೇಶ್ ಎನ್.ಎನ್. ಅವರ ಪರಿಚಯವನ್ನು ಕ್ರಮವಾಗಿ ಅಭಿಮತ ಪತ್ರಿಕೆ ಪ್ರಧಾನ ಸಂಪಾದಕ ಶ್ರೀ ಕೆ.ಎಸ್. ಮೂರ್ತಿ, ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಎನ್.ಆರ್. ಶ್ರೀನಾಥ್, ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್., ಸದಸ್ಯ ಶ್ರೀ ಪ್ರಭಾಕರ ಮಡ್ಡಿತೋಟ ಮತ್ತು ಸದಸ್ಯೆ ಶ್ರೀಮತಿ ಮಾಲಿನಿ ಪ್ರಲ್ಹಾದ ಅವರು ಮಾಡಿಕೊಟ್ಟರು.

ನಂತರ, ಸನ್ಮಾನ ಸ್ವೀಕರಿಸಿದ ಪ್ರತಿಯೊಬ್ಬ ಸದಸ್ಯರು ಮಾತನಾಡಿ ತಮ್ಮ ತಮ್ಮ ಅನುಭವಗಳನ್ನು ಮತ್ತು ಸಂಘದ ಬಗ್ಗೆ ಅನಿಸಿಕೆಗಳನ್ನು ಹಂಚಿಕೊಂಡು ಈ ರೀತಿಯಲ್ಲಿ ತಮಗೆ ಬೀಳ್ಕೊಡುಗೆ ನೀಡುತ್ತಿರುವ ಬಗ್ಗೆ ಸಂತೋಷ ವ್ಯಕ್ತಪಡಿಸುತ್ತಾ, ಸಂಘಕ್ಕೆ ಮತ್ತು ಎಲ್ಲ ದೆಹಲಿ ಕನ್ನಡಿಗರಿಗೆ ಕೃತಜ್ಞತೆ ಸಲ್ಲಿಸಿದರು. ಶ್ರೀ ಶೇಖರಪ್ಪ ಅವರು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸುವಾಗ ಆದ ಅನುಭವಗಳನ್ನು, ಡಾ. ರಾಜಕುಮಾರ್ ಅವರು ದೆಹಲಿಗೆ ಬಂದಾಗ ಅವರನ್ನು ನೋಡಿಕೊಳ್ಳಲು ತಮಗೆ ಅವಕಾಶ ನೀಡಿದಕ್ಕಾಗಿ, ದೆಹಲಿ ಕರ್ನಾಟಕ ಸಂಘಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಾ, ತಮ್ಮ ವೃತ್ತಿ ಜೀವನದ ಅನುಭವಗಳನ್ನು, ದೆಹಲಿಯ ಸಂಘ ಸಂಸ್ಥೆಗಳ ಜೊತೆ ಕಳೆದ ದಿನಗಳನ್ನು, ಗಾಯಕರಾಗಿ ಡಾ. ರಾಜ್ ಅವರ ಗೀತೆಗಳನ್ನ ಸ್ಥಳೀಯ ಕಲಾವಿದರೊಂದಿಗೆ ಹಾಡಿದ್ದನ್ನು ನೆನಪಿಸಿಕೊಂಡರು ಮತ್ತು ಅವರ ಒಂದು ಚಿತ್ರಗೀತೆಯ ಸಾಲುಗಳನ್ನು ಹಾಡಿದರು.

ಶ್ರೀ ಅಶ್ವಥ್ ಕೆ. ಅವರು ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗು ದೆಹಲಿ ಒಕ್ಕಲಿಗ ಗೌಡ ಸಂಘದ ಜೊತೆಗೆ ಕಳೆದ ದಿನಗಳನ್ನು ನೆನಪಿಸಿಕೊಂಡು ಎಲ್ಲರೂ ಒಟ್ಟಾಗಿ ಈ ಸಂಘ ಸಂಸ್ಥೆಗಳ ಕೆಲಸ ಮಾಡಬೇಕೆಂದು ಕರೆ ನೀಡಿದರು. ಶ್ರೀ ಹನುಮಂತರಾಯ, ಶ್ರೀ ಸುಬ್ರಹ್ಮಣ್ಯ ಪಿ.ಎಂ., ಮತ್ತು ಶ್ರೀ ದೇವೇಂದ್ರಪ್ಪ ಅವರು ದೆಹಲಿಯಲ್ಲಿ ಕಳೆದ ದಿನಗಳನ್ನ, ತಮಗಾದ ಅನುಭವುಗಳನ್ನ ಮೆಲುಕು ಹಾಕುತ್ತಾ, ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯು ಮತ್ತು ದೆಹಲಿ ಕರ್ನಾಟಕ ಸಂಘದ ಕಾರ್ಯ ಚಟುವಟಿಕೆಗಳನ್ನು ಶ್ಲಾಘಿಸಿ ಈ ಕಾರ್ಯಕ್ರಮದಲ್ಲಿ ತಮ್ಮನ್ನು ಮತ್ತು ಕುಟುಂಬದವರನ್ನು ಅಭಿನಂದಿಸಿದ್ದಕ್ಕಾಗಿ ಧನ್ಯವಾದ ಅರ್ಪಿಸಿದರು. ಶ್ರೀ ಸಿದ್ದರಾಜು ಮತ್ತು ಶ್ರೀ ವೆಂಕಟೇಶ್ ಎನ್.ಎನ್. ಅವರು ತಮ್ಮ ಜೀವನದ ಪಯಣದ ಬಗ್ಗೆ ಕೆಲವು ಮಾತುಗಳನ್ನು ಹೇಳಿ ಈ ರೀತಿಯಾಗಿ ತಮಗೆ ಬೀಳ್ಕೊಡುಗೆ ನೀಡುತ್ತಿರುವ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ವಂದನೆಗಳನ್ನು ತಿಳಿಸಿದರು.

ಕೊನೆಯಲ್ಲಿ ಶ್ರೀ ಎನ್.ಆರ್. ಶ್ರೀನಾಥ್ ಅವರು ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರುಗಳ ಪರವಾಗಿ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಭಾಗಿಯಾದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತಾ, ನಿವೃತ್ತರಾಗಿ ಕರ್ನಾಟಕದ ತಮ್ಮ ತಮ್ಮ ಸ್ವಂತ ಊರುಗಳಿಗೆ ತೆರಳುತ್ತಿರುವ ಎಲ್ಲಾ ಏಳು ಆಜೀವ ಸದಸ್ಯರಿಗೆ ದೆಹಲಿ ಕನ್ನಡಿಗರ ಪರವಾಗಿ ಶುಭ ಕೋರಿದರು. ಕಾರ್ಯಕ್ರಮದ ನಂತರ ಉಪಾಹಾರದ ವ್ಯವಸ್ಥೆಯನ್ನು ಸಂಘದಿಂದ ಮಾಡಲಾಗಿತ್ತು. ❑

***ಅಭಿಮತ ವರದಿ***

---

ದಿನಾಂಕ 15.05.2025 ರಂದು ನಮ್ಮ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಹೊಸದಾಗಿ ಅಳವಡಿಸಿದ ಡಿಜಿ ಸೌಂಡ್ ಸಿಸ್ಟಮ್‌ನಲ್ಲಿ **"ಮ್ಯಾಕ್ಸ್"** ಚಲನಚಿತ್ರದ ಪ್ರದರ್ಶನ ಆಯೋಜಿಸಿದ್ದರು. ಈ ಚಿತ್ರ ವೀಕ್ಷಿಸುತ್ತಿದ್ದ ನನಗೆ ನನ್ನ ದೆಹಲಿಯ ಎಂಬತ್ತರ ದಶಕದ ಹಳೆಯ ದಿನಗಳು ನೆನಪಾದವು. ಅಂದಿನ ದಿನಗಳಲ್ಲಿ ಕನ್ನಡ ಸಿನಿಮಾಗಳ ಪ್ರದರ್ಶನ ಮಹಾರಾಷ್ಟ್ರ ರಂಗಾಯಣದ ಸಭಾಂಗಣದಲ್ಲಿ ಆಯೋಜಿಸಲಾಗುತ್ತಿತ್ತು. ನಾವೆಲ್ಲ ಪ್ರತಿಯೊಬ್ಬರಿಗೆ ಐದು / ಹತ್ತು ರೂಪಾಯಿ ಕೊಟ್ಟು ನೋಡುತ್ತಿದ್ದೆವು. ಇಂದು ದೆಹಲಿ ಕರ್ನಾಟಕ ಸಂಘವು ನಮ್ಮದೇ ಆದ ಸುಸಜ್ಜಿತ ಸಭಾಂಗಣದಲ್ಲಿ ಚಲನಚಿತ್ರ ಪ್ರದರ್ಶನ ಏರ್ಪಡಿಸಿ, ಚಲನಚಿತ್ರ ವೀಕ್ಷಿಸಿದ ನಂತರ ಕುಡಿಯಲು ಕಾಫೀ ಕೂಡ ಕುಡಿಸುವ ಮಟ್ಟಿಗೆ ಬೆಳೆದು ನಿಂತಿದ್ದು ನನಗೆ ಸಂತಸ ಹಾಗೂ ಸಾರ್ಥಕತೆಯ ಭಾವ ಮೂಡಿಸಿತು. ದೆಹಲಿ ಕರ್ನಾಟಕ ಸಂಘವನ್ನು ಹುಟ್ಟು ಹಾಕಿ ಇಷ್ಟರ ಮಟ್ಟಿಗೆ ಬೆಳೆಯಲು ಶ್ರಮಿಸಿದ ಸರ್ವ ಸದಸ್ಯರ ಚಿತ್ರಗಳು ನನ್ನ ಕಣ್ಣಮುಂದೆ ಸರಿದು ಹೋದವು. ಅವರೆಲ್ಲರ ಶ್ರಮಕ್ಕೆ ಕೃತಜ್ಞತೆಗಳು. ❑

***ಚೆನ್ನು ಎಸ್. ಮಠದ***

### ಶ್ರೀ ಅಶ್ವಥ್ ಕೆ.



ಶ್ರೀ ಅಶ್ವಥ್ ಕೆ. ಅವರು ಮೂಲತಃ ತುಮಕೂರು ಜಿಲ್ಲೆಯ ಚಿಕ್ಕತೊಟ್ಲಿಕೆರೆ ಗ್ರಾಮದಿಂದ ಬಂದವರು. ದಿನಾಂಕ 03.05.1965ರಲ್ಲಿ ಕೃಷಿಕ ಕುಟುಂಬದಲ್ಲಿ ಜನಿಸಿದರು.ತುಮಕೂರಿನ ಕಾಲೇಜಿನಿಂದ ಪದವಿ ಪಡೆದ ನಂತರ ಏಪ್ರಿಲ್ 1986 ರಿಂದ ದೆಹಲಿಗೆ ಬಂದು ದೆಹಲಿ ಪೋಲೀಸ್‌ನಲ್ಲಿ ಸೇವೆಗೆ ಸೇರಿದರು.

ಕಳೆದ 30 ವರ್ಷಗಳಿಂದ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದಾರೆ. ದೆಹಲಿ ಒಕ್ಕಲಿಗ ಗೌಡ ಸಂಘದ ಸ್ಥಾಪನೆಯಲ್ಲಿ ಶ್ರೀಯುತರು ಪ್ರಮುಖ ಪಾತ್ರ ವಹಿಸಿದ್ದು, ಆರಂಭದಲ್ಲಿ ಜಂಟಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯಲ್ಲಿ ಸಕ್ರಿಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ ಹಾಗು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಆಡಳಿತ ಮಂಡಳಿಯ ಸದಸ್ಯರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

ಇವರ ಧರ್ಮಪತ್ನಿ ಶ್ರೀಮತಿ ರಾಮಲಕ್ಷ್ಮೀ ಒಬ್ಬ ಆದರ್ಶ ಗೃಹಿಣಿಯಾಗಿದ್ದಾರೆ. ಇವರ ಮೂವರೂ ಮಕ್ಕಳು ದೆಹಲಿ ಕನ್ನಡ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದಾರೆ. ಮಗಳು ಶ್ರೀಮತಿ ರಾಜೇಶ್ವರಿ ಎಂಬಿಎ (ಎಚ್.ಆರ್.) ಪದವಿ ಪಡೆದಿದ್ದು ಪ್ರಸ್ತುತ ದುಬೈಯಲ್ಲಿ ಕೆಲಸ ಮಾಡುತ್ತಿದ್ದಾರೆ. ಹಿರಿಯ ಮಗ ಶ್ರೀ ಮಹೇಶ್ ಕುಮಾರ್ ಬೆಂಗಳೂರಿನಲ್ಲಿ



ಸ್ವಂತ ಉದ್ಯೋಗ ಮಾಡುತ್ತಿದ್ದಾರೆ. ಎರಡನೇ ಮಗ ಶ್ರೀ ಜಯಂತ್ ಕುಮಾರ್ ಮಾರ್ಕೆಟಿಂಗ್‌ನಲ್ಲಿ ಎಂಬಿಎ ಮಾಡಿದ್ದು ಏರ್‌ಕಂಡಿಷನಿಂಗ್ / ಡಕ್ಟಿಂಗ್‌ನ ಸ್ವಂತ ಉದ್ಯಮ ನಡೆಸುತ್ತಿದ್ದಾರೆ. 1986 ರಿಂದ 2025 ರವರೆಗೆ ಸತತ 39 ವರ್ಷಗಳ ಕಾಲ ದೆಹಲಿ ಪೋಲೀಸ್‌ನಲ್ಲಿ ಸೇವೆ ಸಲ್ಲಿಸಿ ಇದೀಗ ಇನ್ಸ್‌ಪೆಕ್ಟರ್ ಆಗಿ ಭಡ್ತಿಯೊಂದಿಗೆ ದಿನಾಂಕ 30.04.2025 ರಂದು ಸೇವೆಯಿಂದ ನಿವೃತ್ತರಾಗಿದ್ದಾರೆ.

ದೆಹಲಿ ಕರ್ನಾಟಕ ಸಂಘದ ವತಿಯಿಂದ ದಿನಾಂಕ 25.05.2025ರಂದು ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶ್ರೀ ಅಶ್ವಥ್ ಕೆ. ಅವರ ನಿವೃತ್ತ ಜೀವನಕ್ಕೆ ಶುಭ ಕೋರುತ್ತಾ ಅವರ ಕುಟುಂಬದವರ ಜೊತೆ ಅವರನ್ನು ಅಭಿನಂದಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

### ಶ್ರೀ ದೇವೇಂದ್ರಪ್ಪ



ಇವರು ಮೈಸೂರು ಜಿಲ್ಲೆ, ಕೆ.ಆರ್. ನಗರ ತಾಲ್ಲೂಕು ಕೆಡಗ ಗ್ರಾಮದಲ್ಲಿ ದಿನಾಂಕ 22.05.1965 ರಲ್ಲಿ ಜನಿಸಿದರು. ತಮ್ಮ ಹೈಸ್ಕೂಲ್ ವರೆಗಿನ ವಿದ್ಯಾಭ್ಯಾಸವನ್ನು ಕೆ.ಆರ್. ನಗರದಲ್ಲಿ ಮುಗಿಸಿ, ಮೈಸೂರಿನಲ್ಲಿ ಪಿಯುಸಿ ತದನಂತರ ಇನ್ಸಿಟ್ಯೂಟ್ ಆಫ್ ಎಜ್ಯುಕೇಷನ್‌ನಿಂದ ಟಿಸಿಹೆಚ್ ಪದವಿ ಪಡೆದಿರುತ್ತಾರೆ.

ದಿನಾಂಕ 18.03.1986 ರಿಂದ ದೆಹಲಿಯಲ್ಲಿ ದೆಹಲಿ ಪೋಲೀಸ್ ಇಲಾಖೆಯಲ್ಲಿ ಸೇವೆಗೆ ಸೇರಿರುತ್ತಾರೆ. ರಾಷ್ಟ್ರಪತಿ ಭವನದಲ್ಲಿ ವಿಐಪಿ ಭದ್ರತಾ ತಂಡದಲ್ಲಿ ಸೇವೆ ಆರಂಭಿಸಿ ದೆಹಲಿ ಪೋಲೀಸ್‌ನ ವಿವಿಧ ಭಾಗಗಳಲ್ಲಿ, 2014–2021 ರವರೆಗೆ ಐಬಿನಲ್ಲಿ ಡೆಪ್ಯೂಟೇಷನ್ ಸೇರಿದಂತೆ ಹಲವೆಡೆ ಕಾರ್ಯ ನಿರ್ವಹಿಸಿ 39 ವರ್ಷಗಳ ಸೇವೆಯ ನಂತರ ಇದೀಗ ಇನ್ಸ್‌ಪೆಕ್ಟರ್ ಆಗಿ ಭಡ್ತಿ ಹೊಂದಿ ನಿವೃತ್ತರಾಗಿದ್ದಾರೆ.

2004 ರಿಂದ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿರುವ ಶ್ರೀಯುತರು ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯ ಖಜಾಂಚಿಗಳಾಗಿ, ಉಪಾಧ್ಯಕ್ಷರಾಗಿ ಹಾಗು ನಿಕಟಪೂರ್ವ ಅಧ್ಯಕ್ಷರಾಗಿ ಗಣನೀಯ ಸೇವೆ ಸಲ್ಲಿಸಿದ್ದಾರೆ.

ಇವರ ಧರ್ಮಪತ್ನಿ ಶ್ರೀಮತಿ ಮಾದಲಾಂಬಿಕೆ (ಜ್ಯೋತಿ) ಬಿ.ಎ. ಪದವೀಧರೆ ಮತ್ತು ಒಬ್ಬ ಆದರ್ಶ ಗೃಹಿಣಿಯಾಗಿದ್ದಾರೆ. ಮಗ ಶ್ರೀ ಮಿಲನ್ ಎಂಬಿಎ ಪದವಿ



ಪಡೆದು ಮೈಸೂರಿನ ಇನ್ಫೋಸಿಸ್‌ನಲ್ಲಿ ಉದ್ಯೋಗದಲ್ಲಿದ್ದಾರೆ. ಮಗಳು ಶ್ರೀಮತಿ ಧನಶ್ರೀ ಬಿ.ಎಸ್ಸಿ ಪದವೀಧರೆ, ಮದುವೆಯ ನಂತರ ಮೈಸೂರಿನಲ್ಲಿ ನೆಲಸಿದ್ದಾರೆ.

ದೆಹಲಿ ಪೋಲೀಸ್‌ನಲ್ಲಿ 39 ವರ್ಷಗಳ ಸುದೀರ್ಘ ಸೇವೆಯ ನಂತರ ನಿವೃತ್ತರಾಗಿ ತಾಯ್ನಾಡಿಗೆ ತೆರಳುತ್ತಿರುವ ಶ್ರೀ ದೇವೇಂದ್ರಪ್ಪ ಅವರಿಗೆ ಮತ್ತು ಅವರ ಕುಟುಂಬದವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು ಮತ್ತು ಅವರ ನಿವೃತ್ತ ಜೀವನಕ್ಕೆ ಶುಭ ಹಾರೈಕೆಗಳು. ದಿನಾಂಕ 25.05.2025 ರಂದು ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ದೇವೇಂದ್ರಪ್ಪ ಅವರನ್ನು ಅವರ ಕುಟುಂಬದವರೊಂದಿಗೆ ದೆಹಲಿ ಕರ್ನಾಟಕ ಸಂಘದಿಂದ ಅಭಿನಂದಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

### ಶ್ರೀ ಸಿದ್ದರಾಜು



ಶ್ರೀ ಸಿದ್ದರಾಜು ಅವರು ಕರ್ನಾಟಕದ ರಾಮನಗರದಲ್ಲಿ ದಿನಾಂಕ 12.04.1965 ರಲ್ಲಿ ಜನಿಸಿದರು. ಪದವಿಪೂರ್ವ ಶಿಕ್ಷಣವನ್ನು ರಾಮನಗರದಲ್ಲಿ ಪಡೆದ ನಂತರ 1987 ರಲ್ಲಿ ದೆಹಲಿಗೆ ಬಂದು ದೆಹಲಿ ಪೋಲೀಸ್‌ನಲ್ಲಿ ಸೇವೆಗೆ ಸೇರಿರುತ್ತಾರೆ. ತಮ್ಮ 38 ವರ್ಷ ಸೇವಾವಧಿಯಲ್ಲಿ ದೆಹಲಿ ಪೋಲೀಸ್‌ನ ನಾರ್ಥ್, ಸೆಂಟ್ರಲ್ ಡಿಸ್ಟ್ರಿಕ್ಟ್, ಒಂದನೇ ಮತ್ತು ಐದನೇ ಬೆಟಾಲಿಯನ್‌ಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ಸಿದ್ದರಾಜು ಅವರು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದು, ಸಂಘದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗಿಯಾಗುತ್ತಿದ್ದಾರೆ. ಇವರ ಧರ್ಮಪತ್ನಿ ಶ್ರೀಮತಿ ಶೋಭಾ ಸಿದ್ದರಾಜು ಒಬ್ಬ ಆದರ್ಶ ಗೃಹಿಣಿಯಾಗಿದ್ದಾರೆ. ದಂಪತಿಗಳಿಗೆ ಇಬ್ಬರು ಮಕ್ಕಳಿದ್ದಾರೆ. ಮಗಳು ಕು. ಸ್ವಾತಿ ಪದವೀಧರೆ ಮತ್ತು ಮಗ ಕು. ಸೂರಜ್ ಸಹ ಪದವೀಧರ. ದೆಹಲಿ ಪೋಲೀಸ್ ಸೇವೆಯಿಂದ ನಿವೃತ್ತರಾಗಿ ತಾಯ್ನಾಡಿಗೆ ಮರಳುತ್ತಿರುವ ಶ್ರೀಯುತ ಸಿದ್ದರಾಜು ಅವರಿಗೆ ಮತ್ತು ಅವರ ಕುಟುಂಬದವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಶುಭಾಶಯಗಳು.ಅವರ ನಿವೃತ್ತ ಜೀವನಕ್ಕೆ ಶುಭವನ್ನು ಕೋರುತ್ತಾ ದಿನಾಂಕ 25.05.2025 ರಂದು ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರ ಕುಟುಂಬದವರೊಂದಿಗೆ ದೆಹಲಿ ಕರ್ನಾಟಕ ಸಂಘದಿಂದ ಅವರನ್ನು ಅಭಿನಂದಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.





## ಶ್ರೀ ಶ್ರೀಹರಿ ಶೇಖರ್ (ಶೇಖರಪ್ಪ)

ಕರ್ನಾಟಕದ ರಾಣಿಬೆನ್ನೂರು ತಾಲ್ಲೂಕು ಹನುಮಾಪುರ ಗ್ರಾಮದಲ್ಲಿ ದಿನಾಂಕ 01.05.1965ರಲ್ಲಿ ಕೃಷಿಕ ಕುಟುಂಬದಲ್ಲಿ ಶ್ರೀಹರಿ ಶೇಖರ್ ಜನಿಸಿದರು. ಆರಂಭಿಕ ವಿದ್ಯಾಭ್ಯಾಸವನ್ನು ಸ್ವಗ್ರಾಮದಲ್ಲಿ ಮಾಡಿ, ತರಳಬಾಳು ವಿದ್ಯಾಸಂಸ್ಥೆ ರಾಣಿಬೆನ್ನೂರಿನಿಂದ ಹೈಸ್ಕೂಲ್, ಜಿ.ಹೆಚ್. ಕಾಲೇಜು, ಹಾವೇರಿಯಿಂದ ಪದವಿಪೂರ್ವ ಶಿಕ್ಷಣ ಪಡೆದರು. ತದನಂತರ ರಾಣಿಬೆನ್ನೂರಿನ STJIT ನಿಂದ ಬಿ.ಇ. (ಸಿವಿಲ್) ಪದವಿಯನ್ನು 1989ರಲ್ಲಿ ಪಡೆದಿರುತ್ತಾರೆ.

ಕೆಆರ್‌ಇಸಿ ಸುರತ್ಕಲ್ (ಈಗಿನ ಎನ್‌ಐಟಿ ಕರ್ನಾಟಕ) ನಿಂದ ಮೆರೀನ್ ಸ್ಟ್ರಕ್ಚರ್ಸ್‌ನಲ್ಲಿ 1994 ರಲ್ಲಿ ಎಂಟೆಕ್. ಪದವಿ ಗಳಿಸಿದ್ದಾರೆ. 1990–91 ರಲ್ಲಿ ಕರ್ನಾಟಕ ಸರ್ಕಾರದಿಂದ ಅಪ್ರೆಂಟಿಸ್ ಟ್ರೇನಿಂಗ್ ಸಹಾ ಪಡೆದಿದ್ದಾರೆ. 1990–1922ರ ವರೆಗೆ ಆದಿತ್ಯ ಬಿಲ್ಡರ್ಸ್, ಪೋಂಡ ಗೋವಾದಲ್ಲಿ ಸೈಟ್ ಇಂಜಿನಿಯರ್ ಆಗಿ ಕೆಲಸ ಮಾಡಿದ್ದಾರೆ.

1994ರ ಮಾರ್ಚ್ 21 ರಂದು ದೆಹಲಿಗೆ ಬಂದು ಕೇಂದ್ರೀಯ ಜಲ ಆಯೋಗ (ಸಿಡಬ್ಲ್ಯುಸಿ) ದಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಶ್ರೀಯುತರು ಸೇರಿಕೊಂಡರು. 04.04.1994 ರಿಂದ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿ, ಸಕ್ರಿಯವಾಗಿದ್ದು, 1996ರಿಂದ 2001ರವರೆಗೆ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. 1998ರಲ್ಲಿ ನಡೆದ ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಡಾ. ರಾಜಕುಮಾರ್ ಸಂಜೆ ಕಾರ್ಯಕ್ರಮದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಡಾ. ರಾಜ್‌ಕುಮಾರ್ ಅವರು ದೆಹಲಿಗೆ ಬಂದಾಗ ಅವರನ್ನು ಸಂಘಕ್ಕೆ ಕರೆ ತರುವ ಜವಾಬ್ದಾರಿಯನ್ನು ಶ್ರೀಯುತರು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿದ್ದು, ಡಾ. ರಾಜ್ ಮೂರು ಬಾರಿ ಸಂಘಕ್ಕೆ ಭೇಟಿ ಮಾಡಿದ ಸಂದರ್ಭದಲ್ಲಿಯೂ ಸಹಾ ಅವರನ್ನು ಸಂಪೂರ್ಣವಾಗಿ ನೋಡಿಕೊಂಡಿದ್ದರು. ಡಾ. ರಾಜ್ ಅವರ ತಮ್ಮ ಬಣ್ಣದ ಬದುಕಿನ 50 ವಸಂತಗಳನ್ನು ಪೂರೈಸಿದ ಸಂದರ್ಭದಲ್ಲಿ ಅವರನ್ನು ದೆಹಲಿ ಕರ್ನಾಟಕ ಸಂಘದ ಪರವಾಗಿ ಅವರ ಬೆಂಗಳೂರಿನ ಸ್ವಗೃಹದಲ್ಲಿ ಅಭಿನಂದಿಸಿದ ತಂಡದಲ್ಲಿ ಪಾಲ್ಗೊಂಡಿದ್ದರು. ದೆಹಲಿಯಲ್ಲಿ ಎತ್ನಿಕ್ ಡೇ ಸೆಲೆಬ್ರೇಷನ್ ಪ್ರಯುಕ್ತ ಅಂದಿನ ಉಪ ರಾಷ್ಟ್ರಪತಿ ಶ್ರೀ ಕೃಷ್ಣಕಾಂತ ಅವರ ಮನೆಯಲ್ಲಿ ಏಪ್ರಿಲ್ 1998ರಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ಜವಾಬ್ದಾರಿ ಹೊತ್ತು ಅದರಿಂದ ತಮಗೆ ಬಂದಂತಹ ಪ್ರೋತ್ಸಾಹ ಧನ 15,000/– ರೂಪಾಯಿಗಳನ್ನು ದೆಹಲಿ ಕರ್ನಾಟಕ ಸಂಘದ ಸಮುಚ್ಚಯಕ್ಕಾಗಿ ಇವರು ನೀಡಿದ್ದು ಶ್ಲಾಘನೀಯ.

ಕೇಂದ್ರೀಯ ಜಲ ಆಯೋಗದಲ್ಲಿ ವಿವಿಧ ಹುದ್ದೆಗಳಲ್ಲಿ ಇವರು ಕಾರ್ಯ ನಿರ್ವಹಿಸಿದ್ದಾರೆ. 1994 ರಿಂದ 2001 ವರೆಗೆ ದೆಹಲಿಯಲ್ಲಿ, 2002 ರಿಂದ 2022 ರವರೆಗೆ ಬೆಂಗಳೂರಿನಲ್ಲಿ ಮತ್ತು ಮೇಘಾಲಯದ ಶಿಲ್ಲಾಂಗ್‌ನಲ್ಲಿ ತದನಂತರ 2022 ರಿಂದ 30.04.2025 ರವರೆಗೆ ದೆಹಲಿಯಲ್ಲಿ ಉಪ ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.



ತಮ್ಮ ಸಿಡಬ್ಲ್ಯುಸಿ ಕಾರ್ಯಾವಧಿಯಲ್ಲಿ ದೇಶದ ಪ್ರಮುಖ ನೀರಾವರಿ ಮತ್ತು ಆಣೆಕಟ್ಟು ಯೋಜನೆಗಳ ಡಿಸೈನ್ ಮತ್ತು ಮಾನಿಟರಿಂಗ್‌ನಲ್ಲಿ ಪ್ರಮುಖ ಯೋಗದಾನ ನೀಡಿದ್ದಾರೆ. ಕರ್ನಾಟಕದ ಕಾರಂಜ, ಕೃಷ್ಣ ಮೇಲ್ದಂಡೆ ಮತ್ತು ಗೋವಾದ ಸಾಲೈಲಿ ಹಾಗು ತಿಲ್ಲಾರಿ ನೀರಾವರಿ ಯೋಜನೆಗಳಿಗೆ ಅನುದಾನ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಮಧ್ಯಪ್ರದೇಶದ ಮಾನ್‌ಡ್ಯಾಂ, ಪಿಲ್ಲೋವಾ, ಕೋಟ್‌ವಾಲ್ ಮತ್ತು ತಿಗರಾ ಮುಂತಾದ ಡ್ಯಾಂ ಯೋಜನೆಗಳ ಡಿಸೈನ್ ಸಹಾ ಇವರು ಮಾಡಿದ್ದಾರೆ.

ದೆಹಲಿಯ ಸ್ವರಾಂಜಲಿ, ದಿನಕರ, ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಕಲ್ಚರಲ್ ಫೌಂಡೇಶನ್‌ನಲ್ಲಿ ಗಣನೀಯ ಪಾತ್ರ ವಹಿಸಿದ್ದು, ನಾಟಕ, ಸಂಗೀತ, ಹಾಡುಗಾರಿಕೆ, ಸಂವಾದಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದಾರೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿಯೂ ಆಜೀವ ಸದಸ್ಯರಾಗಿದ್ದಾರೆ. ಗುಂಡನ ಮದುವೆ, ಶ್ರೀರಂಗಾ ಅವರ ಶೋಕಚಕ್ರ, ದ.ರಾ. ಬೇಂದ್ರೆಯವರ ತಿರುಕರ ಪಿಡುಗು ಮುಂತಾದ ಹಲವಾರು ನಾಟಕಗಳಲ್ಲಿ ಮತ್ತು ಸ್ಕಿಟ್‌ಗಳಲ್ಲಿ ಶ್ರೀ ಹರಿ ಶೇಖರ್ ಅಭಿನಯಿಸಿದ್ದಾರೆ. ಡಾ. ರಾಜ್ ಹಾಡಿರುವ ಹೆಚ್ಚು ಕಡಿಮೆ ಎಲ್ಲಾ ಗೀತೆಗಳನ್ನು ವಿವಿಧ ವೇದಿಕೆಗಳಲ್ಲಿ ಹಾಡಿದ್ದಾರೆ.

ಇವರ ಧರ್ಮಪತ್ನಿ ಶ್ರೀಮತಿ ಛಾಯಾದೇವಿ ಬಿ.ಇ., (ಇಲೆಕ್ಟ್ರೋನಿಕ್ಸ್) ಪದವೀಧರೆ ಮತ್ತು ಒಬ್ಬ ಆದರ್ಶ ಗೃಹಿಣಿಯಾಗಿದ್ದಾರೆ. ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು : ಹಿರಿಯ ಮಗ ಶ್ರೀ ರಾಹುಲ್ ಶ್ರೀಹರಿ ಬೆಂಗಳೂರಿನ ಎಂ.ಎಸ್. ರಾಮಯ್ಯ ಕಾಲೇಜಿನಲ್ಲಿ ಎಂಬಿಎ ಫೈನಾನ್ಸ್ ಫೈನಲ್ ಸೆಮಿಸ್ಟರ್ ವಿದ್ಯಾರ್ಥಿ. ಕಿರಿಯ ಮಗ ಶ್ರೀ ರೋಹಿತ್ ಶ್ರೀಹರಿ– ಎಂ.ಎಸ್ ರಾಮಯ್ಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (MSRIT) ನಿಂದ ಬಿ.ಇ. (ಸಿವಿಲ್) ಪದವಿ ಪಡೆದು ಬಹುರಾಷ್ಟ್ರೀಯ ಕಂಪನಿಯಲ್ಲಿ ಡಿಸೈನರ್ ಆಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ.

ಇದೀಗ ನಿವೃತ್ತರಾಗಿ ತಾಯ್ನಾಡಿಗೆ ಮರಳುತ್ತಿರುವ ಶ್ರೀ ಶ್ರೀಹರಿ ಶೇಖರ್ ಅವರಿಗೆ ಮತ್ತು ಅವರ ಕುಟುಂಬದವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭಾಶಯಗಳು ಮತ್ತು ಅವರ ನಿವೃತ್ತ ಜೀವನಕ್ಕೆ ಶುಭ ಹಾರೈಕೆಗಳು. ದಿನಾಂಕ 25.05.2025 ರಂದು ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಹರಿ ಶೇಖರ್ ಅವರನ್ನು ದೆಹಲಿ ಕರ್ನಾಟಕ ಸಂಘದಿಂದ ಗೌರವಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.



## ಶ್ರೀ ವೆಂಕಟೇಶ್ ಎನ್.ಎನ್.

ದಿನಾಂಕ 20.04.1965 ರಲ್ಲಿ ಕರ್ನಾಟಕ ತಮಿಳುನಾಡು ಗಡಿಭಾಗದಲ್ಲಿ ಜನಿಸಿರುವ ಶ್ರೀಯುತರು ತಮ್ಮ ಪದವಿಪೂರ್ವ ಶಿಕ್ಷಣವನ್ನು ಮುಗಿಸಿದ ನಂತರ 1988ರಲ್ಲಿ ದೆಹಲಿಗೆ ಬಂದು ದೆಹಲಿ ಪೋಲೀಸ್ ಇಲಾಖೆಯಲ್ಲಿ ಸೇವೆಗೆ ಸೇರಿರುತ್ತಾರೆ. ತಮ್ಮ ದೆಹಲಿ ಪೋಲೀಸ್‌ನ ಕಾರ್ಯಾವಧಿಯಲ್ಲಿ ದೆಹಲಿ ಪೋಲೀಸ್ ಮುಖ್ಯಾಲಯ (HQ), ಟ್ರಾಫಿಕ್, ನಾರ್ಥ್‌ವೆಸ್ಟ್ ಡಿಸ್ಟ್ರಿಕ್ಟ್, 1 ನೇ ಮತ್ತು 3 ನೇ ಬೆಟಾಲಿಯನ್ ಹಾಗೂ ಡಿಎಪಿ ಮುಂತಾದ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ.

ಇವರ ಧರ್ಮಪತ್ನಿ ಶ್ರೀಮತಿ ನೀಲಾವತಿ ಒಬ್ಬ ಆದರ್ಶ ಗೃಹಿಣಿ. ಈ ದಂಪತಿಗಳಿಗೆ ಮೂವರು ಮಕ್ಕಳಿದ್ದಾರೆ. ಹಿರಿಯ ಮಗಳು ಶ್ರೀಮತಿ ಕಲಾವತಿ ಬಿಸಿಎ ಪದವೀಧರೆ ಹಾಗು ಇನ್ನೊಬ್ಬ ಮಗಳು ಶ್ರೀಮತಿ ತ್ರಿವೇಣಿ ಎಂ.ಕಾಮ್, ಬಿ.ಎಡ್. ಪದವೀಧರೆ. ಮಗ ಶ್ರೀ ವಿ. ದಿನೇಶ್ ಕುಮಾರ್ ಬಿ.ಎಸ್ಸಿ. ಕಂಪ್ಯೂಟರ್ ಸೈನ್ಸ್ ಪದವೀಧರನಾಗಿದ್ದು ಚೆನ್ನೈನಲ್ಲಿ ಐಟಿ ಕಂಪನಿಯೊಂದರಲ್ಲಿ ವೆಬ್ ಡೆವಲಪರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀಯುತರು 2004 ರಿಂದ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿರುತ್ತಾರೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿಯೂ ಆಜೀವ ಸದಸ್ಯರಾಗಿದ್ದಾರೆ. ದೆಹಲಿ ಪೋಲೀಸ್‌ನಲ್ಲಿ 37 ವರ್ಷ ಸೇವೆ ಸಲ್ಲಿಸಿ ಇದೀಗ ಇನ್ಸ್‌ಪೆಕ್ಟರ್ ಆಗಿ ನಿವೃತ್ತರಾಗುತ್ತಿರುವ ಶ್ರೀ ವೆಂಕಟೇಶ್ ಎನ್.ಎನ್. ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು. ಅವರ ನಿವೃತ್ತ ಜೀವನಕ್ಕೆ ಶುಭವನ್ನು ಕೋರುತ್ತಾ ದಿನಾಂಕ 25.05.2025 ರಂದು ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರ ಕುಟುಂಬದವರೊಂದಿಗೆ ದೆಹಲಿ ಕರ್ನಾಟಕ ಸಂಘದಿಂದ ಅವರನ್ನು ಅಭಿನಂದಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.



## ಶ್ರೀ ಹನುಮಂತರಾಯ





ಮೂಲತಃ ಬೆಂಗಳೂರು ಉತ್ತರ ಜಿಲ್ಲೆಯವರಾದ ಶ್ರೀಯುತರು ಸಾಸಿವೆಗಟ್ಟ ಗ್ರಾಮದಲ್ಲಿ ದಿನಾಂಕ 03.05.1965 ರಲ್ಲಿ ಜನಿಸಿದರು. ತಮ್ಮ ಹೈಸ್ಕೂಲಿನವರೆಗಿನ ವಿದ್ಯಾಭ್ಯಾಸವನ್ನು ಸಾಸಿವೆ ಗಟ್ಟ, ಗೌರಿಬಿದನೂರು ಮತ್ತು ದೊಡಬಳ್ಳಾಪುರದಲ್ಲಿ ಮುಗಿಸಿ, ಪದವಿ ಪೂರ್ವ ಶಿಕ್ಷಣವನ್ನು ಬೆಂಗಳೂರಿನ ಮಲ್ಲೇಶ್ವರಂನ ಸರ್ಕಾರಿ ಕಾಲೇಜಿನಿಂದ ಮತ್ತು ಬಿ.ಎ. ಪದವಿಯನ್ನು ಕೆ.ಆರ್. ಸರ್ಕಲ್ ಬಳಿ ಇರುವ ಸರ್ಕಾರಿ ಕಲಾ ಕಾಲೇಜಿನಿಂದ ಪಡೆದಿರುತ್ತಾರೆ. ದಿನಾಂಕ 02.05.1986 ರಿಂದ ದೆಹಲಿಯಲ್ಲಿ ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆಗೆ ಸೇರಿ ವಿವಿಧ ಭಾಗಗಳಲ್ಲಿ (ಹಲವು ಪೋಲಿಸ್ ಸ್ಟೇಷನ್, ಟ್ರಾಫಿಕ್, ಕ್ರೈಂ ಬ್ರಾಂಚ್ ಮುಂತಾದೆಡೆ) ಕಾರ್ಯ ನಿರ್ವಹಿಸಿರುತ್ತಾರೆ. ಇದೀಗ 39 ವರ್ಷಗಳ ಸೇವೆ ಸಲ್ಲಿಸಿ ಇನ್ಸ್‌ಪೆಕ್ಟರ್ ಆಗಿ ಭಡ್ತಿ ಪಡೆದು ನಿವೃತ್ತರಾಗಿದ್ದಾರೆ.

ಇವರ ಧರ್ಮಪತ್ನಿ ಶ್ರೀಮತಿ ಸುಮನ್ ಬಾಲ, ಇಂಗ್ಲಿಷ್‌ನಲ್ಲಿ ಪಿಜಿ ಟೀಚರ್ ಆಗಿ ನವದೆಹಲಿಯ ಕಲ್ಕಾಜಿಯಲ್ಲಿರುವ ಪಿ.ಯು. ಕಾಲೇಜಿನಲ್ಲಿ ಸೇವೆ ಸಲ್ಲಿಸಿ ಇತ್ತೀಚೆಗೆ ನಿವೃತ್ತರಾಗಿದ್ದಾರೆ. ಇವರಿಗೆ ಮೂವರು ಗಂಡು ಮಕ್ಕಳು : ಡಾ. ಶಶಿಕುಮಾರ್ ಚೈನಾದ ಬೀಜಿಂಗ್‌ನಿಂದ ವೈದ್ಯಕೀಯ ಪದವಿ ಪಡೆದಿದ್ದು, ಸಫ್ದರ್‌ಜಂಗ್ ಆಸ್ಪತ್ರೆಯಲ್ಲಿ ಟ್ರೈನಿಂಗ್ ಪಡೆದು ಲಂಡನ್‌ನಲ್ಲಿ ಹೆಚ್ಚಿನ ಎಂ.ಎಸ್. ವ್ಯಾಸಂಗಕ್ಕಾಗಿ ಸಿದ್ಧತೆ ನಡೆಸಿದ್ದಾರೆ. ಪ್ರಸ್ತುತ ಪಶ್ಚಿಮ ವಿಹಾರದ ಆಕ್ಷನ್ ಬಾಲಾಜಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ರಾಹುಲ್ ಹೋಟೆಲ್ ಮ್ಯಾನೇಜ್‌ಮೆಂಟ್‌ನಲ್ಲಿ ಎಂಬಿಎ ಪದವಿ ಪಡೆದು, ಜರ್ಮನಿಯಲ್ಲಿ ಉದ್ಯೋಗದಲ್ಲಿದ್ದಾರೆ. ಶ್ರೀ ಸನ್ನಿ (ಹನುಮಂತ ಗೌಡ) ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ. ಪದವಿ ಪಡೆದ ನಂತರ ಜರ್ಮನಿಯಿಂದ ಎಂ.ಎಸ್. ಮತ್ತು ಪಿ.ಹೆಚ್.ಡಿ. ಪದವಿ ಗಳಿಸಿ, ಇದೀಗ ಜರ್ಮನಿಯ ವೋಲ್ಸ್‌ವ್ಯಾಗನ್ ಕಂಪನಿಯಲ್ಲಿ ಉದ್ಯೋಗದಲ್ಲಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿಯೂ ಹಾಗು ದೆಹಲಿ ಒಕ್ಕಲಿಗ ಗೌಡ ಸಂಘದ ಸದಸ್ಯರಾಗಿಯೂ ಇರುವ ಶ್ರೀಯುತರು ಸಕ್ರಿಯವಾಗಿ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.

ದೆಹಲಿ ಪೋಲಿಸ್ ಸೇವೆಯಿಂದ ನಿವೃತ್ತರಾಗಿ ತಾಯ್ನಾಡಿಗೆ ತೆರಳುತ್ತಿರುವ ಶ್ರೀ ಹನುಮಂತರಾಯ ಅವರಿಗೆ ಮತ್ತು ಕುಟುಂಬದವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭಾಶಯಗಳು ಮತ್ತು ಅಭಿನಂದನೆಗಳು. ಅವರ ನಿವೃತ್ತ ಜೀವನಕ್ಕೆ ಶುಭ ಹಾರೈಕೆಗಳೊಂದಿಗೆ ದಿನಾಂಕ 25.05.2025 ರಂದು ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಹನುಮಂತರಾಯ ಅವರನ್ನು ಕುಟುಂಬದವರೊಂದಿಗೆ ದೆಹಲಿ ಕರ್ನಾಟಕ ಸಂಘದಿಂದ ಅಭಿನಂದಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

## ಶ್ರೀ ಸುಬ್ರಮಣ್ಯ ಪಿ.ಎಂ.





ಮೂಲತಃ ಕೊಡಗು ಜಿಲ್ಲೆಯ ಶ್ರೀ ಸುಬ್ರಮಣ್ಯ ಪಿ.ಎಂ. ಅವರು ಮಡಿಕೇರಿ ಸಮೀಪವಿರುವ ದೇಸೂರು ಗ್ರಾಮದಲ್ಲಿ ದಿನಾಂಕ 20.05.1965 ರಲ್ಲಿ ಜನಿಸಿದರು. ಇವರ ತಂದೆ ಶಾಲಾ ಶಿಕ್ಷಕರಾಗಿದ್ದರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮದೇನಾಡಿನಲ್ಲಿ ಪಡೆದ ನಂತರ ಮಡಿಕೇರಿಯಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿ, ಅಲ್ಲಿನ ಕಾಲೇಜಿನಿಂದ ಬಿ.ಎ. (ಆರ್ಟ್ಸ್) ಪದವಿಯನ್ನು ಪಡೆದರು.

1987ರಲ್ಲಿ ದೆಹಲಿಗೆ ಬಂದು ದೆಹಲಿ ಪೋಲಿಸ್‌ನಲ್ಲಿ ಸೇವೆಗೆ ಶ್ರೀಯುತರು ಸೇರಿದರು. ತಮ್ಮ ದೆಹಲಿ ಪೋಲಿಸ್ ಇಲಾಖೆಯಲ್ಲಿ ಸತತ 38 ವರ್ಷಗಳ ಕಾರ್ಯಾವಧಿಯಲ್ಲಿ ದೆಹಲಿಯ ಸೆಂಟ್ರಲ್, ನಾರ್ಥ್, ನ್ಯೂಡೆಲ್ಲಿ ಮುಂತಾದ ಜಿಲ್ಲೆಗಳಲ್ಲಿ, ದೆಹಲಿ ಮುಖ್ಯಮಂತ್ರಿಗಳ ಭದ್ರತಾ ಪಡೆಯಲ್ಲಿ (3 ವರ್ಷ), ಪಿ.ಎಮ್.ಓ. ಹೌಸ್‌ನಲ್ಲಿ (ನಾಲ್ಕು ವರ್ಷ) ಹೀಗೆ ಹಲವಾರು ವಿಭಾಗಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ.

ಇವರು 1998 ರಿಂದ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿ ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಹಾಗೆಯೇ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ದೆಹಲಿ ಒಕ್ಕಲಿಗ ಗೌಡ ಸಂಘ ಮತ್ತು ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಗಳಲ್ಲಿಯೂ ಸದಸ್ಯರಾಗಿದ್ದಾರೆ.

ಶ್ರೀ ಸುಬ್ರಮಣ್ಯ ಪಿ.ಎಂ. ಅವರ ಧರ್ಮಪತ್ನಿ ಶ್ರೀಮತಿ ಲತಾ ಅವರು ಬಿ.ಕಾಂ. ಪದವೀಧರೆಯಾಗಿದ್ದು 23 ವರ್ಷಗಳ ಕಾಲ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು. ಮೊದಲ ಮಗ ಶ್ರೀ ಅರ್ಜುನ್ ದೆಹಲಿ ಮತ್ತು ಬೆಂಗಳೂರಿನಲ್ಲಿ ವ್ಯಾಸಂಗ ಮಾಡಿ ಬಿ.ಎಸ್ಸಿ. ಪದವಿ ಪಡೆದು ಈಗ ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದಾರೆ. ಎರಡನೇಯ ಮಗ ಶ್ರೀ ಶಶಾಂಕ ದೆಹಲಿ ಕನ್ನಡ ಶಾಲೆಯಲ್ಲಿ ಓದಿದ್ದು, ನಂತರ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿ ಬಿಜಾಪುರದ ಇಂಜಿನಿಯರಿಂಗ್ ಕಾಲೇಜಿನಿಂದ ಬಿ.ಆರ್ಕ್ ಪದವಿ ಪಡೆದಿರುತ್ತಾರೆ. ನಂತರ ಕೆನಡಾದಲ್ಲಿ ಆರ್ಕಿಟೆಕ್ಚರ್‌ನಲ್ಲಿ ಮಾಸ್ಟರ್ಸ್ ಪದವಿ ಗಳಿಸಿ ಅಲ್ಲಿಯೇ ಉದ್ಯೋಗದಲ್ಲಿದ್ದಾರೆ.

ದೆಹಲಿ ಪೋಲಿಸ್‌ನಲ್ಲಿ ಸುದೀರ್ಘ 38 ವರ್ಷಗಳ ಕಾಲ ಸಲ್ಲಿಸಿದ ಸೇವೆಯ ನಂತರ ನಿವೃತ್ತರಾಗಿ ತಾಯ್ನಾಡಿಗೆ ತೆರಳುತ್ತಿರುವ ಶ್ರೀ ಸುಬ್ರಮಣ್ಯ ಪಿ.ಎಂ. ಅವರಿಗೆ ಮತ್ತು ಅವರ ಕುಟುಂಬದವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭ ಹಾರೈಕೆಗಳು. ದಿನಾಂಕ 25.05.2025 ರಂದು ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಸುಬ್ರಮಣ್ಯ ಪಿ.ಎಂ. ಅವರನ್ನು ದೆಹಲಿ ಕನ್ನಡಿಗರ ಸಮ್ಮುಖದಲ್ಲಿ ದೆಹಲಿ ಕರ್ನಾಟಕ ಸಂಘದಿಂದ ಗೌರವಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

# ಅಂತರರಾಷ್ಟ್ರೀಯ ಯೋಗ ದಿವಸ ಮತ್ತು ಕನ್ನಡಿಗರ ಕೊಡುಗೆ

ವಿಶ್ವಕ್ಕೆ ಭಾರತೀಯರು ನೀಡಿದ ಅನೇಕ ಮಹತ್ವದ ಕೊಡುಗೆಗಳಲ್ಲಿ ಯೋಗವು ಬಹಳ ಪ್ರಮುಖವಾದುದು. ಪುರಾತನ ಭಾರತೀಯ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕತೆಯ ಶ್ರೇಷ್ಠ ಪರಂಪರೆಯಾಗಿ ಗುರುತಿಸಲ್ಪಟ್ಟಿರುವ ಯೋಗವು ಇಂದು ವಿಶ್ವಮಾನ್ಯ. ಸುಮಾರು 4700 ವರ್ಷಗಳಿಗಿಂತ ಹೆಚ್ಚು ಇತಿಹಾಸ ಹೊಂದಿರುವ ಯೋಗ ಪರಂಪರೆಯು ಭಾರತೀಯರ ಆರೋಗ್ಯಕರ ಜೀವನಶೈಲಿ ಮತ್ತು ಸಾಮೂಹಿಕ ಸಹಜೀವನದ ಪ್ರತೀಕವಾಗಿದೆ. ಕಾಲಕ್ಕೆ ಮತ್ತು ದೇಶಕ್ಕೆ (Time and Space) ತಕ್ಕಂತೆ ಯೋಗ ಪರಂಪರೆಗಳಲ್ಲಿ ಆದ ಆವಿಷ್ಕಾರ, ಪುನರುತ್ಥಾನ ಮತ್ತು ಪ್ರಾಯೋಗಿತೆಗಳು ಅದನ್ನು ಜೀವಂತವಾಗಿರಿಸಿದ್ದಲ್ಲದೇ, ಆಧುನಿಕ ಯುಗದಲ್ಲಿಯೂ ಸಹ ಜೀವನ ಶೈಲಿಗೆ, ಒತ್ತಡ ಮತ್ತು ಮಾನಸಿಕ ಖಿನ್ನತೆಗಳಿಗೆ ಸಂಬಂಧಿಸಿದ ಅನೇಕ Non-Communicable Disease ಗಳಿಗೆ ಯೋಗ ಚಿಕಿತ್ಸೆಯ ಅತ್ಯಂತ ಪರಿಣಾಮಕಾರಿಯಾದ ಚಿಕಿತ್ಸೆಯಾಗಿ, ದೇಹ–ಮನಸ್ಸುಗಳಿಗೆ (Mind-Body Medicine) ಔಷಧಿಯಾಗಿ ಗುರುತಿಸಲ್ಪಡುತ್ತಿದೆ. ಭಾರತೀಯರ ಪಾರಂಪರಿತ ಚಿಕಿತ್ಸೆಗಳಾದ ಯೋಗ ಮತ್ತು ಆಯುರ್ವೇದಗಳು ಕ್ರಮೇಣವಾಗಿ ವಿಶ್ವವ್ಯಾಪ್ತಿಯಾಗುತ್ತಿರುವುದು ಅವುಗಳ ಮೂಲ ಸಿದ್ಧಾಂತಗಳ ವಿಸ್ತಾರವಾದ ಮತ್ತು ಗಟ್ಟಿ ತಳಹದಿಗಳನ್ನು ಬಿಂಬಿಸುತ್ತಿವೆ.

ಆಧುನಿಕ ಜಗತ್ತಿನಲ್ಲಿ, ಸ್ವಾಮಿ ವಿವೇಕಾನಂದರ ಚಿಕಾಗೋದ ಶ್ರೇಷ್ಠ ಭಾಷಣದ ನಂತರದ ದಿನಗಳಲ್ಲಿ ಸನಾತನ ಮತ್ತು ಭಾರತೀಯ ಧರ್ಮ ಪರಂಪರೆಗಳ ಆಧ್ಯಾತ್ಮಿಕ ಚಿಂತನೆಗಳ ಬಗೆಗಿನ ಜಿಜ್ಞಾಸೆಯನ್ನು ತನಿಸಲು ಅನೇಕ ಯೋಗಿಗಳು ವಿಶ್ವದಾದ್ಯಂತ ಸಂಚರಿಸಿ ಯೋಗ ಮತ್ತು ಆಧ್ಯಾತ್ಮಿಕ ಪರಂಪರೆಗಳ ಪ್ರಚಾರ ಮತ್ತು ಪ್ರಸಾರಗಳ ಜೊತೆಗೆ ಯೋಗದಿಂದ ಆರೋಗ್ಯ ಭಾಗ್ಯ ಹಾಗೂ ಆಧುನಿಕ ಜೀವನ ಶೈಲಿಗೆ ಸಂಬಂಧಿಸಿದ ಅನೇಕ ಕಾಯಿಲೆಗಳಿಗೆ ಉಪಶಮನ ನೀಡುವಲ್ಲಿ ಯಶಸ್ವಿಯಾಗಿರುವುದು ಇಂದು ಅದಕ್ಕೆ ವಿಶ್ವಮಾನ್ಯತೆ ದೊರಕಿಸುವಲ್ಲಿ ಪ್ರಮುಖವಾಗಿವೆ.

ಈ ಎಲ್ಲ ಹಿನ್ನೆಲೆಗಳಲ್ಲಿ 27 ಸೆಪ್ಟೆಂಬರ್, 2014ರಂದು ಭಾರತದ ಸನ್ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತ ಒಂದು ಅಂತರರಾಷ್ಟ್ರೀಯ ಯೋಗ ದಿವಸದ ಆಚರಣೆಗೆ ಕರೆಕೊಟ್ಟಾಗ 193 ದೇಶಗಳಲ್ಲಿ 177 ದೇಶಗಳ ಸಹಮತಿಯೊಂದಿಗೆ ಕೇವಲ 77 ದಿವಸಗಳಲ್ಲಿ ಅವಿರೋಧವಾಗಿ ಪ್ರಸ್ತಾವನೆ ಸ್ವೀಕಾರವಾಗಿದ್ದು ಯೋಗದ ವಿಶ್ವಮಾನ್ಯತೆ ಮತ್ತು ಭಾರತೀಯರ ಸಂಪರ್ಕ ಪ್ರಾವಿಣ್ಯತೆಗಳ ದ್ಯೋತಕವಾಗಿದೆ. ಕಳೆದ ಒಂದು ದಶಕಕ್ಕೂ ಹೆಚ್ಚಿನ ಅವಧಿಯಲ್ಲಿ ಅದರ ವ್ಯಾಪ್ತಿ ಮತ್ತು ಮಾನ್ಯತೆಗಳಲ್ಲಿ Exponential ಬೆಳವಣಿಗೆಯನ್ನು ಕಾಣಬಹುದು. ಈ ಸಾರಿಯ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ 30 ಕೋಟಿಗೂ ಅಧಿಕ ಜನರು ಪಾಲ್ಗೊಂಡು ಸಾಮಾನ್ಯ ಯೋಗ ಅಭ್ಯಾಸ ಕ್ರಮವನ್ನು ಅಭ್ಯಸಿಸಿರುವುದು ಅದರ ಜನಪ್ರಿಯತೆಗೆ ಸಾಕ್ಷಿ. ವಿಶ್ವದಾದ್ಯಂತ ನಿರೂಪಿತವಾಗುತ್ತಿರುವ ಅನೇಕ ಆರೋಗ್ಯ ಮತ್ತು ಕಲ್ಯಾಣ module ಗಳಲ್ಲಿ Common Yoga Protocol (CYP) ವಿಶ್ವದ ಅತ್ಯಂತ ದೊಡ್ಡ ವೆಚ್ಚವಿಲ್ಲದ ಕಲ್ಯಾಣ ಕಾರ್ಯಕ್ರಮವಾಗಿದ್ದು ಅದು ನಮ್ಮ ಭಾರತೀಯರ ಸಾಂಸ್ಕೃತಿಕ ಪರಂಪರೆಯಾಗಿರುವುದು ತುಂಬ ಅಭಿಮಾನದ ಸಂಗತಿ.



14ನೇ ಡಿಸೆಂಬರ್ 2014 ರಂದು ವಿಶ್ವಸಂಸ್ಥೆಯು ಜೂನ್ 21ನ್ನು ಅಂತರರಾಷ್ಟ್ರೀಯ ಯೋಗ ದಿನವನ್ನಾಗಿ (IDY) ಘೋಷಿಸಿದಾಗಿನಿಂದ ಅದರ ಆಚರಣೆಯ ರೂಪರೇಷೆಗಳನ್ನು ರೂಪಿಸಲು ಆಯುಷ್ ಮಂತ್ರಾಲಯದ ಕಾರ್ಯದರ್ಶಿಗಳು ಕನ್ನಡಿಗರಾದ ಡಾ. ಎಚ್.ಆರ್. ನಾಗೇಂದ್ರ ಅವರ ಅಧ್ಯಕ್ಷತೆಯಲ್ಲಿ 5 ಸದಸ್ಯರ ಒಂದು ಚಿಕ್ಕ ಕಮಿಟಿಯನ್ನು ರಚಿಸಿದರು. ಕಮಿಟಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯಕ್ರಮಗಳ ರೂಪರೇಷೆಗಳನ್ನು ರೂಪಿಸುವ ಗುರುತರ ಜವಾಬ್ದಾರಿಯನ್ನು ನಿಭಾಯಿಸುವ ಭಾಗ್ಯ ನನ್ನದಾಗಿತ್ತು.

ಈ ಅನೇಕ ಕಾರ್ಯಕ್ರಮಗಳ ಪಟ್ಟಿಯಲ್ಲಿ ಬಹಳ ಪ್ರಮುಖ ಮತ್ತು ಇಂದಿಗೂ IDY ಆಚರಣೆಯ ಪ್ರಮುಖ ಹೆಗ್ಗುರುತುಗಳಾಗಿರುವುದು, ಒಂದು ಸಾಮಾನ್ಯ ಯೋಗ ಅಭ್ಯಾಸ ಕ್ರಮ (45 ನಿಮಿಷಗಳು) (CYP) ಮತ್ತು ಎರಡನೇಯದು ಸಾವಿರಾರು ಜನರು ಒಂದೆಡೆ ಸೇರಿ ಸಾಮೂಹಿಕವಾಗಿ ಈ CYP ಯನ್ನು ಅಭ್ಯಸಿಸುವುದು, ಯೋಗವನ್ನು ಒಂದು ಸಾಧನೆಯಾಗಿ ಬಿಂಬಿಸುವಲ್ಲಿ ಯಶಸ್ವಿಯಾಗಿದೆ. ಅನೇಕ ವರ್ಷಗಳ ಇತಿಹಾಸ, ವೈವಿಧ್ಯಮಯ ಯೋಗ ಪರಂಪರೆಗಳು, ಸಾಧನಾಮಾರ್ಗಗಳು, ಒಮ್ಮತವಿಲ್ಲದ ಯೋಗ ಅಭ್ಯಾಸ ಕ್ರಮಗಳು, ಯೋಗ ಗುರುಗಳ ಸ್ವಾಭಿಮಾನ ಮತ್ತು ಪ್ರತಿಷ್ಠೆ ಈ ಎಲ್ಲ ಗೊಂದಲಗಳ ನಡುವೆ ಕೇವಲ ಮೂರು ತಿಂಗಳುಗಳಲ್ಲಿ 45 ನಿಮಿಷಗಳ ಸಾಮಾನ್ಯ ಯೋಗ ಅಭ್ಯಾಸ (CYP) ಕ್ರಮ ರೂಪಿತವಾಗಿದ್ದೇ ಒಂದು ರೋಚಕ ಗಾಥೆ. ಅದರ ಮೊದಲ ಕೈಪಿಡಿ ಮತ್ತು ವೀಡಿಯೋ ತಯಾರಿಸುವ ಗುರುತರ ಜವಾಬ್ದಾರಿಯನ್ನು ನನಗೆ ನೀಡಲಾಗಿತ್ತು. ಮಾನ್ಯ ಪ್ರಧಾನಮಂತ್ರಿಗಳಿಂದ ಹಿಡಿದು ಕೋಟ್ಯಾಂತರ ಯೋಗ ಸಾಧಕರ ಪ್ರಶಂಸೆಗೆ ಈ ಯೋಗ ಕೈಪಿಡಿ ಮತ್ತು ವೀಡಿಯೋ ಚಿತ್ರಗಳು ಪಾತ್ರವಾಗಿರುವುದು ನನ್ನ ಸೌಭಾಗ್ಯ. ಅದಕ್ಕೆ ಪ್ರಮುಖ ಕಾರಣವಾಗಿದ್ದು ಬಾಲ್ಯದಿಂದಲೂ ನನಗೆ ಪ್ರೇರಣೆ ನೀಡಿದ ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ನನ್ನ ಯೋಗ ಗುರುಗಳು ನೀಡಿದ ಯೋಗ ಶಿಕ್ಷಣವೇ ಕಾರಣವೆಂಬುದು ಅಕ್ಷರಶಃ ಸತ್ಯ.

ಯೋಗದ ವೈಶ್ವಿಕ ಪರಂಪರೆಯಲ್ಲಿ ಕನ್ನಡಿಗರ ಕೊಡುಗೆ ಅಪಾರವಾದುದು ಎಂದು ಹೇಳಲು ಕನ್ನಡಿಗನಾದ ನನಗೆ ಹೆಮ್ಮೆ ಮತ್ತು ಅಭಿಮಾನ. ಆದಿ ಕಾಲದಿಂದ ಇಂದಿನವರೆಗಿನ ಕನ್ನಡಿಗ ಯೋಗಿಗಳ ಸಾಧನೆ ಮತ್ತು ಕೊಡುಗೆಗಳನ್ನು ಬಿಂಬಿಸಲು ಗ್ರಂಥಗಳೇ ಬೇಕಾದಾವು. ಆದರೆ ಕಳೆದ ಒಂದು ಶತಮಾನದಲ್ಲಿ ವಿಶ್ವಮಾನ್ಯತೆ ಪಡೆದ ಯೋಗಾಚಾರ್ಯರಲ್ಲಿ ಕನ್ನಡಿಗರೇ ಬಹುಪಾಲು ಎಂಬ ಸಂಗತಿಯನ್ನು ತಿಳಿದು ತಾವೆಲ್ಲ ಹೆಮ್ಮೆ ಪಡುತ್ತೀರಿ. ಮೊದಲಿಗೆ ಮೈಸೂರಿನ ಮಹಾರಾಜರ ಭವ್ಯ ಪರಂಪರೆಯಲ್ಲಿ ಯೋಗಿಗಳಾಗಿಯೇ ಗುರುತಿಸಲ್ಪಡುವ ನಾಲ್ವಡಿ ಕೃಷ್ಣರಾಜ ಒಡೆಯರು ಯೋಗ ಮತ್ತು ವಿಶ್ವಮಾನ್ಯ ಯೋಗಿಗಳನ್ನು ಪೋಷಿಸಿ, ಬೆಳೆಸಿದ ಕೀರ್ತಿ ಪಾತ್ರರು. ಅವರ ಯೋಗ ಕೊಡುಗೆಗಳ ಬಗೆಗೆ ಒಂದು ವಿಸ್ತೃತ ಲೇಖನ ಬರೆಯುವೆ. ಅವರ ಆಸ್ಥಾನದಲ್ಲಿಯೇ ಬೆಳೆದ ಆಧುನಿಕ ಯೋಗದ ಪಿತಾಮಹರೆಂದೇ ಗುರುತಿಸಲ್ಪಡುವ ತಿರುಮಲೈ ಕೃಷ್ಣಮಾಚಾರ್ಯರು ಕನ್ನಡಿಗರು. ಅವರ ಶಿಷ್ಯಂದಿರರಾದ, ವಿಶ್ವಮಾನ್ಯ ಯೋಗಾಚಾರ್ಯ ಪದ್ಮವಿಭೂಷಣ ಬಿ.ಕೆ.ಎಸ್. ಅಯ್ಯಂಗಾರ್, ಪಟ್ಟಾಭಿ ಜೋಯಿಷ, ಟಿ.ಕೆ.ವಿ. ದೇಸಿಕಾಚಾರ್ಯ, ಇಂದ್ರಾದೇವಿ ಎಲ್ಲರೂ ವಿಶ್ವಯೋಗ ಗುರುಗಳೇ ಮತ್ತು ಕನ್ನಡಿಗರು. ತಿರುಕರೆಂದೇ ಪ್ರಸಿದ್ಧವಾಗಿರುವ ಮಲ್ಲಾಡಿಹಳ್ಳಿಯ ಶ್ರೀ ರಾಘವೇಂದ್ರ ಸ್ವಾಮಿಗಳು, ಅವರ ಪರಂಪರೆಯಲ್ಲಿ ಗುರುತಿಸುವ ಸದ್ಗುರು ಜಗ್ಗೀ ವಾಸುದೇವರು, ಮಹರ್ಷಿ ಮಹೇಶ ಯೋಗಿಗಳ ಪರಂಪರೆಯಲ್ಲಿ ಅರಳಿದ ಶ್ರೀ ಶ್ರೀ ರವಿಶಂಕರ ಗುರೂಜಿಯವರು, ಸ್ವಾಮಿ ವಿವೇಕಾನಂದ ಯೋಗ ವಿಶ್ವವಿದ್ಯಾಲಯದ ರೂವಾರಿಗಳಾದ ಡಾ. ಎಚ್.ಆರ್. ನಾಗೇಂದ್ರ ಮತ್ತು ಡಾ. ಆರ್. ನಾಗರತ್ನ ಸಹ ಕನ್ನಡಿರು. ನನ್ನ ಪೂಜ್ಯ ಗುರುಗಳಾದ ಪ್ರೊ. ಲಕ್ಷ್ಮಣಕುಮಾರರು, ಪಟ್ಟಾಭಿಯವರ ಮಗ ಶರತ್ ಜೊಯಿಷ್, ಧಾರವಾಡ ತಪೋವನದ ಕುಮಾರ ಸ್ವಾಮಿಗಳು, ಕೋಲಾರದ ಶಿವರುದ್ರ ಬಾಲಯೋಗಿ ಮಹಾರಾಜ, ಬಿ.ಕೆ.ಎಸ್. ಅಯ್ಯಂಗಾರ ಪರಂಪರೆಯ ಗೀತಾ ಅಯ್ಯಂಗಾರ, ಪ್ರಶಾಂತ ಅಯ್ಯಂಗಾರ ಈ ಎಲ್ಲರೂ ವಿಶ್ವಮಾನ್ಯತೆ ಪಡೆದ ಕನ್ನಡಿಗ ಯೋಗಾಚಾರ್ಯರು.

ನಡೆದಾಡುವ ದೇವರೆಂದೇ ಪ್ರಖ್ಯಾತಿ ಪಡೆದ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು, ಶ್ರೀ ಸಿದ್ಧಾರೂಢರು, ಶ್ರೀ ವಿಶ್ವೇಶ ತೀರ್ಥರು, ಶ್ರೀ ಶಿವಕುಮಾರ ಸ್ವಾಮೀಜಿ, ಜಗದ್ಗುರು ಶ್ರೀ ಡಾ. ಬಾಲಗಂಗಾಧರನಾಥ ಸ್ವಾಮೀಜಿ, ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರು, ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳು ಹೀಗೆ ನೂರಾರು ಆಧ್ಯಾತ್ಮ ಸಾಧಕರು, ಯೋಗಿಗಳು ಈ ಶತಮಾನದಲ್ಲಿ ತಮ್ಮ ಸಾಧನೆಯ ಬೆಳಕಿನಿಂದ ಕೋಟ್ಯಾಂತರ ಜನರ ಮನೆ ಮತ್ತು ಮನಗಳನ್ನು ಬೆಳಗಿದ್ದಾರೆ.

ಕೇಂದ್ರ ಸರ್ಕಾರದ ಯೋಗ ಮತ್ತು ಪ್ರಾಕೃತಿಕ ಚಿಕಿತ್ಸೆಯ ಪ್ರಮುಖ ಸಂಸ್ಥೆಗಳ ನಿರ್ದೇಶಕರುಗಳಾಗಿ ಕಳೆದ ಸುಮಾರು 25 ವರ್ಷಗಳಿಂದ ಹಿರಿಯ ಅಧಿಕಾರಿಗಳಾಗಿ ಯೋಗ ಮತ್ತು ಪ್ರಾಕೃತಿಕ ಚಿಕಿತ್ಸೆಗಳ ನೀತಿ ನಿರೂಪಕರುಗಳಾಗಿ ಸೇವೆ ಸಲ್ಲಿಸಿದ ಮತ್ತು ಸಲ್ಲಿಸುತ್ತಿರುವವರೂ ಸಹ ಕನ್ನಡಿಗರೇ. ದಶಕಕ್ಕೂ ಹೆಚ್ಚು ಕಾಲ ಕೇಂದ್ರ ಯೋಗ ಮತ್ತು ಪ್ರಾಕೃತಿಕ ಚಿಕಿತ್ಸಾ ಅನುಸಂಧಾನ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ. ಬಿ.ಟಿ. ಚಿದಾನಂದ ಮೂರ್ತಿಯವರು ಸುಮಾರು 4 ವರ್ಷಗಳ ಕಾಲ ನಿರ್ದೇಶಕರಾಗಿದ್ದ ಡಾ. ಈಶ್ವರ ಆಚಾರ್ಯರು, ಈಗಿನ ನಿರ್ದೇಶಕರಾದ ಡಾ. ರಾಘವೇಂದ್ರ ರಾವ್ ಅವರು ಎಲ್ಲಾ ಕನ್ನಡಿಗರೆ. 18 ವರ್ಷಗಳಿಗಿಂತ ಹೆಚ್ಚು ಕಾಲ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ, ನವದೆಹಲಿಯ ನಿರ್ದೇಶಕರಾಗಿದ್ದ ಡಾ. ಈಶ್ವರ ವೀ. ಬಸವರಡ್ಡಿಯವರು, ಈಗಿನ ನಿರ್ದೇಶಕರಾದ ಡಾ. ಕಾಶೀನಾಥ ಸಮಗಂಡಿಯವರು ಸಹ ಕನ್ನಡಿಗರೇ. ಈ ಎಲ್ಲರೂ ಯೋಗವನ್ನು ಜನರ ಮನ ಮತ್ತು ಮನೆಗಳಿಗೆ ತಲುಪಿಸುವಲ್ಲಿ ತಮ್ಮ ಅಳಿಲು ಸೇವೆಯನ್ನು ಸಲ್ಲಿಸಿದ್ದಾರೆ. ಒಂದು ವಿಪರ್ಯಾಸವೆಂದರೆ ವಿಶ್ವಮಾನ್ಯತೆ ಪಡೆದ ಮತ್ತು ಎಲೆಯ ಮರೆಯ ಕಾಯಿಯಂತೆ ಅನಂತ ಕೊಡುಗೆಗಳನ್ನು ನೀಡಿ ಜನರ ಹೃನ್ಮನಗಳನ್ನು ಬೆಳಗಿದ ಈ ದೀಪಗಳು ಕನ್ನಡಿಗರಿಗಿಂತ ಮತ್ತು ಕರ್ನಾಟಕಕ್ಕಿಂತ ಕರ್ನಾಟಕದ ಹೊರಗೆ, ಹೊರರಾಜ್ಯದವರಿಂದ ಗುರುತಿಸಲ್ಪಟ್ಟು ಗೌರವ ಸಂಪಾದಿಸಿದ್ದು ಆಶ್ಚರ್ಯವಾದರೂ ಸತ್ಯ. "ಹಿತ್ತಲ ಗಿಡ ಮದ್ದಲ್ಲ" ಎಂಬ ನಾಣ್ಣುಡಿ ಸತ್ಯವಲ್ಲವೇ.❑

**ಡಾ. ಈಶ್ವರ ವೀ. ಬಸವರಡ್ಡಿ**
**ಪಿಎಚ್‌ಡಿ**
**ನಿರ್ದೇಶಕರು ಮತ್ತು ಪ್ರಾಧ್ಯಾಪಕರು**
**ಸಿವೈವಿಐಎಂ, ಎಂ.ಜಿ.ಎಂ.ಟಿ.**
**ವಿವಿ, ಜೈಪುರ, ರಾಜಸ್ಥಾನ**



# ಶ್ರೀ ಎಸ್.ಕೆ. ಕುಲಕರ್ಣಿ

"ಭಟ್ರೇ, ಅಭಿನಂದನೆಗಳು. ನಿಮ್ಮ ತಲೆನೋವು ದೂರವಾಗಿದೆ. ನೀವು ಈಗಾಗಲೇ ಮನೆ ಕಟ್ಟಿಕೊಂಡು ಅಲ್ಲಿ ವಾಸ ಆಗಿರೋದ್ರಿಂದ, ನೀವು ಮತ್ತು ನಿಮ್ಮಂತಹ ಸಾವಿರಾರು ಜನರು, ಕೇವಲ ಅಭಿವೃದ್ಧಿ ಶುಲ್ಕ ಪಾವತಿಸಿ ಬಿಡಿಎ–ಯ ಶಿವರಾಮ ಕಾರಂತ ಲೇ ಔಟ್‌ನ ಭಾಗವಾಗಬಹುದು" ಎಂಬ ಭಾವ ತುಂಬಿದ ದನಿ ನನಗೆ ಆಗ ಬಹಳ ಖುಷಿ ಕೊಟ್ಟಿತ್ತು. ಸುಪ್ರೀಂ ಕೋರ್ಟಿನ ಸಫಲ ನ್ಯಾಯವಾದಿಗಳಾದ, ಹಿರಿಯ ಕನ್ನಡಿಗ, ಎಸ್.ಕೆ. ಕುಲಕರ್ಣಿಯವರ ಧ್ವನಿ ಅದಾಗಿತ್ತು. ಆ ದನಿಯಲ್ಲಿ, ಸದಾಶಯದ ಸೆಲೆಯಿತ್ತು. ನ್ಯಾಯ ಪ್ರತಿಪಾದನೆಯ ಅಚಲತೆಯಿತ್ತು. ಬೆಂಗಳೂರಿನ ಬಿಡಿಎ–ಯ ನ್ಯಾಯವಾದಿಗಳಾಗಿ ಸುಪ್ರೀಂ ಕೋರ್ಟಿನಲ್ಲಿ ಬಲವಾದ ನ್ಯಾಯ ಮಂಡಿಸಿದ ಶ್ರೀ ಎಸ್.ಕೆ. ಕುಲಕರ್ಣಿಯವರು, ಡಾ. ಶಿವರಾಮ ಕಾರಂತ ಲೇಔಟ್‌ನ ಭೂ ಸ್ವಾಧೀನ ಪ್ರಕರಣಕ್ಕೆ ಸಂಬಂಧಿಸಿದಂತೆ, ಬಲವಾದ ವಾದ ಮಂಡಿಸಿ, ಬಿಡಿಎಯ ಮಟ್ಟಿಗೆ ಅಸಾಧ್ಯವಾದುದನ್ನೇ ಸಾಧಿಸಿದ್ದರು. ಆ ದಿನಗಳಲ್ಲಿ ಡಾ. ಶಿವರಾಮ ಕಾರಂತ ಲೇಔಟ್ ಕುರಿತ ಪ್ರಕರಣ ಕರ್ನಾಟಕದಲ್ಲೇ ಸಂಚಲನ ಮೂಡಿಸಿತ್ತು. ಕೊನೆಗೂ, ಭೂ ಸ್ವಾಧೀನ ಪ್ರಕ್ರಿಯೆಯ ವಿಳಂಬದಿಂದಾಗಿ, ಸ್ವಾಧೀನ ಕೈಬಿಟ್ಟ ಅವಧಿಯಲ್ಲಿ, ಜನ ಸಾಮಾನ್ಯರು ಕಟ್ಟಿದ ಮನೆಗಳಿಗೆ ತೊಂದರೆ ಆಗಬಾರದು ಎನ್ನುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟಿನ ತೀರ್ಪು ಬಂದ ತಕ್ಷಣ ನನಗೆ ದೂರವಾಣಿ ಮೂಲಕ ತಿಳಿಸಿದ ಸಂತಸದ ಸುದ್ದಿ ಅದಾಗಿತ್ತು. ನ್ಯಾಯ ನಮ್ಮ ಪರವಾಗಿದ್ದರೂ, ಸರಕಾರದ ನಿಲುವುಗಳು, ಮಾಹಿತಿಗಳು ಸರಿಯಾಗಿ ತಲುಪದೇ ಇದ್ದಾಗ, ಕೆಲವೊಮ್ಮೆ ಗೃಹ ನಿರ್ಮಾಣಕ್ಕಿಂತ ಗ್ರಹಚಾರ ನಿರ್ಮಾಣವಾಗುವ ಸಂದರ್ಭಗಳನ್ನು ಎದುರಿಸಿ, ಗೊಂದಲದ ನಿವಾರಣೆಗೆ ಪಾಡು ಪಟ್ಟ ಜನರೆಷ್ಟಿಲ್ಲ! ಅಂತಹುದರಲ್ಲಿ, ನಿರಾಳವಾಗಿ, ಸಮಸ್ಯೆಯೊಂದು ಮನೆಬಾಗಿಲನ್ನು ತಲಪುವ ಮುಂಚೆಯೇ ಮಾಯವಾದಾಗ ಆಗುವ ಆನಂದ ಹೇಳತೀರದು.

ಕರ್ನಾಟಕದ ಅಂದಿನ ಬಿಜಾಪುರ ಜಿಲ್ಲೆಯ ಬೀಳಗಿಯಲ್ಲಿ ಜನಿಸಿದ ಶ್ರೀ ಎಸ್.ಕೆ. ಕುಲಕರ್ಣಿಯವರು ಬಿ.ಎ. ಆನರ್ಸ್ ಪದವಿ ಪಡೆದು ಕಾನೂನು ಪದವಿ ಗಳಿಸಿ ಧಾರವಾಡದ ಯುನಿವರ್ಸಿಟಿ ಕಾಲೇಜಿಗೆ ಪ್ರಥಮರಾಗಿ ಉತ್ತೀರ್ಣರಾಗಿ 1971 ರಿಂದ 1987ರ ತನಕ ಕರ್ನಾಟಕ ಹೈಕೋರ್ಟಿನಲ್ಲಿ ನ್ಯಾಯವಾದಿಗಳಾಗಿದ್ದು, ನಂತರ 1987ರಲ್ಲಿ ದೆಹಲಿಯನ್ನು ತಮ್ಮ ಕಾರ್ಯ ಕ್ಷೇತ್ರವನ್ನಾಗಿಸಿ, ಸುಪ್ರೀಂ ಕೋರ್ಟಿನ ನ್ಯಾಯವಾದಿಗಳಾಗಿ ಪ್ರಸಿದ್ಧರಾದರು. 1990 ರಿಂದ 1995ರ ನಡುವೆ ಎರಡು ಅವಧಿಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಸಂಸ್ಥೆಯನ್ನು ಮುನ್ನಡೆಸಿದ್ದಾರೆ. ಅವರು ಅಧ್ಯಕ್ಷರಾಗಿದ್ದಾಗ ಅವರ ತಂಡದ ಹಲವಾರು ನಿಲುವುಗಳನ್ನು ತೀವ್ರವಾಗಿ ವಿರೋಧಿಸುತ್ತ ಬಂದವರಲ್ಲಿ ನಾನೂ ಒಬ್ಬ. ಚುನಾವಣೆಗಳಲ್ಲಿ ವಿರೋಧ ಪಕ್ಷಗಳಲ್ಲೇ ನಮ್ಮನ್ನು ನಾವು ತೊಡಗಿಸಿಕೊಳ್ಳುತ್ತಿದ್ದೆವಾದರೂ, ವೈಯಕ್ತಿಕವಾಗಿ ನಮ್ಮ ನಡುವೆ ಗೌರವದ ಭಾವವಿತ್ತು. ಕನ್ನಡದ ಮಕ್ಕಳಿಗೆ ಆದ್ಯತೆ ಬೇಕು ನಿಜ. ಕನ್ನಡಿಗರಿಗಾಗಿ ಶಿಕ್ಷಣ ಸಂಸ್ಥೆ ಇರಬೇಕು ಎಂಬುದೂ ನಿಜ. ಆದರೆ



ದೇಶದ ರಾಜಧಾನಿಯಲ್ಲಿನ ಉತ್ತಮ ಟ್ಯಾಲೆಂಟ್‌ಗಳ ಪ್ರಯೋಜನ ಆ ಮಕ್ಕಳಿಗೆ ಸಿಗುವಂತಾಗಬೇಕು, ಮತ್ತು ಸಂಸ್ಥೆ ಎಂದಾಗ ಉದ್ಯೋಗದಲ್ಲಿ ಹಿರಿತನದ ಅನುಕ್ರಮತೆ ಕ್ರಮಬದ್ಧವಾಗಿರಬೇಕು ಎಂಬುದು ಅವರ ವಾದ. ಕನ್ನಡ ಅಲ್ಪ ಸಂಖ್ಯಾತರ ಸಂಸ್ಥೆಯಾಗಿದ್ದರಿಂದ ಅದರ ಚುಕ್ಕಾಣಿ ಮತ್ತು ಆಯಕಟ್ಟಿನ ಹುದ್ದೆಗಳಲ್ಲಿ ಕನ್ನಡಿಗರೇ ಇರಬೇಕು ಎಂಬುದು ನಮ್ಮ ವಾದ. ಆದರೆ, ಸುಮಾರು 37 ವರ್ಷಗಳಲ್ಲಿ ಭಿನ್ನಮತ ಎಂದೂ ಪರಸ್ಪರ ಗೌರವಕ್ಕೆ, ಪ್ರೀತಿಗೆ ಅಡ್ಡಿಯಾಗಿರಲಿಲ್ಲ. 'ಬಹಳ ಒಳ್ಳೆಯ ಹುಡುಗ, ನನ್ ಜೊತೆಗೆ ಇರ್ತಿದ್ರೆ ಬಹಳಷ್ಟು ಅದ್ಭುತ ಕೆಲಸಗಳನ್ನು ಮಾಡಿ ತೋರಿಸುತ್ತಿದ್ದೆ, ಇವರ ಲೀಡರ್ ಸರಿ ಇಲ್ಲ' ಎಂದು ನನ್ನನ್ನು ತಮ್ಮ ಆತ್ಮೀಯರಿಗೆ ಪರಿಚಯಿಸುತ್ತಿದ್ದರು. ಯಾರ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತ ಪಡಿಸಬೇಕೋ ಅದನ್ನು ಜಾಣತನದಿಂದಲೇ ಮಾಡಿ ಬಿಡುತ್ತಿದ್ದರು.

ಕೆಲವು ವರ್ಷಗಳ ನಂತರ, ಅವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿ ಆಯ್ಕೆ ಆದಾಗ, ಅವರಿದ್ದ ಬೋರ್ಡಿನಲ್ಲಿ ಸದಸ್ಯನಾಗಿ ಕೆಲಸ ಮಾಡುವ ಅವಕಾಶ ನನಗೆ ಸಿಕ್ಕಿತ್ತು. ಸರ್ವ ಸದಸ್ಯರ ಸಭೆಯಾಗಲೀ, ಬೋರ್ಡಿನ ಚರ್ಚೆಗಳಾಗಲೀ, ವಿರೋಧಗಳನ್ನು ಯಥಾವತ್ತಾಗಿ ದಾಖಲಿಸುತ್ತಿದ್ದ ಶ್ರೀ ಎಸ್.ಕೆ. ಕುಲಕರ್ಣಿಯವರು ಅದಕ್ಕೆ ಸರಿಯಾದ ಮಾಹಿತಿ, ಅಳವಡಿಕೆ ಮತ್ತು ಅನುಷ್ಠಾನಗಳ ಮೂಲಕ ಎಲ್ಲಾ ವಿರೋಧಗಳನ್ನು ಸಂಸ್ಥೆಯ ಆರೋಗ್ಯಕರ ಬೆಳವಣಿಗೆಗೆ ಬಳಸುತ್ತಿದ್ದ ವಿಧಾನವನ್ನು ನೋಡಿ ಬಹಳಷ್ಟು ಕಲಿತಿದ್ದೇನೆ.

ದೆಹಲಿ ಕನ್ನಡದ ಚಟುವಟಿಕೆಗಳಲ್ಲಿ ಎರಡು ಧ್ರುವಗಳಾದ ಶ್ರೀ ಕೆ.ಆರ್. ನಾಗರಾಜ ಮತ್ತು ಶ್ರೀ ಎಸ್.ಕೆ. ಕುಲಕರ್ಣಿಯವರು ಅನುಕ್ರಮವಾಗಿ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಚುಕ್ಕಾಣಿ ಹಿಡಿದಿದ್ದರೂ, ಕುಲಕರ್ಣಿಯವರು ತಮ್ಮ ಕಾರ್ಯಕ್ಷೇತ್ರವನ್ನು ಶಿಕ್ಷಣ ಸಂಸ್ಥೆಗಷ್ಟೇ ಮೀಸಲಾಗಿಟ್ಟಿದ್ದರು. ಇಬ್ಬರೂ ಮಹಾನುಭಾವರು, ತಾವಿರುವ ಸಂಸ್ಥೆಯ ಘನತೆಯನ್ನು ಸದಾ ಕಾಪಾಡಿದವರೇ. ಸಂಘ ಸಂಸ್ಥೆಗಳನ್ನು ನಡೆಸುವ ನಿಟ್ಟಿನಲ್ಲಿ ಶ್ರೀ ಎಸ್.ಕೆ. ಕುಲಕರ್ಣಿಯವರಿಂದಲೂ ಬಹಳಷ್ಟು ಕಲಿತೆ. ಅವರ ಸಾಂದರ್ಭಿಕ ಮಾರ್ಗದರ್ಶನ ಶಿಕ್ಷಣ ಸಂಸ್ಥೆಯನ್ನು ಮುನ್ನಡೆಸುವಲ್ಲಿ ನನಗೂ ಬಹಳ ಒದಗಿ ಬಂದಿದೆ; ಅನುಕೂಲವಾಗಿದೆ.

ಅನಾವಶ್ಯಕವಾಗಿ ಯಾವುದೇ ವಿಚಾರಗಳಿಗೂ ತಲೆ ಹಾಕದ ಶ್ರೀ ಎಸ್.ಕೆ. ಕುಲಕರ್ಣಿಯವರು, ಎಲ್ಲಾ ಸಂದರ್ಭಗಳಲ್ಲೂ ಸರಿಯಾದ ಸಲಹೆ, ಮಾರ್ಗದರ್ಶನ ನೀಡುವ ಅತ್ಯಂತ ಹಿರಿಯ ಕನ್ನಡಿಗ. ಎಂಭತ್ತರ ದಶಕದಲ್ಲೂ ಸಮರ್ಥವಾಗಿ ನ್ಯಾಯ ಮಂಡನೆ ಮಾಡುತ್ತಿರುವ ಶ್ರೀ ಎಸ್.ಕೆ. ಕುಲಕರ್ಣಿಯವರು, ಹೆಚ್ಚು ಓಡಾಡುವುದಿಲ್ಲ. ಹಾಗಾಗಿ ಕನ್ನಡದ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಅವರ ದೇಹಾರೋಗ್ಯದ, ವಯೋ ಸಹಜ ಇತಿಮಿತಿಗಳೇನೇ ಇದ್ದರೂ, ಯಾವುದೇ ಕನ್ನಡಪರ ಸಮಸ್ಯೆಗಳ ಕುರಿತು ಚರ್ಚಿಸಹೋದರೂ, ಕುಲಕರ್ಣಿಯವರು ಆತ್ಮೀಯತೆಯಿಂದಲೇ ಬರಮಾಡಿಕೊಂಡು, ವಿಚಾರ ವಿಮರ್ಶಿಸಿ, ಸೂಕ್ತ ಮಾರ್ಗದರ್ಶನ ನೀಡಿ, ಸಮಸ್ಯೆ ಬಗೆಹರಿಸಿದ್ದನ್ನು ಕೃತಜ್ಞತೆಯಿಂದಲೇ ಸ್ಮರಿಸಿಕೊಳ್ಳುತ್ತೇನೆ.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲೇ ಕಲಿತ ಅವರಿಬ್ಬರ ಮಕ್ಕಳೂ ಇಂದು ತಮ್ಮ ತಮ್ಮ ಕ್ಷೇತ್ರದಲ್ಲಿ, ವೃತ್ತಿ ಜೀವನದಲ್ಲಿ ಶ್ರೇಯಸ್ಸನ್ನು ಗಳಿಸಿದ್ದಾರೆ, ಹಿರಿಯ ಪುತ್ರ ವಿನಯ್ ಕುಲಕರ್ಣಿ ಅಮೇರಿಕಾದಲ್ಲಿ ಸಾಫ್ಟ್‌ವೇರ್ ಉದ್ಯೋಗದಲ್ಲಿದ್ದರೆ, ಕಿರಿಯ ಮಗ ಅಂಕುರ್ ಕುಲಕರ್ಣಿಯವರು ನ್ಯಾಯವಾದಿಯಾಗಿ ತಮ್ಮದೇ ಲಾ–ಫರ್ಮ್ ನಡೆಸುತ್ತಿದ್ದಾರೆ. ನಾನು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷನಾಗಿದ್ದಾಗ, ಉಂಟಾದ ಕಾನೂನು ತೊಡಕುಗಳಲ್ಲಿ ಸಹಾಯ ಮಾಡಿದ ಶ್ರೀ ಎಸ್.ಕೆ. ಕುಲಕರ್ಣಿ ಹಾಗೂ ಅವರ ಸುಪುತ್ರ ಅಂಕುರ್ ಕುಲಕರ್ಣಿಯವರು, ಶಿಕ್ಷಣ ಸಂಸ್ಥೆಯ ಒಳಿತಿಗಾಗಿ ಮಾಡಿದ ಸಹಾಯವನ್ನು ನಾನೆಂದೂ ಮರೆಯುವಂತಿಲ್ಲ. ಸಂಸ್ಥೆಯ ಘನತೆಯನ್ನು ಸದಾ ಎತ್ತಿ ಹಿಡಿಯುವ ಕುಲಕರ್ಣಿಯವರ ಮಾರ್ಗದರ್ಶನ ಪಡೆದರೆ ಸಂಸ್ಥೆ ಎಂದಿಗೂ ಸೋಲದು.

ನಮ್ಮ ಅವಧಿಯಲ್ಲಿ, ಶಿಕ್ಷಣ ಸಂಸ್ಥೆಯ ಸಂವಿಧಾನ ತಿದ್ದುಪಡಿ ಸಮಿತಿಯ ಅಧ್ಯಕ್ಷರಾಗಿ, ಸಂವಿಧಾನದ ಬೈಲಾಗಳ ಸಮಗ್ರ ತಿದ್ದುಪಡಿ ಪೂರ್ಣಗೊಳಿಸಿದ್ದರೂ, ಅದಿನ್ನೂ ಸಹ ಸರ್ವ ಸದಸ್ಯರ ಸಭೆಗೆ ಬಾರದೇ ಇದ್ದುದರಿಂದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಸಾಗಬೇಕಾದ ಹಾದಿಯಲ್ಲಿ ಸಾಗದಿರುವುದಕ್ಕೆ ಕಾರಣವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

ದೆಹಲಿ ಕರ್ನಾಟಕ ಸಂಘದಲ್ಲಿ ಪ್ರತ್ಯಕ್ಷವಾಗಿ ಮುನ್ನೆಲೆಗೆ ಬಂದು ಕಾಣಿಸಿಕೊಳ್ಳದಿದ್ದರೂ, ಸಂಘದ ಸಂವಿಧಾನ ತಿದ್ದುಪಡಿ ಸಮಿತಿಯ ಸದಸ್ಯರಾಗಿ, ಕಟ್ಟಡ ಸಮಿತಿಯ ಸದಸ್ಯರಾಗಿ ಸಂಘದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ ಹಿರಿಯ ಕನ್ನಡಿಗರಿವರು. ಪ್ರಚಾರ ಪ್ರಿಯರಲ್ಲದ ಶ್ರೀ ಎಸ್.ಕೆ. ಕುಲಕರ್ಣಿಯವರು ಕರ್ನಾಟಕದಿಂದ ದೆಹಲಿಗೆ ಬಂದು, ರಾಜ್ಯದ ಹೌಸಿಂಗ್ ಬೋರ್ಡ್, ಬಿಡಿಎ, ಕರ್ನಾಟಕ ವಿದ್ಯುತ್ ಮಂಡಳಿ ಮುಂತಾದ ಬೃಹತ್ ಸಂಸ್ಥೆಗಳನ್ನು ಸುಪ್ರೀಂ ಕೋರ್ಟಿನಲ್ಲಿ ಪ್ರತಿನಿಧಿಸುವುದರ ಜೊತೆಗೆ ಕಾನೂನು ಕ್ಷೇತ್ರ, ವೃತ್ತಿ ಜೀವನದಲ್ಲಿ, ಬಹಳಷ್ಟು ಸಾಧನೆ ಮಾಡಿದ ದೆಹಲಿಯ ಯಶಸ್ವೀ ವಿಶಿಷ್ಟ ಕನ್ನಡಿಗ. ದೆಹಲಿ ಕರ್ನಾಟಕ ಸಂಘವು ಇವರಿಗೆ 2013 ರಲ್ಲಿ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸಿದೆ. ಇಂತಹ ಹಿರಿಯರ ಅನುಭವದ ಲಾಭ ದೆಹಲಿಯ ಕನ್ನಡಿಗರಿಗೆ ಸದಾ ಸಿಗುತ್ತಿರಲಿ, ಅವರ ಕೊಡುಗೆ ದೆಹಲಿಯ ಕನ್ನಡದ ಇತಿಹಾಸದ ಪುಟಗಳಲ್ಲಿ ಉಳಿಯಲಿ...



***ಸರವು ಕೃಷ್ಣ ಭಟ್***

# ಅಗಲಿದ ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯವಾದಿ, ಅಪ್ಪಟ ಕನ್ನಡಿಗ
## ಶ್ರೀ ಎಸ್.ಎಸ್. ಜವಳಿ ಅವರಿಗೆ ದೆಹಲಿ ಕನ್ನಡಿಗರಿಂದ ಭಾವಪೂರ್ಣ ಶ್ರದ್ಧಾಂಜಲಿ








ದಿನಾಂಕ 16.04.2025 ರಂದು ನಿಧನರಾದ ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ಶರತ್ ಎಸ್. ಜವಳಿ ಅವರಿಗೆ ದಿನಾಂಕ 09.05.2025 ರಂದು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ನುಡಿ ನಮನದ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಆರಂಭದಲ್ಲಿ, ಅಗಲಿದ ಹಿರಿಯ ಮುತ್ಸದ್ದಿ ಶ್ರೀ ಎಸ್.ಎಸ್. ಜವಳಿ ಅವರ ಭಾವಚಿತ್ರಕ್ಕೆ ಎಲ್ಲರೂ ಪುಷ್ಪಾರ್ಚನೆ ಮಾಡಿ ನಂತರ ಒಂದು ನಿಮಿಷ ಮೌನಾಚರಣೆಯೊಂದಿಗೆ ಗೌರವ ನಮನ ಸಲ್ಲಿಸಿದರು.

ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ಬಸವ ಇಂಟರ್‌ನ್ಯಾಷನಲ್ ಸೆಂಟರ್ ಹಾಗು ಇತರ ಸಂಘ ಸಂಸ್ಥೆಗಳಿಗೆ ಶ್ರೀ ಜವಳಿ ಅವರು ನೀಡಿದ ಸೇವೆಯನ್ನು ನೆನೆದರು. ತಾವು ಹಿಂದೆ ಸಂಘದ ಕಾರ್ಯದರ್ಶಿಯಾಗಿದ್ದಾಗ ಕಾರ್ಯಕಾರಿ ಸಮಿತಿಯಲ್ಲಿ ವಿಶೇಷ ಆಹ್ವಾನಿತರಾಗಿ ಶ್ರೀ ಜವಳಿ ಅವರು ಹಲವಾರು ಉತ್ತಮ ಸಲಹೆಗಳನ್ನು ಕೊಟ್ಟಿದ್ದರು ಮತ್ತು ಎಲ್ಲರೂ ಒಟ್ಟಾಗಿ ನಡೆದುಕೊಂಡು ಹೋಗಬೇಕೆಂದು ಕಿವಿಮಾತುಗಳನ್ನು ಹೇಳಿದ್ದರು, 2012ರಲ್ಲಿ ಅವರಿಗೆ ದೆಹಲಿ ಕರ್ನಾಟಕ ಸಂಘವು 'ವಿಶಿಷ್ಟ ಕನ್ನಡಿಗ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ. ಅವರ ಆತ್ಮಕ್ಕೆ ಮೋಕ್ಷ ಸಿಗಲಿ ಎಂದು ಎಲ್ಲರ ಪರವಾಗಿ ಶ್ರದ್ಧಾಂಜಲಿ ಅರ್ಪಿಸುತ್ತೇನೆ, ಅವರ ಕುಟುಂಬದವರಿಗೆ ಅನುಕೂಲವಾಗುವಂತೆ ಈದಿನ ಅವರ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಿದ್ದೇವೆ, ಮುಂದೆ ಅವರುಗಳು ಸಂಘದ ಕಾರ್ಯಕ್ರಮಗಳಿಗೆ ಬರಲು ಸದಾ ಸ್ವಾಗತವಿರುತ್ತದೆ. ಅವರೆಲ್ಲರಿಗೂ ಶ್ರೀ ಜವಳಿಯವರ ನಿಧನದ ದುಃಖವನ್ನು ಸಹಿಸಲು ಶಕ್ತಿಯನ್ನು ದೇವರು ನೀಡಲೆಂದು ಪ್ರಾರ್ಥಿಸುತ್ತೇನೆ ಎಂದರು.

ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ಬಿ.ಎಸ್. ಕಲ್ಲೂರ್ ಅವರು ಮಾತನಾಡಿ ಶ್ರೀ ಎಸ್.ಎಸ್. ಜವಳಿ ಅವರು ಮೂಲತಃ ಧಾರವಾಡದಿಂದ ಬಂದವರು, ದೆಹಲಿಯಲ್ಲಿ 48 ವರ್ಷಗಳ ಹಿಂದೆ ಸ್ಥಾಪನೆಗೊಂಡ ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ ಸಂಸ್ಥಾಪಕ ಅಧ್ಯಕ್ಷರಾಗಿದ್ದವರು. 1981 ರಿಂದ ತಮಗೆ ಅವರೊಂದಿಗೆ ಒಡನಾಟವಿತ್ತು ಎಂದರು. Mr. B.S. Kalloor added that he was a balanced person, every meeting with him was a celebration, he was a man who mixed well with all, most suitable for all occasion, he was like a light house and everyone would search for him. He was an ardent follower of Guru Basaveshwara and Basava Philosophy. He was a simple man, always respecting others and he was easily approachable and his giving response was spontaneous. I used to question him always, but the way he backed me and the fellow Delhi Kannadigas is something memorable, he used to take pride in our achievements and with his passing away, we have lost a gentlemen, gentle par excellence ಎಂದು ಹೇಳುತ್ತಾ ಶ್ರೀ ಎಸ್.ಎಸ್. ಜವಳಿಯವರ ಪತ್ನಿ ಶ್ರೀಮತಿ ಶಾಲಿನಿ ಅವರಿಗೆ ಹಾಗು ಮಗ ಶ್ರೀ ಕಿರೀಟ್ ಅವರಿಗೆ ಧನ್ಯವಾದಗಳನ್ನು ತಿಳಿಸಿ let us remember a very rare person Shri S.S. Javali with affection ಎಂದು ತಮ್ಮ ಮಾತನ್ನು ಮುಗಿಸಿದರು.

ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರೂ, ಜೆ.ಎನ್.ಯು.ನಲ್ಲಿ ಅಂತರರಾಷ್ಟ್ರೀಯ ಕಾನೂನು ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ. ವೆಂಕಟಾಚಲ ಜಿ. ಹೆಗಡೆಯವರು ಮಾತನಾಡಿ, ತಮಗೆ ಕಳೆದ ಮೂರು ದಶಕಗಳಿಂದ ಶ್ರೀ ಜವಳಿ ಅವರ ಪರಿಚಯವಿದ್ದು ತಾವೂ ಕಾನೂನು ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರಿಂದ ತಮ್ಮ ಬಗ್ಗೆ ಅವರಿಗೆ ಅಪಾರ ಪ್ರೀತಿ ಕಾಳಜಿ ಇತ್ತು ಎನ್ನುತ್ತಾ ಬಿ.ಸಿ. ಪಾವಟೆ ಅವರ ಹೆಸರಿನಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಸ್ಕಾಲರ್‌ಶಿಪ್ ಆರಂಭ ಮಾಡಿದ್ದನ್ನು, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ Law court / Moot Court ಆರಂಭಿಸಿದ್ದನ್ನು ನೆನೆದರು. ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ 50–60 ವರ್ಷಗಳ ನ್ಯಾಯವಾದಿಗಳಾಗಿ ಸೇವೆ ಸಲ್ಲಿಸಿದ್ದನ್ನು ಶ್ಲಾಘಿಸುತ್ತಾ he was one of the top senior lawyers and he dealt important cases related to Karnataka ಎಂದರು. ಅವರು ದೆಹಲಿಗೆ ಬಂದರೂ ಕೂಡ, ಊರಿನ ನಂಟನ್ನು ಮರೆಯಲಿಲ್ಲ, he was like a big banyan tree, we used to contact him for academic and legal matters and we always got his love and affection, when I heard the news of his death, it was a big shock. He was not an ordinary man, my tributes to him, ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.

ಹಿರಿಯ ದೆಹಲಿ ಕನ್ನಡಿಗ ಶ್ರೀ ಚೆನ್ನು ಎಸ್. ಮಠದ ಅವರು ಮಾತನಾಡಿ 1979ರಿಂದ ತಾವು ದೆಹಲಿಗೆ ಬಂದ ಮೇಲೆ ಶ್ರೀ ಜವಳಿಯವರ ಸಂಪರ್ಕವಾಯಿತು. ಅವರೊಬ್ಬ ಸರಳ ಸಜ್ಜನ ವ್ಯಕ್ತಿಯಾಗಿದ್ದರು, ವಿದ್ಯೆ ಹುದ್ದೆಯಿಂದ ಅಳೆಯದೇ ಎಲ್ಲರನ್ನು ನಗು ನಗುತ್ತಾ ಸಮಾನವಾಗಿ ಗೌರವಿಸುತ್ತಿದ್ದರು. ದೆಹಲಿ

ಕನ್ನಡಿಗರ ನ್ಯಾಯ ಸಮ್ಮತವಾದ ಸಮಸ್ಯೆಗಳಿಗೆ ಅವರು ಸ್ಪಂದಿಸುತ್ತಿದ್ದರು. ಬಸವ ಪಥದ ಅನುಯಾಯಿಯಾಗಿದ್ದರು. ಅವರು ಅತ್ಯಂತ ಸ್ನೇಹ ಜೀವಿಯಾಗಿದ್ದು ದೆಹಲಿಗೆ ಬಂದ ಹೊಸಬರಿಗೆ ಸ್ವಾಗತ ಕೂಟ ಮತ್ತು ತಾಯ್ನಾಡಿಗೆ ಮರಳುವವರಿಗೆ ಆತ್ಮೀಯ ಬೀಳ್ಕೊಡುಗೆ ಏರ್ಪಡಿಸುತ್ತಿದ್ದರು. He used to celebrate in a bigway and used to be a class of his own. ಅವರು ಎಲ್ಲಾ ಕೆಲಸ ಕಾರ್ಯಗಳನ್ನು ಅತ್ಯಂತ ದಕ್ಷತೆಯಿಂದ ಮಾಡುತ್ತಿದ್ದರು. 1986–87ರಲ್ಲಿ ಬಸವ ಇಂಟರ್‌ನ್ಯಾಷನಲ್ ಸೆಂಟರನ್ನು ಹುಟ್ಟು ಹಾಕಿ, ಬಸವ ಜಯಂತಿ ಆಚರಣೆ, ವಿಚಾರ ಸಂಕಿರಣ, ವಚನ ಗಾಯನ ಮುಂತಾದ ಕಾರ್ಯಕ್ರಮಗಳನ್ನು ಬಹಳ ಆಸಕ್ತಿಯಿಂದ ಆಯೋಜಿಸುತ್ತಿದ್ದರು. ದೆಹಲಿ ಕರ್ನಾಟಕ ಸಂಘದ ಸಲಹಾ ಮಂಡಳಿ ಸದಸ್ಯರಾಗಿಯೂ ಅವರು ಕಾರ್ಯ ನಿರ್ವಹಿಸಿದ್ದಾರೆ, ಅವರ ಅಗಲಿಕೆ ದೆಹಲಿ ಕನ್ನಡಿಗರಿಗೆ ತುಂಬಲಾರದ ನಷ್ಟವಾಗಿದ್ದು, ಅವರಿಗೆ ನನ್ನ ಗೌರವ ನಮನಗಳು ಎಂದರು.

ದೆಹಲಿ ಕನ್ನಡ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕರಾದ ಶ್ರೀ ಬಿ.ಆರ್. ಉಮೇಶ್ ಅವರು ಮಾತನಾಡಿ ಶ್ರೀ ಜವಳಿ ಅವರು ಒಬ್ಬ ದೊಡ್ಡ ವ್ಯಕ್ತಿತ್ವದವರಾಗಿದ್ದರು. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದರು. ಸುಪ್ರಿಂ ಕೋರ್ಟ್‌ನಲ್ಲಿ ನ್ಯಾಯವಾದಿಗಳಾದ ಶ್ರೀ ಗುರುದತ್ ಅಂಕೋಲೇಕರ್ ಅವರು ಶ್ರೀ ಜವಳಿ ಅವರ ಜೊತೆ ಜೂನಿಯರ್ ಆಗಿ 19–20 ವರ್ಷ ಕೆಲಸ ಮಾಡಿದ್ದನ್ನು ಸ್ಮರಿಸಿಕೊಳ್ಳುತ್ತಾ ಶ್ರೀ ಜವಳಿ ಅವರಿಗೆ ತಮ್ಮ ಊರಿನ ಬಗ್ಗೆ, ಕನ್ನಡಿಗರ ಬಗ್ಗೆ, ಕರ್ನಾಟಕದ ಬಗ್ಗೆ ಬಹಳ ಕಾಳಜಿ ಇತ್ತು. ಜಲವಿವಾದಗಳಲ್ಲಿ ಅವರು ಕರ್ನಾಟಕದ ಪರ ಸುಪ್ರಿಂಕೋರ್ಟ್‌ನಲ್ಲಿ ವಾದ ಮಂಡಿಸಿದ್ದರು, ಅವರ ಅಗಲಿಕೆ ಇಲ್ಲಿನ ಕನ್ನಡಿಗರಿಗೆ ಬಲು ದೊಡ್ಡ ನಷ್ಟವಾಗಿದೆ ಎಂದರು.

ಶ್ರೀ ಜವಳಿ ಅವರ ಜೊತೆ ಕಾರ್ಯ ನಿರ್ವಹಿಸಿದ ಇನ್ನೊರ್ವ ನ್ಯಾಯವಾದಿ ಶ್ರೀ ರಜತ್ ಅಜೀಮ್ ಅವರು ಮಾತನಾಡಿ when I joined Supreme Court in 2002, I got an opportunity to work with him for 11 years, every time he guided me professionally and personally. He was instrumental in starting Moot Court Camp in Karnataka University Law College in Hubli Dharwad and he played key role in bringing Supreme court judges there, I am grateful to his family for all the help and co-operation, May my senior rest in peace ಎಂದರು.

ದೆಹಲಿ ಕನ್ನಡಿಗ ಶ್ರೀ ನರಸಿಂಹ ಮೂರ್ತಿಯವರು ಮಾತನಾಡಿ ದೆಹಲಿ ಕನ್ನಡಿಗರೊಂದಿಗೆ ಶ್ರೀ ಜವಳಿ ಅವರು ಅವಿನಾಭಾವ ಸಂಬಂಧ ಹೊಂದಿದ್ದರು, ಅವರೊಬ್ಬ ದೊಡ್ಡ ವ್ಯಕ್ತಿತ್ವದವರಾಗಿದ್ದರು, He was a simple, humble person, and he used talk less. ನುಡಿದರೆ ಮುತ್ತಿನ ಹಾರದಂತಿರಬೇಕು ಎನ್ನುವ ವಚನದಂತೆ ಅವರ ಮಾತು ಸೊಗಸಾಗಿತ್ತು, ಬರುವಾಗ ಉಸಿರು ಇರುತ್ತದೆ, ಹೆಸರು ಇರುವುದಿಲ್ಲ, ಹೋಗುವಾಗ ಉಸಿರು ಇರುವುದಿಲ್ಲ ಹೆಸರಿರುತ್ತದೆ, ಶರಣರ ಬಾಳನ್ನು ಮರಣದಲ್ಲಿ ಕಾಣು ಎನ್ನುವುದಕ್ಕೆ ಅವರ ಅಂತಿಮ ಸಂಸ್ಕಾರಕ್ಕೆ ಬಂದಿದ್ದ ಜನರೇ ಸಾಕ್ಷಿ. ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬ ಬಸವಣ್ಣನವರ ವಚನ, ಬಸವ ತತ್ವಗಳ



ಸಂಪೂರ್ಣ ಪರಿಪಾಲನೆಯನ್ನು ಅವರು ತಮ್ಮ ಜೀವನದಲ್ಲಿ ಮಾಡುತ್ತಿದ್ದರು. ಕಿರಿಯರು ಬಂದರೆ ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿದ್ದರು. ಜಲವಿವಾದಗಳಲ್ಲಿ ಮತ್ತು ಕರ್ನಾಟಕದ ಇತರ ಕಾನೂನು ಸಮಸ್ಯೆಗಳಲ್ಲಿ ರಾಜ್ಯದ ಪರವಾಗಿ ವಾದ ಮಾಡಿ ಕನ್ನಡಿಗರ ಪರ ನಿಂತ ದೊಡ್ಡ ವ್ಯಕ್ತಿ ಶ್ರೀ ಜವಳಿಯವರಾಗಿದ್ದರು. ಅವರ ಆತ್ಮಕ್ಕೆ ಮೋಕ್ಷ ಸಿಗಲಿ ಎಂದರು.


ಶ್ರೀ ಜವಳಿ ಅವರ ಮಗ ಶ್ರೀ ಕಿರೀಟ್ ಅವರು ಮಾತನಾಡಿ my father was happy to represent Karnataka State professionally and in person in Delhi, I will continue his legacy and support his cause to help Kannadigas in Delhi. Me, my mother and my family members are grateful to the President and executive committee office bearers of Delhi Karnataka Sangha and also thank all the Kannadiga members and seniors present here for remembering my father and organising this condolence meeting ಎಂದರು.



ಕೊನೆಯಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರೂ ಮತ್ತು ಅಭಿಮತ ಮಾಸ ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ಕೆ.ಎಸ್. ಮೂರ್ತಿ ಅವರು ಶ್ರೀ ಎಸ್.ಎಸ್. ಜವಳಿ ಅವರ ಜೊತೆ ಎರಡು ಮೂರು ಬಾರಿ ಭೇಟಿ ಮಾಡಿದ್ದನ್ನು ನೆನೆಸಿಕೊಂಡು ಅವರ ಸಜ್ಜನಿಕೆ, ಸರಳತೆ ಮತ್ತು ಎಲ್ಲರನ್ನು ಪ್ರೀತಿಯಿಂದ, ಸಮಾನ ಗೌರವದಿಂದ ಕಾಣುವ ವ್ಯಕ್ತಿತ್ವವನ್ನು ಶ್ಲಾಘಿಸುತ್ತಾ, ಇಂದಿನ ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿದ ಶ್ರೀ ಜವಳಿ ಅವರ ಧರ್ಮ ಪತ್ನಿ ಶ್ರೀಮತಿ ಶಾಲಿನಿ, ಅವರ ಮಗ ಶ್ರೀ ಕಿರೀಟ್ ಮತ್ತು ಕುಟುಂಬದ ಎಲ್ಲಾ ಸದಸ್ಯರಿಗೆ ಕೃತಜ್ಞತೆ ತಿಳಿಸಿದರು. ಹಾಗೆಯೇ ಇಂದಿನ ಕಾರ್ಯಕ್ರಮದಲ್ಲಿ ಭಾಗಿಯಾದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿ, ಅಗಲಿದ ಶ್ರೀ ಎಸ್.ಎಸ್. ಜವಳಿ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘದಿಂದ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.❑


***ಅಭಿಮತ ವರದಿ***

## ಶ್ರದ್ಧಾಂಜಲಿ....



ಇಸ್ರೋದ ಮಾಜಿ ಅಧ್ಯಕ್ಷ ಮತ್ತು ಮಹತ್ವಾಕಾಂಕ್ಷೆಯ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಯ ಕರಡು ಸಮಿತಿಯ ಅಧ್ಯಕ್ಷರಾಗಿದ್ದ, ಭಾರತ ಸರ್ಕಾರದಿಂದ ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣ ಪ್ರಶಸ್ತಿಗಳನ್ನು ಪಡೆದ ವಿಜ್ಞಾನಿ ಹಾಗೂ ರಾಜ್ಯಸಭಾ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದ ಡಾ. ಕಸ್ತೂರಿರಂಗನ್ ಅವರು ದಿನಾಂಕ 25.04.2025 ರಂದು ನಿಧನರಾಗಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀಯುತರು ದೆಹಲಿ ಕರ್ನಾಟಕ ಸಂಘಕ್ಕೆ ಲಿಫ್ಟ್ ಅಳವಡಿಸಲು ಎಂಪಿ ಲ್ಯಾಡ್ ಫಂಡ್‌ನಿಂದ ಧನ ಸಹಾಯವನ್ನು ಮಾಡಿದ್ದನ್ನು ಇಲ್ಲಿ ಸ್ಮರಿಸುತ್ತಾ ಮೃತರ ಆತ್ಮಕ್ಕೆ ಮೋಕ್ಷವನ್ನು ಭಗವಂತನು ಕರುಣಿಸಲೆಂದು ಮತ್ತು ಅವರ ಕುಟುಂಬದವರಿಗೆ ಅವರ ಅಗಲಿಕೆಯ ದುಃಖವನ್ನು ಸಹಿಸಲು ಶಕ್ತಿ ನೀಡಲೆಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಸಂಘವು ಪ್ರಾರ್ಥಿಸುತ್ತದೆ.



ಎಚ್.ಎಸ್.ವಿ. ಎಂದೇ ಪ್ರಖ್ಯಾತರಾಗಿದ್ದ ಕನ್ನಡದ ಖ್ಯಾತ ಕವಿ, ನಾಟಕ ರಚನೆಕಾರರು ಮತ್ತು ಹಿರಿಯ ಸಾಹಿತಿ ಶ್ರೀ ಎಚ್.ಎಸ್. ವೆಂಕಟೇಶ ಮೂರ್ತಿ ಅವರು ದಿನಾಂಕ 30.05.2025 ರಂದು ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಇದು ಕನ್ನಡ ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ.

ಶ್ರೀಯುತರು ಈ ಹಿಂದೆ ಸಂಘವು ಆಯೋಜಿಸಿದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಮೃತರ ಆತ್ಮಕ್ಕೆ ಮೋಕ್ಷವನ್ನು ಭಗವಂತನು ಕರುಣಿಸಲೆಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘವು ಪ್ರಾರ್ಥಿಸುತ್ತದೆ.

**ಅಗಲಿದ ಈ ಇಬ್ಬರೂ ಹಿರಿಯ ಚೇತನರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ.**

# ಜನಕಪುರಿ ಕನ್ನಡ ಕೂಟದಿಂದ
# ಶ್ರೀ ರಾಮನವಮಿ ಆಚರಣೆ



ಜನಕಪುರಿ ಕನ್ನಡ ಕೂಟದಿಂದ ರಾಮನವಮಿಯನ್ನು 2025ರ ಮೇ 25 ಭಾನುವಾರದಂದು ನವದೆಹಲಿಯ ಸಿ–3, ಬ್ಲಾಕ್ ಜನಕಪುರಿಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಆಚರಿಸಲಾಯಿತು. ಬೆಳಿಗ್ಗೆ ಸುಮಾರು 10 ಗಂಟೆಗೆ ರಾಮನನ್ನು ಪ್ರತಿಷ್ಠಾಪಿಸಿ ಪೂಜಾ ಕೈಂಕರ್ಯವನ್ನು ಆರಂಭಿಸಲಾಯಿತು. ಕೂಟದ ಕಾರ್ಯದರ್ಶಿ ಶ್ರೀಯುತ ರಾಜನಾರಾಯಣ್ ದಂಪತಿಗಳು ಪೂಜೆಗೆ ಕುಳಿತಿದ್ದರು. ಪೂಜೆಯ ನಂತರ ರಾಮನನ್ನು ಕುರಿತು ಭಜನೆ ಕಾರ್ಯಕ್ರಮವನ್ನು ಜನಕಪುರಿ ಮಹಿಳಾ ಮಂಡಳಿಯ ಮಹಿಳೆಯರು ಒಂದು ಗಂಟೆಗೂ ಹೆಚ್ಚು ಸಮಯ ನಡೆಸಿಕೊಟ್ಟರು. ನಂತರ ಹೆಸರುಬೇಳೆ ಕೋಸಂಬರಿ ಹಾಗೂ ಪಾನಕವನ್ನು ಸಹ ಸಿದ್ಧಪಡಿಸಿ ಎಲ್ಲರಿಗೂ ಪ್ರಸಾದೋಪಾದಿಯಲ್ಲಿ ಹಂಚಿದರು.

ಇತ್ತೀಚೆಗೆ ಕೇಂದ್ರೀಯ ಜಲ ಆಯೋಗದಿಂದ ನಿವೃತ್ತಿ ಹೊಂದಿ ತಾಯ್ನಾಡಿಗೆ ಮರಳುತ್ತಿರುವ ಶ್ರೀಯುತ ಶೇಖರಪ್ಪರವರನ್ನು ಸನ್ಮಾನಿಸಲಾಯಿತು. ಜೊತೆಗೆ ಇತ್ತೀಚೆಗಷ್ಟೇ ದೆಹಲಿ ಕರ್ನಾಟಕ ಸಂಘವು ನಡೆಸಿದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕನ್ನಡ ಕೂಟದಿಂದ ಭಾಗವಹಿಸಿ ಪಂದ್ಯ ಶ್ರೇಷ್ಠನೆಂಬ ಬಿರುದು ಪಡೆದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಮುಕುಂದಮೂರ್ತಿಯವರನ್ನು ಸಹ ಹೂಗುಚ್ಛ ನೀಡಿ ಸತ್ಕರಿಸಲಾಯಿತು. ತದನಂತರ ಶೇಖರಪ್ಪನವರು ರಾಮನನ್ನು ಕುರಿತು ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು.

ಕಾರ್ಯಕ್ರಮಕ್ಕೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀಯುತ ಸಿ.ಎಂ. ನಾಗರಾಜ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಬಿ.ಕೆ. ಬಸವರಾಜು, ಗುರುಗ್ರಾಮ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಶಾಂತಕುಮಾರ್ ನಿಂಬಾಳ ಹಾಗೆಯೇ ನಮ್ಮ ಜನಕಪುರಿ ಕನ್ನಡ ಕೂಟಕ್ಕೆ ಸದಾ ಹಣಕಾಸಿನ ನೆರವು ನೀಡುವ ಡಾ. ಎಂ.ಎಸ್. ಶಶಿಕುಮಾರ್ ಹಾಗೂ ಅವರ ಧರ್ಮಪತ್ನಿ, ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆ ಅಭಿಮತದ ಪ್ರಧಾನ ಸಂಪಾದಕರಾದ ಶ್ರೀ ಕೆ.ಎಸ್. ಮೂರ್ತಿ ಮುಂತಾದವರು ಸಹ ಆಗಮಿಸಿ ಶ್ರೀ ರಾಮನ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಈ ಎಲ್ಲರನ್ನೂ ಜನಕಪುರಿ ಕನ್ನಡ ಕೂಟದ ವತಿಯಿಂದ ಸತ್ಕರಿಸಲಾಯಿತು. ಊಟದ ಖರ್ಚು ವೆಚ್ಚಗಳನ್ನು ಶ್ರೀಯುತ ನಾರಾಯಣ ಭಟ್ ಹಾಗೂ ಶ್ರೀಮತಿ ಸವಿತಾ ಭಟ್ ದಂಪತಿಗಳು ಭರಿಸಿದರು.

ಕಾರ್ಯಕ್ರಮದ ಎರಡನೇ ಅಂಗವಾದ ಜನಕಪುರಿ ಕನ್ನಡ ಕೂಟದ ವಾರ್ಷಿಕ ಸಾಮಾನ್ಯ ಸಭೆಯನ್ನು ಡಾ. ಅಶೋಕ ಎಂ. ಈಟಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಮೊದಲಿಗೆ ಕಾರ್ಯದರ್ಶಿ ಶ್ರೀ ರಾಜನಾರಾಯಣ್ ಅವರು ವರ್ಷವಿಡೀ ನಡೆದ ಕಾರ್ಯಕ್ರಮಗಳ ವರದಿಯನ್ನು ಓದಿದರು. ನಂತರ ಖಜಾಂಚಿ ಶ್ರೀ ಎಂ.ವಿ. ವೆಂಕಟೇಶ್‌ರವರು ವರ್ಷಾದ್ಯಂತ ನಡೆದ ಸಭೆ ಸಮಾರಂಭಗಳಲ್ಲಿ ತಗುಲಿದ ಖರ್ಚು ವೆಚ್ಚಗಳ ಸಂಪೂರ್ಣ ಮಾಹಿತಿಯನ್ನು ಸಭೆಗೆ ಒಪ್ಪಿಸಿದರು. ಕಳೆದ ವಾರ್ಷಿಕ ಸರ್ವ ಸದಸ್ಯರ ನಡಾವಳಿಗಳನ್ನು ಶ್ರೀಯುತ ಎನ್.ಆರ್. ಶ್ರೀನಾಥ್ ಅವರು ಅನುಮೋದಿಸಿದರು ಹಾಗೂ ಶ್ರೀ ಬಿ.ಕೆ. ಬಸವರಾಜು ಅವರು ಸಹಮತಿಸಿದರು. ಹಾಗೇನೇ, ವಾರ್ಷಿಕ ಲೆಕ್ಕ ಪತ್ರವನ್ನು ಶ್ರೀ ನರಸಿಂಹಮೂರ್ತಿ ಅನುಮೋದಿಸಿದರು ಮತ್ತು ಶ್ರೀಮತಿ ಸವಿತಾ ಭಟ್ ಅವರು ಸಹಮತಿಸಿದರು.

ತದನಂತರ ಸಭೆಯ ಒಪ್ಪಿಗೆ ಮೇರೆಗೆ ಜನಕಪುರಿ ಕನ್ನಡ ಕೂಟದ ಕಾರ್ಯಕಾರಿ ಸಮಿತಿಯಲ್ಲಿ ಕಾರ್ಯದರ್ಶಿ ಹಾಗೂ ಉಪಾಧ್ಯಕ್ಷರ ಬದಲಾವಣೆಗಳನ್ನು ಮಾಡಲಾಯಿತು. ನೂತನ ಕಾರ್ಯದರ್ಶಿಯಾಗಿ ಶ್ರೀಯುತ ಡಾ. ಬಸವರಾಜ್‌ರವರನ್ನು ಹಾಗೂ ಉಪಾಧ್ಯಕ್ಷರಾಗಿ ಡಾ. ಎಸ್.ಎಲ್. ಭಂಡಾರ್‌ಕರ್ ಅವರನ್ನು, ಹಾಗೆಯೇ ಶ್ರೀ ರಾಜನಾರಾಯಣ್ ಅವರನ್ನು ಮತ್ತು ಶ್ರೀ ದೇವಕಿನಂದ ಸಾವುಕಾರ್‌ರವರನ್ನು ಸದಸ್ಯರುಗಳನ್ನಾಗಿ ನೇಮಿಸಲಾಯಿತು. ಅದರ ಜೊತೆಗೆ ಕೂಟದ ಸುವರ್ಣ ಮಹೋತ್ಸವ ಆಚರಣೆಗೆ ಸಂಬಂಧಪಟ್ಟಂತೆ ವಿವಿಧ ಸಮಿತಿಗಳನ್ನು ರಚಿಸಲಾಯಿತು. ❑

***ಎಂ.ಎಸ್. ಲಾವಣ್ಯ ಬಸವರಾಜ್***



# ಸ್ವರಾಂಜಲಿ ಕಲಾ ತಂಡದ ಕಲಾವಿದೆ ಶ್ರೀಮತಿ ಜ್ಯೋತಿ ದೇವೇಂದ್ರಪ್ಪ ಅವರಿಗೆ ತಂಡದಿಂದ ಆತ್ಮೀಯ ಬೀಳ್ಕೊಡುಗೆ



**ನಾ ಹೊರಟೆ ತವರೂರಿಗೆ ಶೀರ್ಷಿಕೆ ಅಡಿಯಲ್ಲಿ** ಸ್ವರಾಂಜಲಿ ತಂಡವು ದೆಹಲಿಯ ಕನ್ನಡಿಗರಿಗೆ ಚಿರಪರಿಚಿತರಾಗಿರುವ ಹವ್ಯಾಸಿ ಕಲಾವಿದೆ ಮತ್ತು ದೆಹಲಿ ಕನ್ನಡತಿ ಶ್ರೀಮತಿ ಜ್ಯೋತಿ ದೇವೇಂದ್ರಪ್ಪ ಅವರು ಸುಮಾರು ದಶಕದಿಂದ ನೆಲೆಸಿದ ದೆಹಲಿಯನ್ನು ತೊರೆದು ತಾಯ್ನಾಡಿಗೆ ತೆರಳುತ್ತಿರುವ ಸಂಧರ್ಭದಲ್ಲಿ ಸ್ವರಾಂಜಲಿ ತಂಡದ ವತಿಯಿಂದ ವಿಭಿನ್ನವಾಗಿ ಅವರ ನೆಚ್ಚಿನ ಹಾಡುಗಳ ಸರಮಾಲೆಗಳೊಂದಿಗೆ ಆತ್ಮೀಯವಾಗಿ ಬೀಳ್ಕೊಡುಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸ್ವರಾಂಜಲಿಯ ಗಾಯಕರು ಸುಮಾರು ಎರಡು ಎರಡೂವರೆ ತಾಸುಗಳಲ್ಲಿ 18–20 ಜನಪ್ರಿಯ ಕನ್ನಡ ಚಲನಚಿತ್ರ ಗೀತೆಗಳನ್ನು ಹಾಡಿ ರಂಜಿಸಿದರು.

ಈ ಸಂಧರ್ಭದಲ್ಲಿ ಮಾತನಾಡಿದ ಶ್ರೀಮತಿ ಜ್ಯೋತಿ ದೇವೇಂದ್ರಪ್ಪ ಅವರು ಸ್ವರಾಂಜಲಿಯ ಇಂತಹ ಒಂದು ಆಯೋಜನೆಯಿಂದ ಹೃದಯ ತುಂಬಿದೆ ಮತ್ತು ಸ್ವರಾಂಜಲಿ ತಂಡದೊಂದಿಗೆ ಕಳೆದ ಪ್ರತಿ ಕ್ಷಣವು ಜೀವನದ ಅಪರೂಪದ ಕ್ಷಣ ಎಂದು ಹೃದಯ ತುಂಬಿ ನುಡಿದರು.

ದೆಹಲಿಯ ಕರ್ನಾಟಕ ಸಂಘದ ನೆಲಮಹಡಿಯಲ್ಲಿ ನಡೆದ ಕಾರ್ಯಕ್ರಮವನ್ನು ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರಾಧಾಕೃಷ್ಣರವರು ಉದ್ಘಾಟಿಸಿದರು. ಅನಂತರ ಸ್ವರಾಂಜಲಿ ತಂಡದ ಕಲಾವಿದರುಗಳು ತಮ್ಮ ಮಧುರ ಕಂಠದಿಂದ ಹಲವಾರು ಜನಪ್ರಿಯ ಹಾಡುಗಳನ್ನು ಹಾಡಿ ಮನರಂಜಿಸಿದರು. ತದನಂತರ ಶ್ರೀಮತಿ ಜ್ಯೋತಿ ದೇವೇಂದ್ರಪ್ಪರವರಿಗೆ ಗೌರವಾರ್ಪಣೆಯನ್ನು ಅರ್ಪಿಸಲಾಯಿತು. ನಂತರ ಎಲ್ಲರೂ ಸೇರಿ ಒಂದಷ್ಟು ಹರಟೆ ಮಾಡಿ ಭೋಜನ ಕೂಟದೊಂದಿಗೆ ಕಾರ್ಯಕ್ರಮವನ್ನು ಕೊನೆಗೊಳಿಸಲಾಯಿತು. ❑

***ಸ್ವರಾಂಜಲಿ,*** ನವದೆಹಲಿ

# ಸ್ವರಾಂಜಲಿ ತಂಡವು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ (ದೆಹಲಿ ಘಟಕ) ಸಹಕಾರದಿಂದ ಶ್ರೀ ಎಸ್. ಶೇಖರ್‌ರವರಿಗೆ ನೀಡಿದ ಆತ್ಮೀಯ ಬೀಳ್ಕೊಡುಗೆ





ಸ್ವರಾಂಜಲಿ ದೆಹಲಿ ತಂಡವು, ದೆಹಲಿಯಲ್ಲಿ ನೆಲೆಸಿರುವ ಹವ್ಯಾಸಿ ಕನ್ನಡಿಗ ಕಲಾಸಕ್ತರ ತಂಡ. ಸುಮಾರು ವರುಷಗಳಿಂದ ಕನ್ನಡ ಸಾಹಿತ್ಯ, ಸಂಗೀತ, ನೃತ್ಯ, ನಾಟಕ ಮುಂತಾದ ಕ್ಷೇತ್ರಗಳಲ್ಲಿ ದೆಹಲಿ ಕನ್ನಡಿಗರಿಗೆ ರಸದೌತಣ ನೀಡುತ್ತಾ ಬಂದಿದೆ. ಈ ಸಾರಿ, ಸ್ವರಾಂಜಲಿ ತಂಡವು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ (ದೆಹಲಿ ಘಟಕ) ಸಹಯೋಗದೊಂದಿಗೆ ವಿಭಿನ್ನ ರೀತಿಯಲ್ಲಿ ಅಂದರೆ, ಸ್ವರಾಂಜಲಿ ತಂಡದ ಒಬ್ಬ ಸದಸ್ಯರಾದ ಶ್ರೀ ಎಸ್. ಶೇಖರ್ ಅವರು ತಮ್ಮ ಸೇವಾವಧಿ ಪೂರ್ಣಗೊಳಿಸಿ ತವರು ರಾಜ್ಯವಾದ ಕರ್ನಾಟಕಕ್ಕೆ ತೆರಳಲು ಅಣಿಯಾಗಿರುವ ಸಂದರ್ಭದಲ್ಲಿ ಅವರಿಗೆ ವಿದಾಯ ಹೇಳುವ ಸಲುವಾಗಿ ರಸಸಂಜೆ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ದಿನಾಂಕ 18.05.2025ರ ಸಂಜೆ 05.30ರಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ಯಕ್ರಮ ಪ್ರಾರಂಭವಾಯಿತು. ಕಾರ್ಯಕ್ರಮದ ಕೇಂದ್ರ ಬಿಂದು ಶ್ರೀ ಎಸ್. ಶೇಖರ್ ಅವರು ದೆಹಲಿಯ ಕೇಂದ್ರೀಯ ಜಲ ಆಯೋಗದಲ್ಲಿ ಉಪ ನಿರ್ದೇಶಕರಾಗಿ ಸುಧೀರ್ಘ ಸೇವೆ ಸಲ್ಲಿಸಿ ಇತ್ತೀಚೆಗೆ ದಿನಾಂಕ 30.04.2025ರಲ್ಲಿ ನಿವೃತ್ತರಾದರು.

ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಶ್ರೀಯುತ ಸಂತೋಷ್ ಉಪಾಧ್ಯಾಯ ಅವರು ಮಾತನಾಡಿ, ಶ್ರೀ ಶೇಖರ್ ಅವರು ತುಂಬಾ ಉತ್ತಮ ಸಂಸ್ಕಾರದ ಮನೆತನದಿಂದ ಬಂದವರು, ಅರಿಷಡ್ವರ್ಗಗಳ ಪೈಕಿ ಸಿಟ್ಟನ್ನು ಬದಿಗಿಟ್ಟವರು ಮತ್ತು ಸದಾ ಎಲ್ಲರೊಂದಿಗೂ ಖುಷಿಯಿಂದ ಮಾತನಾಡುತ್ತಾ ತಮ್ಮ ಇಲಾಖೆಯಲ್ಲಿ ಸಾಕಷ್ಟು ಡ್ಯಾಂ ಡಿಸೈನ್ ಮಾಡುವುದರ ಮುಖಾಂತರ ದೇಶ ಸೇವೆ ಸಲ್ಲಿಸಿದವರು ಎಂದು ನೆನೆದರು ಮತ್ತು ಅವರ ಮುಂದಿನ ಜೀವನ ಸುಖಮಯವಾಗಿರಲಿ ಎಂದು ಹಾರೈಸಿದರು.

ಜೆ.ಎನ್.ಯು.ನಲ್ಲಿ ಕಾನೂನು ಪ್ರಾಧ್ಯಾಪಕರಾದ ಡಾ. ವೆಂಕಟಾಚಲ ಹೆಗಡೆಯವರು, ಶ್ರೀ ಬಿ.ಕೆ. ಬಸವರಾಜು, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರು, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಶ್ರೀ ಪ್ರಶಾಂತ್ ಕುಮಾರ್ ಅವರು, ಶ್ರೀ ಎಸ್. ಹರಿ ಪ್ರಿಯಾ, ಜಂಟೀ ಕಾರ್ಯದರ್ಶಿಗಳು ರಕ್ಷಣಾ ಇಲಾಖೆ, ಶ್ರೀ ಸಂತೋಷ್ ಉಪಾಧ್ಯಾಯ, ಗಣಕ ತಂತ್ರಜ್ಞರು, ಶ್ರೀ ಗಿರೀಶ್ ಗೌಡ ದೆಹಲಿ ಪೋಲಿಸ್ ಇಲಾಖೆ ಮತ್ತು ಶ್ರೀ ಎಸ್. ಶೇಖರ್ ಅವರು ಜೊತೆಯಾಗಿ ದೀಪ ಬೆಳಗಿಸುವುದರ ಮುಖಾಂತರ ಕಾರ್ಯಕ್ರಮವನ್ನು ಪ್ರಾರಂಭಮಾಡಲಾಯಿತು.

ಶ್ರೀಯುತ ಗಿರೀಶ್ ಗೌಡ ಅವರು ಮಾತನಾಡಿ, ಶ್ರೀ ಎಸ್. ಶೇಖರ್ ಅವರು ನಮ್ಮೆಲ್ಲರ ಪ್ರೀತಿಯ ಶೇಖರಪ್ಪಾ ಸರ್, ವಿದ್ಯೆಗೆ ವಿನಯ ಮುಖ್ಯ ಎಂಬ ಹಿರಿಯರ ವಾಣಿಯಂತೆ, ಉನ್ನತ ಹುದ್ದೆಯಲ್ಲಿ ಇದ್ದರೂ ಎಲ್ಲರೊಂದಿಗೆ ಬೆರೆತು ನಮ್ಮ ದೆಹಲಿ ಕನ್ನಡಿಗರಿಗೆ ಸಂಗೀತ ರಸದೌತಣ ನೀಡಿದ ನಮ್ಮ ಸ್ವರಾಂಜಲಿಯ ಜೂನಿಯರ್ ಡಾಕ್ಟರ್ ರಾಜಕುಮಾರ್ ಎಂದು ಹೊಗಳುವ ಮೂಲಕ ಮುಂದಿನ ಕಾರ್ಯಕ್ರಮಕ್ಕೆ ಆಹ್ವಾನಿಸಿದರು.

ಸ್ವರಾಂಜಲಿ ತಂಡದ ಎಲ್ಲಾ ಸದಸ್ಯರು ನಮ್ಮ ಸಂಸಾರ ಚಲನಚಿತ್ರದ ಟೈಟಲ್ ಹಾಡಾದ 'ನಮ್ಮ ಸಂಸಾರ ಆನಂದ ಸಾಗರ' ಹಾಡನ್ನು ಸಾಮೂಹಿಕವಾಗಿ ಹಾಡುವುದರ ಮುಖಾಂತರ ಸಂಗೀತ ರಸ ಸಂಜೆಗೆ ಚಾಲನೆ ದೊರೆಯಿತು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ (ದೆಹಲಿ ಘಟಕ) ಪರವಾಗಿ ಅದರ ಉಪಾಧ್ಯಕ್ಷರಾದ ಶ್ರೀ ರಾಜಕುಮಾರ್ ನೀಲೂರು ಅವರು ಭಾಗಿಯಾಗಿ, ಶ್ರೀ ಎಸ್. ಶೇಖರ್ ಅವರ ಶರಣ ಸಾಹಿತ್ಯ ಪರಿಷತ್‌ನೊಂದಿಗಿನ ನಂಟನ್ನು ನೆನೆದರು ಮತ್ತು ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎನ್. ಪಿ. ಚಂದ್ರಶೇಖರ್ ಮತ್ತು ಕಾರ್ಯದರ್ಶಿಗಳಾದ ಶ್ರೀ ಶಿವಪ್ಪ ಎಂ. ಅವರ ಸಂದೇಶವನ್ನು ತಿಳಿಸಿದರು.

ಶ್ರೀ. ಎಸ್. ಶೇಖರ್ ಅವರಿಗೆ ಸನ್ಮಾನ ಮತ್ತು ಕಾಣಿಕೆ ರೂಪದಲ್ಲಿ ಸ್ವರಾಂಜಲಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ (ದೆಹಲಿ ಘಟಕ), ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಮತ್ತು ಇತರರು ಅಭಿನಂದಿಸಿದರು.



ಶ್ರೀ ಎಸ್. ಶೇಖರ್ ಅವರ ಜೊತೆಗಿನ ಒಡನಾಟ ಮತ್ತು ತಮ್ಮ ಮನದಾಳದ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ನೆರೆದವರಿಗೆ ಅವಕಾಶ ಕಲ್ಪಿಸಲಾಯಿತು.

ಮೊದಲಿಗೆ ಮಾತನಾಡಿದ ಡಾ. ವೆಂಕಟಾಚಲ ಹೆಗಡೆಯವರು ತಮ್ಮ ಸಮಯದಲ್ಲಿ 1996 ರಿಂದ 2001 ಅವಧಿಯಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಾಕಷ್ಟು ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ತಮ್ಮದೇಯಾದ ಛಾಪು ಮೂಡಿಸಿದ ಶ್ರೀ ಎಸ್. ಶೇಖರ್ ಅವರು 1998ರಲ್ಲಿ ದೆಹಲಿ ಕರ್ನಾಟಕ ಸಂಘದ ಗೋಲ್ಡನ್ ಜುಬಿಲೀ ಕಾರ್ಯಕ್ರಮದ ಅಂಗವಾಗಿ ಡಾ. ರಾಜಕುಮಾರ್ ನೈಟ್ ಆಯೋಜಿಸುವಲ್ಲಿ ಅಪಾರ ಕೊಡುಗೆ ಕೊಟ್ಟಿದ್ದನ್ನು ಮತ್ತು ಸದಾ ಅವರ ಜಾನಪದ, ಭಾವಗೀತೆ ಹಾಡುಗಳನ್ನು ಕೇಳುವುದರಲ್ಲಿ ತಮಗಾದ ಸಂತೋಷವನ್ನು ಹಂಚಿಕೊಂಡರು. ನಂತರ ಮಾತನಾಡಿದ ಶ್ರೀ ಬಿ.ಕೆ. ಬಸವರಾಜು ಅವರು, ಶ್ರೀ ಶೇಖರ್ ಅವರು ನಮ್ಮೂರಿನವರು, ಎಲ್ಲರೊಂದಿಗೂ ಬೆರೆತು ನಡೆಯುವ ಗುಣದವರು ಮತ್ತು ಅವರು ತಮ್ಮ ಸಹೋದ್ಯೋಗಿಗಳ ಜೊತೆಗೆ ಸಾಕಷ್ಟು ಬಾರಿ ಬೆರೆತ ಕ್ಷಣಗಳನ್ನು ಹಂಚಿಕೊಂಡರು. ಹಿರಿಯರಾದ ಶ್ರೀಯುತ ಎನ್.ಎ. ಮಾಧವ ಅವರು ಮಾತನಾಡಿ, ತಮ್ಮ ಸಮಯದಲ್ಲಿ ಶ್ರೀ ಶೇಖರ್ ಅವರು ಒಬ್ಬ ಇಂಜಿನಿಯರ್ ಆಗಿ ದೇಶಕ್ಕೆ ಸಲ್ಲಿಸಿದ ಸೇವೆಯನ್ನು ನೆನೆದರು. ಶ್ರೀ ಎಸ್. ಕುಮಾರ್ ಅವರು ಶೇಕಪ್ಪ ಅವರನ್ನು ನೆನೆದ ರೀತಿಯೇ ಬೇರೆ ಇತ್ತು. ತಾವು ದೆಹಲಿಗೆ ಬಂದಿದ್ದಾಗ, ಶ್ರೀ ಶೇಖರ್ ಅವರು ಕರ್ನಾಟಕ ಸಂಘದ ಕಾರ್ಯಕ್ರಮದಲ್ಲಿ ಸ್ಫಟಿಕದಂತೆ ಓಡಾಡುತ್ತಾ ಎಲ್ಲರನ್ನೂ ವಿಚಾರಿಸುವ ಮತ್ತು ಕಾರ್ಯಕ್ರಮಗಳು ಚೆನ್ನಾಗಿ ನಡೆಯಲು ಅವರದೇ ಕೊಡುಗೆಯನ್ನು ನೀಡುತ್ತಿದ್ದದನ್ನು ನೆನೆದರು ಮತ್ತು ತಮ್ಮ ಆತ್ಮೀಯ ಭಾಂದವ್ಯ, ವಿಚಾರ ವಿನಿಮಯ, ವಿಷಯ ಸಂಗ್ರಹ ಎಲ್ಲವನ್ನೂ ನಾನು ವೈಯಕ್ತಿಕವಾಗಿ ಕಳೆದುಕೊಳ್ಳುತ್ತೇನೆ ಎಂಬ ದುಃಖವನ್ನು ವ್ಯಕ್ತಪಡಿಸುತ್ತಾ ಅವರ ಮುಂದಿನ ಜೀವನಕ್ಕೆ ಶುಭ ಹಾರೈಸಿದರು.

ಕಳೆದ ಏಪ್ರಿಲ್ 24 ರಂದು ಡಾ. ರಾಜ್‌ಕುಮಾರ್ ಅವರ ಜನ್ಮ ಜಯಂತಿಯ ಅಂಗವಾಗಿ, ಸ್ವರಾಂಜಲಿ ತಂಡವು ಎಸ್. ಶೇಖರ್ ಅವರು ಈ ಹಿಂದೆ ಡಾ. ರಾಜ್‌ಕುಮಾರ್ ಅವರೊಂದಿಗೆ ಒಡನಾಟ ಹೊಂದಿದ್ದ ಕಾರಣ "ಮುತ್ತುರಾಜ್ ಪ್ರಣಯ ಗೀತೆಗಳ ಸಂಭ್ರಮ" ಆಯ್ದ 19 ಪ್ರಣಯ ಗೀತೆಗಳ ಸರಮಾಲೆಯನ್ನು ಸ್ವರಾಂಜಲಿ ಕಲಾವಿದರು ನೆರೆದ ಪ್ರೇಕ್ಷರಿಗೆ ರಸದೌತಣವನ್ನು ನೀಡುವ ಮೂಲಕ ರಂಜಿಸಿದರು. ಹಾಡಿನಲ್ಲಿ ಭಾಗಿಯಾದವರು : ಶ್ರೀ ಎಸ್. ಶೇಖರ್, ಶ್ರೀ ಸಂತೋಷ್ ಉಪಾಧ್ಯಾಯ, ಡಾ. ಅಶೋಕ್ ಎಂ.ಈಟಿ, ಶ್ರೀಮತಿ ಮಂಜುಳಾ ನಾಗರಾಜ್, ಶ್ರೀಮತಿ ಶುಭಾದೇವಿಪ್ರಸಾದ್, ಶ್ರೀಮತಿ ಜಯಶ್ರೀ ಬಸವರಾಜು, ಶ್ರೀ ಎಸ್. ಕುಮಾರ್, ಶ್ರೀಮತಿ ನೇತ್ರಾ ಕುಮಾರ್, ಶ್ರೀ ಶಿವರಾಂ, ಶ್ರೀಮತಿ ಮಮತಾ ಶಿವರಾಂ ಮತ್ತು ಶ್ರೀ ನವೀನ್ ಕುಮಾರ್.ವಿ.

ಶ್ರೀ ವೆಂಕಟೇಶ್ ಅವರು ಕವನಗಳ ಮುಖಾಂತರವೂ ಮತ್ತು ಕುಮಾರಿ ಹರ್ಷಿತಾ ಕುಶಾಲಪ್ಪ ಅವರು ಸಮರ್ಪಕವಾದ ಸಾಲುಗಳನ್ನು ಉಚ್ಚರಿಸುವುದರ ಮುಖಾಂತರ ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆ ಜವಾಬ್ದಾರಿಯನ್ನು ಅತ್ಯಂತ ಸುಂದರವಾಗಿ ಮತ್ತು ಅಚ್ಚುಕಟ್ಟಾಗಿಯೂ ನಿಭಾಯಿಸಿದರು. ಕೊನೆಗೆ ರಸಮಯ ಸಂಗೀತ ಸಂಜೆಯ ಜೊತೆಗೆ ರುಚಿಯಾದ ಭೋಜನವನ್ನು ಸವಿದು ಎಲ್ಲರೂ ಖುಷಿಪಟ್ಟರು. ❑

***ಗಿರೀಶ್ ಗೌಡ***
ಸ್ವರಾಂಜಲಿ, ನವದೆಹಲಿ



# ಸ್ನೇಹಾದ ಸ್ನೇಹಿತೆಯರೆಲ್ಲಾ ಒಡಗೂಡಿ
# “ಮಾತೆಯರ ದಿನ” (ಅಮ್ಮಂದಿರ ದಿನ) ಆಚರಣೆ

ಸ್ನೇಹಾ ಅಸೋಸಿಯೇಷನ್‌ನ ಹೊಸ ಸಮಿತಿಯ ಮೊದಲನೆಯ ಕಾರ್ಯಕ್ರಮ “ಮಾತೆಯರ ದಿನ”ದಿಂದ ಪ್ರಾರಂಭಿಸಿ ಅವರ ಆಶೀರ್ವಾದ ಪಡೆದುಕೊಂಡ ಸೌಭಾಗ್ಯ ನಮ್ಮದಾಗಿತ್ತು. ಅಧ್ಯಕ್ಷೆ ಶ್ರೀಮತಿ ಆಶಾ ಕಾರಿಯಪ್ಪ ಅವರು ಕಾರ್ಯಕ್ರಮಕ್ಕೆ ಎಲ್ಲರನ್ನೂ ಸ್ವಾಗತಿಸಿದರು. ಶ್ರೀಮತಿ ರಂಗಮಣಿ ರಾವ್ ಅವರ ಮಧುರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಈ ಕಾರ್ಯಕ್ರಮಕ್ಕೆ ಹಲವು ಮಾತೆಯರೂ ಆಹ್ವಾನಿತರಾಗಿದ್ದರು.

ಕಾರ್ಯಕ್ರಮವನ್ನು ಮುಂದುವರಿಸುತ್ತಾ ಕೆಲವು ಸದಸ್ಯೆಯರು ಅಮ್ಮನ ಮೇಲಿನ ಗೀತೆಗಳನ್ನು, ಕವನಗಳನ್ನು ಹೇಳಿದರು. ಮತ್ತೆ ಕೆಲವು ಸದಸ್ಯೆಯರು ತಮ್ಮ ತಾಯಿಯೊಂದಿಗಿನ ಸವಿ ನೆನಪುಗಳನ್ನು ವ್ಯಕ್ತಪಡಿಸಿದರು. ಆಹ್ವಾನಿತರಾಗಿ ಬಂದ ಹಿರಿಯರಿಗೆ ನಮಿಸಿ ಆಶೀರ್ವಾದ ಪಡೆದುಕೊಂಡೆವು.

ಮೇ ತಿಂಗಳಿನ ಸುಡು ಬಿಸಿಲಿನ ಬೇಗೆಯಲ್ಲೂ ಎಲ್ಲ ಸ್ನೇಹಿತೆಯರು ಬಹಳ ಉತ್ಸಾಹದಿಂದ ಭಾಗಿಯಾಗಿ ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ದಿನಾಂಕ 21.05.2025ರಂದು ನಡೆದ ಕಾರ್ಯಕ್ರಮವನ್ನು ತುಂಬಾ ಸುಂದರವಾಗಿ ನಡೆಸಿಕೊಟ್ಟರು. ದೆಹಲಿಯಿಂದ ಹೊರಗಿದ್ದ ಸದಸ್ಯೆಯರೂ ಕೂಡಾ ಆನ್‌ಲೈನ್ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಶ್ರೀಮತಿ ರಾಧಾ ಕೌಜಲಗಿ ಅವರು ಲಂಡನ್ ನಿಂದ, ಶ್ರೀಮತಿ ಶೋಭಾ ಗೌಡ ಮತ್ತು ಶ್ರೀಮತಿ ನೈನಾ ಶೆಟ್ಟಿ ಬೆಂಗಳೂರಿನಿಂದ ಭಾಗಿಯಾಗಿ ತಾಯಿಯ ಬಗ್ಗೆ ಮಾತುಗಳನ್ನು ಹಾಗೂ ಹಾಡುಗಳನ್ನು ಹೇಳಿದರು. ಸುಡು ಬಿಸಿಲಿನ ಕಾರಣ ಸಂಘದ ಆರ್ಟ್ ಗ್ಯಾಲರಿಯಲ್ಲೇ ಗ್ರೂಪ್ ಫೋಟೋ ತೆಗೆದುಕೊಂಡು ಸವಿಯಾದ ಭೋಜನದೊಂದಿಗೆ ನಮ್ಮ ಕಾರ್ಯಕ್ರಮ ಮುಕ್ತಾಯವಾಯಿತು. ❑

***ರಾಜೇಶ್ವರಿ ಕಲ್ಲೂರ***
ಖಜಾಂಚಿ, ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್, ನವದೆಹಲಿ

Saujanya PRINTING PRESS

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ



ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ



B-303, Okhla Industrial Area,
Phase-I, New Delhi - 110020
Tel.: 011-40520770
Mob.: +91 - 9811104398, 9811604398
Email: saujanyapp2010@gmail.com,
hpgp2006@gmail.com

Delhi Karnataka Sangha Abhimata
June-2025, Vol. No.35, Issue No. 9, Price Rs.1/-
RNI Regn. No. 53405/91, DL-SW-01/4016/22-24
Date of Publication : June 8th / 9th, Posting Date : 10th / 11th, Total Pages-28 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: K.Sreenivasa Murthy

## ದಿನಾಂಕ 04.05.2025 ಮತ್ತು 11.05.2025 ರಂದು ನವದೆಹಲಿಯ ತಾಲ್ಕಟೋರಾ ಕ್ರಿಕೆಟ್ ಮೈದಾನದಲ್ಲಿ ಏರ್ಪಡಿಸಲಾದ ಸಂಘದ 2025 ರ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿದ ತಂಡಗಳು



ಶಿವಸಾಯಿ–ಎ



ಶಿವಸಾಯಿ–ಬಿ


ಶಿವಸಾಯಿ–ಸಿ


ಪೂಸಾ ವಾರಿಯರ್ಸ್



ಕರ್ನಾಟಕ ಏರ್ ಸ್ಟ್ರೈಕರ್ಸ್–ಎ



ದೆಹಲಿ ತುಳು ಸಿರಿ



ಡೆಲ್ಲಿ ಪವರ್ ಸ್ಟಾರ್ಸ್


ಮಯೂರ ಕೆಎಸ್‌ಟಿಡಿಸಿ